ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 23 ಶುಕ್ರವಾರ 2022

43

₹4

ದೂರವಾಣಿ: 2496520, 2496521, 2496526, 2496527, 2496528, FAX: 0821–2496525

ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ. ದೇವರಾಜ ಅರಸು ರಸ್ತೆ, Ph: 2428695

ಸಂಪುಟ: 43 | ಸಂಚಿಕೆ: 246 | ಪುಟಗಳು: 12

ಸುದ್ದಿ ಮತ್ತು ಫೋಟೋಗೆ: news@mysurumithra.com ಜಾಹೀರಾತು: ad@mysurumithra.com

ನಿರ್ಮಾಣ ಹಂತದಲ್ಲಿರುವ ಓವರ್‌ಹೆಡ್ ಟ್ಯಾಂಕ್ ಕಾಮಗಾರಿ ಪರಿಶೀಲನೆ



ಮೈಸೂರು, ಡಿ.22(ಆರ್‌ಕೆ)–ಮೈಸೂರಿನ ದೇವನೂರು ಬಡಾವಣೆಯ ಸಾತಗಳ್ಳಿ ಸಮೀಪ ನಿರ್ಮಿಸುತ್ತಿರುವ 15 ಲಕ್ಷ ಲೀಟರ್ ಸಾಮರ್ಥ್ಯದ ಓವರ್‌ಹೆಡ್ ವಾಟರ್ ಟ್ಯಾಂಕ್ ಕಾಮಗಾರಿಯನ್ನು ಮೇಯರ್ ಶಿವಕುಮಾರ್ ಹಾಗೂ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ಅವರು ಗುರುವಾರ ಪರಿಶೀಲಿಸಿದರು.

ಮೈಸೂರು ಮಹಾನಗರ ಪಾಲಿಕೆಯ 15ನೇ ಹಣಕಾಸು ಅನುದಾನದ 2.7 ಕೋಟಿ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಜಲ ಸಂಗ್ರಹಾಗಾರ ಕಾಮಗಾರಿಯ 6 ತಿಂಗಳ ಹಿಂದೆ ಆರಂಭವಾಗಿದ್ದು, ತ್ವರಿತಗತಿಯಲ್ಲಿ ಕೆಲಸ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚನೆ ನೀಡಿದ ಮೇಯರ್, ಗುಣಮಟ್ಟ ಕಾಪಾಡಿಕೊಳ್ಳುವಂತೆ ಸೂಚಿಸಿದರು.

ಅದೇ ರೀತಿ ಮಂಡಿ ಮೊಹಲ್ಲಾದ ಮೀನಾ ಬಜಾರ್‌ನ ಕಾಂತರಾಜು ಪಾರ್ಕ್ ಬಳಿ 2 ಕೋಟಿ ರೂ. ಅಂದಾಜು ವೆಚ್ಚದಲ್ಲಿ ನಿರ್ಮಿಸುತ್ತಿರುವ 10 ಲಕ್ಷ ಲೀಟರ್ ಸಾಮರ್ಥ್ಯದ ವಾಟರ್ ಟ್ಯಾಂಕ್ ಕಾಮಗಾರಿ ಸ್ಥಳಕ್ಕೂ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ನಕ್ಷೆಯನುಸಾರ ವಿನ್ಯಾಸಕ್ಕೆ ತಕ್ಕಂತೆ ಲೋಪವಿಲ್ಲದಂತೆ ನಿಗದಿತ ಅವಧಿಯೊಳಗಾಗಿ ಕೆಲಸ ಮುಗಿಸಿ ಸುತ್ತಲಿನ ಬಡಾವಣೆಗಳಿಗೆ ನೀರು ಪೂರೈಸಲು ಅನುವು ಮಾಡಿಕೊಡುವಂತೆ ಮೇಯರ್ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಎಕ್ಸಿಕ್ಯೂಟಿವ್ ಇಂಜಿನಿಯರ್ ರಂಜಿತ, ವಾಣಿ ವಿಲಾಸ ವಾಟರ್ ವರ್ಕ್ಸ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಸುವರ್ಣ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್ ಮುಸ್ತಾಫ ಹಾಗೂ ಇತರರು ಕಾಮಗಾರಿ ಪರಿಶೀಲನೆ ವೇಳೆ ಉಪಸ್ಥಿತರಿದ್ದರು.

ಮಂಡ್ಯ ಜಿಲ್ಲೆ ರಸ್ತೆ ದುರಸ್ತಿಗೆ ಕೇಳಿದ್ದು 81.85 ಕೋಟಿ ಕೊಟ್ಟ ಅನುದಾನ ಕೇವಲ 11.61 ಕೋಟಿ ರೂ.

ಎಂಎಲ್‌ಸಿ ದಿನೇಶ್ ಗೂಳಿಗೌಡ ಆರೋಪ



ಬೆಳಗಾವಿ,ಡಿ.22–ಮಂಡ್ಯ ಜಿಲ್ಲೆಯಾದ್ಯಂತ ಸುರಿದಂತಹ ಭಾರಿ ಮಳೆಯಿಂದಾಗಿ ರಸ್ತೆಗಳು ಸಾಕಷ್ಟು ಹಾನಿಗೊಳಪಟ್ಟಿದ್ದು, ಇವುಗಳ ದುರಸ್ತಿಗಾಗಿ ಒಟ್ಟು 81.85 ಕೋಟಿ ರೂ. ಅನುದಾನ ಬೇಕಿದೆ ಎಂದು ಸರ್ಕಾರಕ್ಕೆ ಜಿಲ್ಲಾಡಳಿತ ಮನವಿ ಮಾಡಿತ್ತು. ಆದರೆ, ಈಗ ರಾಜ್ಯ ಹೆದ್ದಾರಿಗೆ 4.80 ಕೋಟಿ ರೂ. ಹಾಗೂ ಜಿಲ್ಲಾ ಮುಖ್ಯ ರಸ್ತೆಗಳ ನಿರ್ವಹಣೆಗೆ 6.81 ಕೋಟಿ ರೂ. ಸೇರಿ ಒಟ್ಟು ಕೇವಲ 11.61 ಕೋಟಿ ರೂ. ಮಾತ್ರ ಬಿಡುಗಡೆ ಮಾಡಿದೆ ಎಂದು ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ತಿಳಿಸಿದ್ದಾರೆ.

ಅಂತೂ ಶ್ರೀ ಮಲೆ ಮಹದೇಶ್ವರ ರಸ್ತೆ ಕಾಮಗಾರಿಗೆ ಮೇಯರ್ ಚಾಲನೆ



ಮೈಸೂರು, ಡಿ.22(ಆರ್‌ಕೆ)–ಗುಂಡಿಮಯವಾಗಿದ್ದ ಮೈಸೂರಿನ ನಜರ್‌ಬಾದ್ ಠಾಣೆ ಸರ್ಕಲ್‌ನಿಂದ ಡೈರಿಸರ್ಕಲ್‌ವರೆಗೆ, ಶ್ರೀ ಮಲೆ ಮಹದೇಶ್ವರ ರಸ್ತೆ ಡಾಂಬರೀಕರಣ ಕಾಮಗಾರಿಗೆ ಮೇಯರ್ ಶಿವಕುಮಾರ್ ಗುದ್ದಲಿ ಪೂಜೆ ನೆರವೇರಿಸಿದರು.

ಪಾಲಿಕೆ ಅನುದಾನದಲ್ಲಿ ಕೈಗೆತ್ತಿಕೊಂಡಿರುವ ಸುಮಾರು 1 ಕಿ.ಮೀ. ರಸ್ತೆಗೆ ಆಸ್ಫಾಲ್ಟಿಂಗ್ ಮಾಡುವ ಕಾಮಗಾರಿಯನ್ನು 1 ಕೋಟಿ ರೂ.ಗಳಿಗೆ ಟೆಂಡರ್ ಮೂಲಕ ಗುತ್ತಿಗೆ ನೀಡಲಾಗಿದೆ. ನಜರ್‌ಬಾದಿನ ಪೊಲೀಸ್ ಠಾಣೆಯಿಂದ ಡೈರಿ ಸರ್ಕಲ್‌ವರೆಗೆ ಹಾಲಿ ಇರುವ ರಸ್ತೆಯನ್ನು ಆಸ್ಫಾಲ್ಟಿಂಗ್ ಮತ್ತು ಡಾಂಬರೀಕರಣ ಕಾಮಗಾರಿಗೆ ಕಡೆಗೂ ಚಾಲನೆ ದೊರೆತಿದೆ. ಉಪಮೇಯರ್ ಡಾ.ರೂಪಾ, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಸೂಪರಿಂಟೆಂಡಿಂಗ್ ಇಂಜಿನಿಯರ್ ಮಹೇಶ್, ಎಕ್ಸಿಕ್ಯೂಟಿವ್ ಇಂಜಿನಿಯರ್ ರಂಜಿತ ಹಾಗೂ ಇತರ ಅಧಿಕಾರಿಗಳು ಈ ಸಂದರ್ಭ ಉಪಸ್ಥಿತರಿದ್ದರು. ಕಾಮಗಾರಿ ತ್ವರಿತಗತಿಯಲ್ಲಿ ಮಾಡುವ ಉದ್ದೇಶದಿಂದ ಈ ರಸ್ತೆಯ ವಾಹನ ಸಂಚಾರವನ್ನು ಸ್ಥಗಿತಗೊಳಿಸಿ ಬದಲಿ ಮಾರ್ಗ ಕಲ್ಪಿಸುವಂತೆ ಕೋರಲಾಗಿದ್ದು, ಈ ಬಗ್ಗೆ ಸೂಕ್ತ ಕ್ರಮ ವಹಿಸಲಾಗುವುದು ಎಂದು ಪೊಲೀಸ್ ಆಯುಕ್ತರು ತಿಳಿಸಿದ್ದಾರೆ ಎಂದು ಮೇಯರ್ ಹೇಳಿದ್ದಾರೆ.

ಮಾರ್ಗ ಬದಲಾವಣೆ: ಈ ಕಾಮಗಾರಿ ಹಿನ್ನೆಲೆಯಲ್ಲಿ ಸಂಚಾರ ಮಾರ್ಗ ಬದಲಿಸಿದ್ದು, ನಜರ್‌ಬಾದ್ ಪೊಲೀಸ್ ಠಾಣೆ ಬಳಿ ವೃತ್ತದಿಂದ ಕಾರಂಜಿ ಕೆರೆ ರಸ್ತೆ, ಲಲಿತ ಮಹಲ್ ರಸ್ತೆ, ಕುರುಬಾರಹಳ್ಳಿ ವೃತ್ತ, ಸಿದ್ಧಾರ್ಥ ಸಂಚಾರ ಠಾಣೆ, ವಿಹಾರ ಮಾರ್ಗದಲ್ಲಿ ಬನ್ನೂರು ರಸ್ತೆ ತಲುಪಬೇಕು. ಈ ಮಾರ್ಗದಲ್ಲೇ ಆ ಕಡೆಯಿಂದಲೂ ಸಂಚರಿಸಬಹುದು.

ಅಂಬೇಡ್ಕರ್ ಅಭಿವೃದ್ಧಿ ನಿಗಮದ ವ್ಯವಸ್ಥಾಪಕಿ ವರ್ಗಾವಣೆಗೆ ಮನವಿ



ಮೈಸೂರು, ಡಿ.22–ಡಾ. ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕಿ ಸುಧಾಮಣಿಯವರು ದುರ್ವರ್ತನೆ ತೋರುತ್ತಿದ್ದು, ಅವರನ್ನು ವರ್ಗಾವಣೆ ಮಾಡಬೇಕೆಂದು ಚಾಮುಂಡೇಶ್ವರಿ ಕ್ಷೇತ್ರದ ಫಲಾನುಭವಿಗಳು ಹುಯಿಲಾಳು ರಾಮಸ್ವಾಮಿ ನೇತೃತ್ವದಲ್ಲಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರಿಗೆ ಮನವಿ ಸಲ್ಲಿಸಿದರು.

ಸುಧಾಮಣಿಯವರು ನಿಗಮದಲ್ಲಿ ಯಾವುದೇ ಕೆಲಸ ಮಾಡದೇ ತಮಗೆ ಇಚ್ಛೆ ಬಂದಂತೆ ನಡೆದುಕೊಳ್ಳುತ್ತಿದ್ದಾರೆ. ಸರ್ಕಾರದಿಂದ ಮಂಜೂರಾದ ಸವಲತ್ತುಗಳನ್ನು ಫಲಾನುಭವಿಗಳಿಗೆ ತಲುಪಿಸದೇ ವಿನಾ ಕಾರಣ ಅಲೆದಾಡಿಸುತ್ತಿದ್ದಾರೆ. ನಿಗಮದಿಂದ ದೊರೆಯಬಹುದಾದ ಸೌಲಭ್ಯಗಳ ಬಗ್ಗೆಯೂ ಸರಿಯಾಗಿ ಮಾಹಿತಿ ನೀಡುತ್ತಿಲ್ಲ. ಮಹಿಳಾ ಸಂಘದ ಸದಸ್ಯರನ್ನು ಏರು ಧನಿಯಲ್ಲಿ ಮಾತನಾಡಿ ಕಿರಿಕಿರಿ ಉಂಟು ಮಾಡುತ್ತಿದ್ದಾರೆ. ಹೀಗಾಗಿ ಅವರನ್ನು ವರ್ಗಾವಣೆ ಮಾಡಬೇಕೆಂದು ಮನವಿಯಲ್ಲಿ ಕೋರಲಾಗಿದೆ.

ಈ ವೇಳೆ ಎಸ್‌ಸಿ, ಎಸ್‌ಟಿ ಹಿತರಕ್ಷಣಾ ಸಮಿತಿ ಸದಸ್ಯ ಧನಗಳ್ಳಿ ಸ್ವಾಮಿ, ರಾಷ್ಟ್ರೀಯ ಉಪಾಧ್ಯಕ್ಷ ದೇವರಾಜು, ಗ್ರಾಪಂ ಸದಸ್ಯರಾದ ಪಿ.ಮಹದೇವು, ಡಿ.ಕೆ.ಈಶ್ವರ್, ಮುಖಂಡರಾದ ಜಯರಾಮು, ಮಹಾದೇವು ಮುಂತಾದವರಿದ್ದರು.



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಚುಂಚಶ್ರೀ ಗೌಡತಿಯರ ಬಳಗದ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಮಾಜ ಸೇವೆಗಾಗಿ ಹೇಮ ನಂದೀಶ್ ಹಾಗೂ ಮಂಜುಳಾ ಭದ್ರೇಗೌಡ ಅವರನ್ನು ಸನ್ಮಾನಿಸಲಾಯಿತು. ಈ ಬಳಗದ ಅಧ್ಯಕ್ಷೆ ಸರೋಜಾ, ಸಮಿತಿ ನಿರ್ದೇಶಕರು ಉಪಸ್ಥಿತರಿದ್ದರು.

ಕ್ರಿಸ್‌ಮಸ್, ಹೊಸ ವರ್ಷದ ಸಂಭ್ರಮ: ಮೈಸೂರಿಗೆ ಭಾರೀ ಪ್ರವಾಸಿಗರ ದಂಡು ಆಗಮನದ ನಿರೀಕ್ಷೆ

● ಇಂದಿನಿಂದ ಜ.2ರವರೆಗೆ ರೂಂಗಳು ಬಹುತೇಕ ಭರ್ತಿ ● 2 ವರ್ಷದ ಬಳಿಕ ಹೋಟೆಲ್ ಉದ್ಯಮ ಚೇತರಿಕೆ

ಎಂ.ಟಿ.ಯೋಗೇಶ್‌ಕುಮಾರ್

ಮೈಸೂರು,ಡಿ.22–ಕೊರೊನಾ ಹಿನ್ನೆಲೆಯಲ್ಲಿ ಎರಡು ವರ್ಷದಿಂದ ಹೊಸ ವರ್ಷದ ಸಂಭ್ರಮಾಚರಣೆಯಿಂದ ದೂರವುಳಿದಿದ್ದ ಜನರು ಈ ಬಾರಿ ಹೊಸ ವರ್ಷವನ್ನು ಸಂಭ್ರಮದಿಂದ ಬರಮಾಡಿಕೊಳ್ಳಲು ನಿರ್ಧರಿಸಿದ್ದು, ಸಾಂಸ್ಕೃತಿಕ ನಗರಿ ಮೈಸೂರಿಗೆ ಡಿ.23ರಿಂದ ಜ.2ರವರೆಗೆ 10 ದಿನಗಳ ಕಾಲ ಪ್ರವಾಸಿಗರ ದಂಡೇ ಹರಿದು ಬರುವ ನಿರೀಕ್ಷೆಯಿದೆ.



ಕೊರೊನಾ ಹಾವಳಿಯಿಂದ ಜನರ ಸಂಭ್ರಮಾಚರಣೆಗೆ ಇದ್ದ ಆತಂಕ ನಿವಾರಣೆಯಾಗಿ, ಎರಡು ವರ್ಷಗಳ ನಂತರ ಮೈಸೂರಲ್ಲಿ ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಸಂಭ್ರಮಾಚರಿಸಲು ಹೊರ ಜಿಲ್ಲೆ ಮತ್ತು ರಾಜ್ಯಗಳಿಂದ ಪ್ರವಾಸಿಗರು ಭಾರೀ ಸಂಖ್ಯೆಯಲ್ಲಿ ಬರುವ ಸಾಧ್ಯತೆ ಹೆಚ್ಚಿದೆ. ದೇಶ–ವಿದೇಶಗಳ ಪ್ರವಾಸಿಗರನ್ನು ಸೆಳೆಯಲು ಇಲ್ಲಿನ ಹೋಟೆಲ್‌ಗಳು, ಮನರಂಜನಾ ಸ್ಥಳಗಳು ಸಂಪೂರ್ಣ ಸಜ್ಜಾಗಿದ್ದು, ಮುಂದಿನ 10 ದಿನಗಳಲ್ಲಿ ಮೈಸೂರು ಜನ ಹಾಗೂ ವಾಹನ ದಟ್ಟಣೆಯಿಂದ ಕೂಡಿರುವುದು ಖಚಿತವಾಗಿದೆ. ಈಗಾಗಲೇ ಮೈಸೂರಲ್ಲಿರುವ ಲಾಡ್ಜ್‌ಗಳಲ್ಲಿ ಬಹುತೇಕ ರೂಮ್‌ಗಳು ಬುಕ್ ಆಗಿದ್ದು, ಇನ್ನೆರಡು ದಿನದಲ್ಲಿ ಶೇ.100ರಷ್ಟು ರೂಮ್‌ಗಳು ಬುಕ್ ಆಗಬಹುದು ಎಂದು ನಿರೀಕ್ಷಿಸಲಾಗಿದೆ.

ಪ್ರತಿ ವರ್ಷವೂ ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಸಂಭ್ರಮದಲ್ಲಿ ಮಿಂದೇಳಲು ದೇಶದ ವಿವಿಧೆಡೆಯಿಂದ ಮೈಸೂರಿಗೆ ಬರುತ್ತಿದ್ದ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದ್ದು, ಕೊರೊನಾಗೂ ಮುನ್ನ 2019ರಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ವೇಳೆ ಮೈಸೂರಲ್ಲಿನ ವಸತಿಗೃಹಗಳಲ್ಲಿ ಶೇ.70ರಿಂದ 75ರಷ್ಟು ರೂಮ್‌ಗಳು ಭರ್ತಿಯಾಗಿದ್ದವು. ಆದರೆ, ಈ ಬಾರಿ ಈಗಾಗಲೇ ಶೇ.80ರಷ್ಟು ರೂಮ್‌ಗಳು ಬುಕ್ ಆಗಿರುವುದು ಹೋಟೆಲ್ ಉದ್ಯಮಿಗಳಲ್ಲಿ ಸಂತಸವನ್ನುಂಟು ಮಾಡಿದೆ.

ಮೈಸೂರಲ್ಲಿ 10,500 ರೂಮ್‌ಗಳಿವೆ: ಮೈಸೂರಿನಲ್ಲಿ ಲಾಡ್ಜ್ ಸೌಲಭ್ಯವಿರುವ 425 ಹೋಟೆಲ್‌ಗಳು, 200 ಸಸ್ಯಾಹಾರಿ ಹೋಟೆಲ್, 130 ಮಾಂಸಾಹಾರಿ ಹೋಟೆಲ್, 60 ಬಾರ್ ಅಂಡ್ ರೆಸ್ಟೋರೆಂಟ್, 25 ಸ್ಟಾರ್ ಕೆಟಗಿರಿ ಹೋಟೆಲ್‌ಗಳಿದ್ದು, ಅವುಗಳಲ್ಲಿ ವಿವಿಧ ಬಗೆಯ ಲಾಡ್ಜ್‌ಗಳಿಂದ ಒಟ್ಟು 10,500 ರೂಮುಗಳಿವೆ. 600 ರೂ. ನಿಂದ 30 ಸಾವಿರ ರೂ.ವರೆಗೆ ದರ ನಿಗದಿ ಮಾಡಲಾಗಿದೆ. ಎಲ್ಲಾ ಕ್ಯಾಟಗಿರಿ ರೂಮ್‌ಗಳನ್ನು ಬುಕ್ ಮಾಡುವಲ್ಲಿ ಜನರು ಆಸಕ್ತಿ ತೋರಿದ್ದಾರೆ. ಹೊಸ ವರ್ಷವನ್ನು ಸಂಭ್ರಮದಿಂದ ಕಳೆಯಲು ವಿವಿಧೆಡೆಯಿಂದ ಪ್ರವಾಸಿಗರು ರೂಮ್‌ಗಳನ್ನು ಕಾಯ್ದಿರಿಸಲು ಮುಂದಾಗುತ್ತಿರುವುದರಿಂದ ಬೇಡಿಕೆ ಹೆಚ್ಚಾಗಿದೆ.

60 ಕಡೆ ಸಂಭ್ರಮಾಚರಣೆ: ಮೈಸೂರಲ್ಲಿ 40 ಹೋಟೆಲ್‌ಗಳು ಹಾಗೂ 20 ಕ್ಲಬ್‌ಗಳಲ್ಲಿ ಹೊಸ ವರ್ಷದ ಸಂಭ್ರಮಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ವಿವಿಧ ಮುಖಬೆಲೆಯ ಟಿಕೆಟ್ ಪಡೆದು ಪಾರ್ಟಿಗಳಲ್ಲಿ ಪಾಲ್ಗೊಳ್ಳಲು ಅವಕಾಶ ನೀಡಲಾಗಿದ್ದು, ವ್ಯವಸ್ಥೆಗೆ ಅನುಗುಣವಾಗಿ ಪ್ರವೇಶ ಶುಲ್ಕ ನಿಗದಿ ಮಾಡಲಾಗಿದೆ. ಹೊಸ ವರ್ಷದ ಪಾರ್ಟಿಗಳ ಟಿಕೆಟ್ ಕಾಯ್ದಿರಿಸುವ ಪ್ರಕ್ರಿಯೆಯೂ ಭರದಿಂದ ಸಾಗುತ್ತಿದೆ.

ಅತ್ಯುತ್ತಮ ಪ್ರತಿಕ್ರಿಯೆ

“ ಕೊರೊನಾದಿಂದ 2 ವರ್ಷ ಹೊಸ ವರ್ಷದ ಹಾಗೂ ಕ್ರಿಸ್‌ಮಸ್ ಸಂಭ್ರಮ ಮೈಸೂರಲ್ಲಿ ಇರಲಿಲ್ಲ. ಈ ಬಾರಿ ಜನರಿಂದ ನಿರೀಕ್ಷೆಗೂ ಮೀರಿದ ಪ್ರತಿಕ್ರಿಯೆ ವ್ಯಕ್ತವಾಗಿದೆ. ಹೊಸ ವರ್ಷಕ್ಕೆ 10 ದಿನ ಬಾಕಿ ಇರುವಾಗಲೇ ಮೈಸೂರಲ್ಲಿರುವ ವಸತಿಗೃಹಗಳ 10,500 ಕೊಠಡಿಗಳಲ್ಲಿ ಶೇ.85ರಷ್ಟು ಬುಕ್ ಆಗಿವೆ. ಈ ಬಾರಿ ಶೇ.100ರಷ್ಟು ಕೊಠಡಿಗಳು ಬುಕ್ ಆಗುವುದು ಖಚಿತವಾಗಿದ್ದು, ಹೋಟೆಲ್ ಉದ್ಯಮ ಚೇತರಿಸಿಕೊಳ್ಳುವಂತಾಗಿದೆ. 2019ರ ಆಚರಣೆಗೆ ಹೋಲಿಸಿದರೆ, ಈ ಬಾರಿ ಶೇ.20ರಷ್ಟು ಪ್ರವಾಸಿಗರು ಹೆಚ್ಚಾಗಿ ಮೈಸೂರಿಗೆ ಬರುತ್ತಿದ್ದಾರೆ.

–ಸಿ.ನಾರಾಯಣಗೌಡ, ಅಧ್ಯಕ್ಷರು, ಜಿಲ್ಲಾ ಹೋಟೆಲ್ ಮಾಲೀಕರ ಸಂಘ

ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡ ಚಾಲನೆ



ಮೈಸೂರು,ಡಿ.22(ಆರ್‌ಕೆಬಿ)–ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಸಿದ್ದಲಿಂಗೇಶ್ವರನಗರ, ಸಿಎಫ್‌ಟಿಆರ್‌ಐ ಲೇಔಟ್ ಮತ್ತು ವಿಶ್ವಮಾನವಜೋಡಿ ರಸ್ತೆ ಅಭಿವೃದ್ಧಿಗೆ ಹಾಗೂ ಕೆ.ಸಾಲುಂಡಿ, ಮೂಗನಹುಂಡಿ, ಬಲ್ಲಹಳ್ಳಿ, ಬೀರಿಹುಂಡಿ, ಅನಗನಹಳ್ಳಿ ಗ್ರಾಮಗಳಲ್ಲಿ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಗುರುವಾರ ಚಾಲನೆ ನೀಡಿದರು.

ಸಿದ್ದಲಿಂಗೇಶ್ವರನಗರ ಹಾಗೂ ಸಿಎಫ್‌ಟಿಆರ್‌ಐ ಲೇಔಟ್‌ನಲ್ಲಿ ತಲಾ 40 ಲಕ್ಷ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ, ವಿಶ್ವಮಾನವ ಜೋಡಿ ರಸ್ತೆಗೆ 50 ಲಕ್ಷ ರೂ. ವೆಚ್ಚದಲ್ಲಿ ಮರು ಡಾಂಬರೀಕರಣಕ್ಕೆ ಚಾಲನೆ ನೀಡಿದರು. ನಂತರ ಪಾಲಿಕೆಯ ವಲಯ–3 ಕಚೇರಿ ಕಟ್ಟಡ ನಿರ್ಮಾಣ ಕಾಮಗಾರಿ ಪರಿಶೀಲನೆ ನಡೆಸಿದರು.

ಬಳಿಕ ಕೆ.ಸಾಲುಂಡಿ ಗ್ರಾಮ ವ್ಯಾಪ್ತಿಯಲ್ಲಿ ರಸ್ತೆ ಅಭಿವೃದ್ಧಿ 1 ಕೋಟಿ ರೂ. ಹಾಗೂ ಮೂಗನಹುಂಡಿ ಗ್ರಾಮದಲ್ಲಿ 100 ಲಕ್ಷ ವೆಚ್ಚದಲ್ಲಿ ಬಾಕಿ ಇರುವ ಒಳಚರಂಡಿ, ಎಸ್‌ಟಿಪಿ ಕಾಮಗಾರಿ ಹಾಗೂ 50 ಲಕ್ಷ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ, ಬಲ್ಲಹಳ್ಳಿ ಗ್ರಾಮದಲ್ಲಿ 50 ಲಕ್ಷ ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ, ಬೀರಿಹುಂಡಿ ಗ್ರಾಮದಲ್ಲಿ 50 ಲಕ್ಷ ವೆಚ್ಚದಲ್ಲಿ ರಸ್ತೆ ಮತ್ತು ಚರಂಡಿ ನಿರ್ಮಾಣ, ತಾಲೂಕು ಪಂಚಾಯತಿ ಮತ್ತು ಏಷಿಯನ್ ಪೇಯಿಂಟ್ಸ್ ಸಹಯೋಗದೊಂದಿಗೆ ಜಲಯಾನ ನಿರ್ವಹಣಾ ಯೋಜನೆಯಡಿ ಕೆರೆಗಳಿಂದ ಮಳೆ ನೀರು ಸರಾಗವಾಗಿ ಹರಿದು ಹೋಗುವಂತೆ ಕಾಲುವೆಗಳ ಹೂಳು ತೆಗೆಯುವ ಕಾಮಗಾರಿಗೂ ಶಾಸಕರು ಚಾಲನೆ ನೀಡಿದರು. ಇದೇ ವೇಳೆ ಬಲ್ಲಹಳ್ಳಿ ಮತ್ತು ಅನಗನಹಳ್ಳಿ ಗ್ರಾಮಗಳಲ್ಲಿ ಸ್ಮಶಾನಗಳ ಗುರುತು ಮಾಡಿ, ಕಂದಾಯ ಇಲಾಖೆಯಿಂದ ಗ್ರಾಮ ಪಂಚಾಯಿತಿಗೆ ಹಸ್ತಾಂತರ ಮಾಡಿದರು. ಕಾರ್ಯಕ್ರಮಗಳಲ್ಲಿ ಮೇಯರ್ ಶಿವಕುಮಾರ್, ಪಾಲಿಕೆ ಆಯುಕ್ತ ಲಕ್ಷ್ಮಿಕಾಂತರೆಡ್ಡಿ, ಪಾಲಿಕೆ ಸದಸ್ಯರಾದ ಸವಿತಾ ಸುರೇಶ್, ಲಕ್ಷ್ಮಿ ಕಿರಣ್‌ಗೌಡ, ಮುಖಂಡರಾದ ರಾಜಣ್ಣ, ಬಸಪ್ಪಾಜಿ, ರಮೇಶ ಕಲ್ಲಿಪಾಳ್ಯ, ಕೇರ್ಗಳ್ಳಿ ಶಿವಪ್ಪ, ಕೆ.ಸಾಲುಂಡಿ ರಾಜು, ಬೋಜೇಗೌಡ, ನರ್ಗತಹಳ್ಳಿ ಚಿಕ್ಕಣ್ಣ, ಬೀರಿಹುಂಡಿ ಶಿವಣ್ಣ, ಬಸವೇಗೌಡ, ದೇವರಾಜು ಇನ್ನಿತರರು ಉಪಸ್ಥಿತರಿದ್ದರು.

ಹಾರ್ಡಿಂಜ್ ಸರ್ಕಲ್ ಸುತ್ತ ವಿಶೇಷ ಪ್ಲಾಸ್ಟಿಕ್ ಬ್ಯಾರಿಕೇಡ್ ಅಳವಡಿಕೆ


ಮೈಸೂರು, ಡಿ.22(ಎಸ್‌ಬಿಡಿ)– ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಒಡೆಯರ್ ವೃತ್ತ(ಹಾರ್ಡಿಂಜ್ ಸರ್ಕಲ್)ದ ಸುತ್ತ ವಾಹನಗಳ ಸಂಚಾರ ನಿಯಂತ್ರಣಕ್ಕೆ ವಿಶೇಷ ಶೈಲಿಯ ಪ್ಲಾಸ್ಟಿಕ್ ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿದೆ.

ವೃತ್ತದ ಸುತ್ತಲೂ ಹಳದಿ ಮತ್ತು ಕೆಂಪು ಬಣ್ಣದ ಲಾಂಕಿಂಗ್ ವ್ಯವಸ್ಥೆಯುಳ್ಳ ಬ್ಯಾರಿಕೇಡ್ ಅಳವಡಿಸಲಾಗಿದ್ದು, ಗಾಳಿಯ ರಭಸಕ್ಕೆ ನೆಲಕ್ಕುರುಳದಂತೆ ಬ್ಯಾರಿಕೇಡ್‌ನ ಪೈಪ್ ಮಾದರಿಯೊಳಗೆ ಎಂ ಸ್ಯಾಂಡ್ ತುಂಬಲಾಗಿದೆ. ಇವು ಗಾಲಿ ವ್ಯವಸ್ಥೆಯುಳ್ಳ ಕಬ್ಬಿಣದ ಬ್ಯಾರಿಕೇಡ್‌ಗಳಿಗಿಂತ ಎತ್ತರ ಕಡಿಮೆಯಿದ್ದರೂ ಹೆಚ್ಚು ದಪ್ಪವಾಗಿವೆ. ಕನ್ನಡ ಬಾವುಟದಲ್ಲಿರುವಂತೆ ಹಳದಿ–ಕೆಂಪು–ಹಳದಿ–ಕೆಂಪು ಕ್ರಮದಲ್ಲಿ ಬ್ಯಾರಿಕೇಡ್ ಜೋಡಿಸಲಾಗಿದ್ದು, ವಾಹನ ಸವಾರರಿಗೆ ದೂರದಿಂದಲೇ ಗೋಚರಿಸುತ್ತವೆ.

ಡಾ.ಚಂದ್ರಗುಪ್ತ ಅವರು ನಗರ ಪೊಲೀಸ್ ಆಯುಕ್ತರಾಗಿದ್ದ ಸಂದರ್ಭದಲ್ಲಿ ಮನವಿ ಮಾಡಿದ್ದರ ಹಿನ್ನೆಲೆಯಲ್ಲಿ ಬ್ಯಾಂಕ್ ಆಫ್ ಬರೋಡಾ ವತಿಯಿಂದ ಸುಮಾರು 5.5 ಲಕ್ಷ ರೂ. ಅಂದಾಜು ಮೊತ್ತದಲ್ಲಿ 88 ಬ್ಯಾರಿಕೇಡ್‌ಗಳನ್ನು ಹೈದರಾಬಾದ್‌ನಿಂದ ತರಿಸಲಾಗಿದೆ. ಪ್ಲಾಸ್ಟಿಕ್‌ನಿಂದ ತಯಾರಿಸಿರುವುದರಿಂದ ರಭಸವಾಗಿ ಗಾಳಿ ಬೀಸಿದರೆ ನೆಲಕ್ಕುರುಳುವ ಸಾಧ್ಯತೆ ಇರುತ್ತದೆ. ಹಾಗಾಗದಂತೆ ಬ್ಯಾರಿಕೇಡ್‌ನ ಎರಡೂ ಬದಿಯಲ್ಲಿ ಕಂಬ ಮಾದರಿಯಿದ್ದು, ಅದರೊಳಗೆ ನೀರು ಅಥವಾ ಮರಳು ತುಂಬಬಹುದು. ಸದ್ಯ ಅವುಗಳಿಗೆ ಎಂ ಸ್ಯಾಂಡ್ ತುಂಬಲಾಗಿದ್ದು, ಪ್ಲಾಸ್ಟಿಕ್ ಬ್ಯಾರಿಕೇಡ್ ಸೂಕ್ತವೆನಿಸಿದರೆ ಮುಂದಿನ ದಿನಗಳಲ್ಲಿ ಬೇರೆ ಸ್ಥಳಗಳಲ್ಲೂ ಅಳವಡಿಸಲು ಮೇಲಧಿಕಾರಿಗಳು ಚಿಂತನೆ ನಡೆಸಿದ್ದಾರೆ ಎಂದು ದೇವರಾಜ ಸಂಚಾರ ಪೊಲೀಸ್ ಠಾಣೆ ಇನ್‌ಸ್ಪೆಕ್ಟರ್ ಮುನಿಯಪ್ಪ ತಿಳಿಸಿದ್ದಾರೆ.



ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.12.2022 ಶುಕ್ರವಾರ, ಮಳೆ ನಕ್ಷತ್ರ: ಮೂಲ, 16.12.2022ರಿಂದ 29.12.2022
ಶ್ರೀ ಶುಭಕೃತ ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಮಾರ್ಗಶಿರ ಮಾಸ, ಕೃಷ್ಣ ಪಕ್ಷ, ತಿಥಿ: ಅಮಾವಾಸ್ಯೆ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 10.30ರಿಂದ 12ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನೆ, ವಾರ್ಷಿಕ ಕುಂಭಾಭಿಷೇಕ, ನೂತನ ಪೂಜಾ ಮಹೋತ್ಸವ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾ ನಿವೇದನೆ, ಮಂಗಳಾರತಿ, ತೀರ್ಥ–ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ರಾಘವೇಂದ್ರನಗರ, ಬೆಳಗ್ಗೆಯಿಂದ.

■ **ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್:** ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾನೂನು ಅಂಶಗಳು ಕುರಿತು ಕಾರ್ಯಾಗಾರ, ಸಂಪನ್ಮೂಲ ವ್ಯಕ್ತಿಗಳು: ನ್ಯಾಯಾಧೀಶರಾದ ಡಿ.ಮಂಜುಳಾ, ಅಡಿಷನಲ್ ಎಸ್ಪಿ ಡಾ.ಬಿ.ಎನ್.ನಂದಿನಿ, ಅಧ್ಯಕ್ಷತೆ: ಮಹಾಜನ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಡಾ.ಟಿ.ವಿಜಯಲಕ್ಷ್ಮಿ ಮುರಳೀಧರ್, ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರು ವೆಸ್ಟ್ ಅಧ್ಯಕ್ಷೆ ಎಸ್. ರಶ್ಮಿಗೌಡ, ಸ್ಥಳ: ಎವಿಸಿ ಹಾಲ್–3, ಮಹಾಜನ ಪ್ರಥಮ ದರ್ಜೆ ಕಾಲೇಜು, ಬೆಳಗ್ಗೆ 9.15ಕ್ಕೆ.

■ **ಮರಿಮಲ್ಲಪ್ಪನವರ ಪದವಿಪೂರ್ವ ಕಾಲೇಜು :** ಸಾಂಸ್ಕೃತಿಕ ಹಾಗೂ ಕ್ರೀಡಾ ವೇದಿಕೆಯ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಮರಿಮಲ್ಲಪ್ಪನವರ ವಿದ್ಯಾಸಂಸ್ಥೆ ಗೌರವ ಕಾರ್ಯದರ್ಶಿ ಪ್ರೊ.ಕೆ.ಎನ್.ಪಂಚಾಕ್ಷರಸ್ವಾಮಿ, ಮುಖ್ಯ ಅತಿಥಿಗಳು: ಕಿರುತೆರೆ ನಿರ್ಮಾಪಕರು ಮತ್ತು ನಿರ್ದೇಶಕರಾದ ಶೃತಿ ನಾಯ್ಡು, ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ನಾಗಮಲ್ಲೇಶ್, ಕಾಲೇಜು ಪ್ರಾಂಶುಪಾಲ ಬಿ.ಆರ್. ನೀಲಕಂಠ, ಉಪಪ್ರಾಂಶುಪಾಲರಾದ ಶ್ರೀಮತಿ ಎಂ.ಎಸ್.ವಿಜಯ, ಶೈಕ್ಷಣಾಧಿಕಾರಿ ಶ್ರೀಮತಿ ಮಂಗಳಾ ಮುದ್ದುಮಾದಪ್ಪ, ಸ್ಥಳ: ಕಲಾಮಂದಿರ ಸಭಾಂಗಣ, ವಿನೋಬಾ ರಸ್ತೆ, ಬೆಳಗ್ಗೆ 9.30ಕ್ಕೆ

■ **ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್ :** ಮಾನಸಧಾರಾ ಫೆಸ್ಟ್, ಅಂತರ ಪ್ರೌಢಶಾಲಾ ಚರ್ಚೆ ಮತ್ತು ಶಾಸ್ತ್ರೀಯ ದ್ವಂದ್ವ ನೃತ್ಯ ಸ್ಪರ್ಧೆ, ಉದ್ಘಾಟನೆ : ಮೈಸೂರು ವಿವಿ ನೃತ್ಯ ಮತ್ತು ಲಲಿತಕಲೆಗಳ ವಿಭಾಗದ ಮುಖ್ಯಸ್ಥ ಡಾ. ಕುಮಾರ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯದರ್ಶಿ ಎಸ್.ಪಿ. ಮಂಜುನಾಥ್, ಸ್ಥಳ: ಶಾಲಾ ಆವರಣ, ಜೆ.ಪಿ.ನಗರ, ಬೆಳಗ್ಗೆ 10ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಲಯನ್ಸ್ ಕ್ಲಬ್ ಆಫ್ ಸಿರಿ, ಮೈಸೂರು :** ರೈತರ ದಿನಾಚರಣೆ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಧ್ಯಕ್ಷತೆ: ವಾಣಿಜ್ಯ ತೆರಿಗೆ ಇಲಾಖೆ ನಿವೃತ್ತ ಜಂಟಿ ಆಯುಕ್ತ ಡಾ. ಬಿ.ಟಿ. ಬಾಣೇಗೌಡ, ಮುಖ್ಯ ಅತಿಥಿಗಳು: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಡಾ. ನಾಗರಾಜ್ ಬಿ. ಬೈರಿ, ಕಾಂಗ್ರೆಸ್ ಮುಖಂಡ ಎನ್.ಎಂ.ನವೀನ್‌ಕುಮಾರ್, ಸ್ಥಳ: ಕನ್ನಡ ಸಾಹಿತ್ಯ ಪರಿಷತ್ ಸಭಾಂಗಣ, ವಿಜಯನಗರ 1ನೇ ಹಂತ, ಮಧ್ಯಾಹ್ನ 1 ಗಂಟೆಗೆ

■ **ಶಬರಿಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ:** ಬೆಳಗ್ಗೆಯಿಂದ ಮಹಾಗಣಪತಿ ಪೂಜೆ, ಉಷಾಪೂಜೆ, ಪಂಚಗವ್ಯಂ, ಪಂಚಕಂ, ಕಲಶಪೂಜೆ, ಶಿವೇಲಿ, ವಾದ್ಯಂ, ಕಲಶಾಭಿಷೇಕ, ಉದಯಾಸ್ತಮಾನ ಪೂಜೆ, ದೀಪಾರಾಧನೆ, ಅತ್ತಾಳಪೂಜೆ, ಶ್ರೀ ಭೂತ ಬಲಿ ವಿಳಕ್ಕು, ಮಧ್ಯಾಹ್ನ 12.30ರಿಂದ ಅನ್ನಸಂತರ್ಪಣೆ.

■ **ಜವಳಿ ಮಂತ್ರಾಲಯ, ನವದೆಹಲಿ, ಕೈಮಗ್ಗ ಮತ್ತು ಇಲಾಖೆ, ಕರ್ನಾಟಕ:** ವಿಶೇಷ ಕೈಮಗ್ಗ ಮೇಳ, ಕೈಮಗ್ಗ ಉತ್ಪನ್ನಗಳ ಬೃಹತ್ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ಗಂಟೆಯಿಂದ.

■ **ಟಿಟಿಎಲ್ ಟ್ರಸ್ಟ್, ಅಖಿಲ ಭಾರತೀಯ ಗ್ರಾಹಕ ಪಂಚಾಯತ್:** ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಅಂಗವಾಗಿ ಗ್ರಾಹಕ ಹಕ್ಕುಗಳ ಜಾಗೃತಿ ಕಾರ್ಯಕ್ರಮ, ಅಧ್ಯಕ್ಷತೆ: ಟ್ರಸ್ಟ್ ನಿಯೋಜನಾ ಅಧಿಕಾರಿ ಡಾ.ಬಿ.ವಿ.ಪ್ರಶಾಂತ್, ಸಂಪನ್ಮೂಲ ವ್ಯಕ್ತಿಗಳು: ಗ್ರಾಹಕ ಪಂಚಾಯತ್ ಅಧ್ಯಕ್ಷ ಡಾ.ಜಿ.ವಿ.ರವಿಶಂಕರ್, ಪೊಲೀಸ್ ನಿರೀಕ್ಷಕ ಸಿ.ಎಂ. ರವೀಂದ್ರ, ಎನ್.ಜಯಕುಮಾರ್, ವಿಕ್ರಂ ಅಯ್ಯಂಗಾರ್, ಸ್ಥಳ: ಟಿಟಿಎಲ್ ಕಾಲೇಜು ಆವರಣ, ಬೆಳಗ್ಗೆ 11ಕ್ಕೆ.

■ **ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು:** ಕೌದಿ ಕಲೆ, ನರಸಿಮುಲು ಪಿ.ಬ್ಯಾಗೇರಿ ಅವರ ಏಕವ್ಯಕ್ತಿ ಚಿತ್ರಕಲಾ ಪ್ರದರ್ಶನ, ಉದ್ಘಾಟನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್. ಮಲ್ಲಿಕಾರ್ಜುನಸ್ವಾಮಿ, ಪ್ರಾಸ್ತಾವಿಕ ನುಡಿ: ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ಪ್ರಾಚಾರ್ಯ ಕೆ.ಸಿ. ಮಹದೇವಶೆಟ್ಟಿ, ಮುಖ್ಯ ಅತಿಥಿಗಳು: ಕಾವಾ ನಿವೃತ್ತ ಡೀನ್ ಬಸವರಾಜ ಮುಸಾವಳಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕಿ ಉತ್ತರಾದೇವಿ ಮಠಪತಿ, ದಿ ಹೋಮ್ ಸ್ಕೂಲ್ ಪ್ರಾಂಶುಪಾಲ ಕಾರ್ತಿಕ್, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11.30ಕ್ಕೆ.

■ **ಜೆಎಸ್‌ಎಸ್ ನರ್ಸಿಂಗ್ ಕಾಲೇಜು:** ಪದವೀಧರರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಕರ್ನಾಟಕ ರಾಜ್ಯ ನರ್ಸಿಂಗ್ ಕೌನ್ಸಿಲ್ ಕುಲಸಚಿವ ಓ. ಪ್ರಸನ್ನಕುಮಾರ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರು ಮಠ, ಗೌರವ ಅತಿಥಿಗಳು : ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಜೆಎಸ್‌ಎಸ್ ಆಸ್ಪತ್ರೆ, ಸಂಜೆ 4ಕ್ಕೆ.

■ **ದಯಾನಂದ ಆರ್ಯ ವಿದ್ಯಾ ಪಬ್ಲಿಕ್ ಸ್ಕೂಲ್ :** ಶಿಶಿರೋತ್ಸವ, ವಾರ್ಷಿಕೋತ್ಸವ ಸಮಾರಂಭ, ಮುಖ್ಯ ಅತಿಥಿಗಳು : ಶಾಸಕ ಜಿ.ಟಿ. ದೇವೇಗೌಡ, ಗೌರವ ಅತಿಥಿಗಳು : ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ, ಸ್ಥಳ: ಎನ್‌ಐಇ ಸಭಾಂಗಣ, ಸಂಜೆ 4.30ಕ್ಕೆ.

■ **ಪ್ರಗತಿ ಎಲೈಟ್ ಪಬ್ಲಿಕ್ ಸ್ಕೂಲ್ :** ವಿದ್ಯಾರ್ಥಿ ಯಶೋ ವೈಭವ, ಮುಖ್ಯ ಅತಿಥಿಗಳು : ಪ್ರಾದೇಶಿಕ ಶಿಕ್ಷಣ ಸಂಸ್ಥೆ ಪ್ರಿನ್ಸಿಪಾಲ್ ಪ್ರೊ. ವೈ. ಶ್ರೀಕಾಂತ್, ಸ್ಥಳ: ಕಲಾಮಂದಿರ, ಸಂಜೆ 4.30ಕ್ಕೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಅನಿರುದ್ಧಾಚಾರ್ ಪಾಂಡುರಂಗಿ ಅವರಿಂದ ಪದ್ಮ ಪುರಾಣದ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.

■ **ಶ್ರೀ ಆಂಡಾಳ್ ಮಂದಿರಂ ಟ್ರಸ್ಟ್, ಹೆಬ್ಬಾರ್ ಶ್ರೀ ವೈಷ್ಣವ ಗ್ರಾಮಾಂತರ ಉಪಸಭೆ :** ಧನುರ್ಮಾಸದ ಪ್ರಯುಕ್ತ ವಿದ್ವಾನ್ ಎಂ.ಕೆ. ಶೆಲ್ವನಾರಾಯಣ ಅವರಿಂದ ಶ್ರೀ ಆಂಡಾಳ್ ವಿರಚಿತ 'ತಿರುಪ್ಪಾವೈ' ಪ್ರವಚನ, ಸ್ಥಳ: ಮಂದಿರದ ಆವರಣ, ವಿವಿ ಮೊಹಲ್ಲಾ, ಸಂಜೆ 6ರಿಂದ.

■ **ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ, ಕೆ.ಆರ್.ವನಂ:** ಡಾ.ಎನ್.ಕೆ.ರಾಮಶೇಷನ್ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ಡಾ. ಕಮಲರಾಮನ್‌ರವರ ಮಂದಿರ, ಡಾ.ಬಿ.ಆರ್.ಅಂಬೇಡ್ಕರ್ ರಸ್ತೆ, ಸಂಜೆ 6.15ರಿಂದ.

■ **ಶ್ರೀ ಮಹಾಜನ ಸಭಾ :** ತಿರುಪ್ಪಾವೈ ಕಾಲಕ್ಷೇಪ, ಪ್ರವಚನ ಪ್ರವೀಣ ವಿದ್ವಾನ್ ಮುಡುಂಬೈ ರಾಮಾನುಜ ಶರ್ಮ ಅವರಿಂದ, ಸ್ಥಳ: ಶ್ರೀ ರಾಮಮಂದಿರ, ಶ್ರೀ ಕೃಷ್ಣಮೂರ್ತಿಪುರಂ, ಸಂಜೆ 6.15ರಿಂದ.

■ **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ತಿರುಪ್ಪಾವೈ ಪ್ರವಚನ, ವಿದುಷಿ ಬಿ.ಕೆ.ಸೀತಾಲಕ್ಷ್ಮೀ ಅವರಿಂದ, ಸ್ಥಳ: ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಸಾಯಿಬಾಬಾ ಮಂದಿರ ಸಮೀಪ, ಸಂಜೆ 6.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ– ಪ್ರೊ.ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರಿ, ಮತ್ತೂರು ಕುಮಾರಸ್ವಾಮಿ, ಜಿ.ಪುಷ್ಪಲತಾ, ವ್ಯಾಖ್ಯಾನ–ಡಾ. ಜಿ.ಆರ್. ತಿಪ್ಪೇಸ್ವಾಮಿ, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.30 ಗಾಂಧೀ ಸ್ಮೃತಿ, 10.00 ಡಾ.ಎಸ್.ವಿ.ಸಹನಾ ಮತ್ತು ಎ.ಪಿ.ಶ್ರೀನಿವಾಸ್–ವೀಣಾ ಮತ್ತು ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್.ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್, 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ–ಜಿ.ಕೆ.ರವೀಂದ್ರಕುಮಾರ್, 3.00 ಅವಧರಿಸು ಬಾ ಅಮರನಾರೇಯಣ–ಕಾರ್ಯಕ್ರಮ ಸರಣಿ ಸಂಶೋಧನೆ, ಆಲೇಖ ಮತ್ತು ಸಂಗೀತ ನಿರ್ದೇಶನ–ವಸಂತಮಾಧವಿ, ಪರಿಕಲ್ಪನೆ ಮತ್ತು ನಿರೂಪಣೆ–ಡಾ.ರಘು, ಸಾಹಿತ್ಯ ಮತ್ತು ನಿರೂಪಣೆ–ಪ್ರೊ.ವಿಶ್ವೇಶ್ವರನ್, ನಿರ್ಮಾಣ–ಗೀತಾ ರಮಾನಂದ್, 4.00 ಮಹಿಳಾರಂಗ–ಆಕಾಶವಾಣಿ ಅಡುಗೆ ಮನೆ, ಪ್ರಸ್ತುತಿ–ಕೆ.ಬಿ.ಮೀನಾ, 4.30 ವೃತ್ತಿ ಮಾರ್ಗದರ್ಶನ–ಅನಿಮೇಶನ್ ಮತ್ತು ಕಂಪ್ಯೂಟರ್ ಗ್ರಾಫಿಕ್ಸ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಚಾಂದಿನಿ ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ–ಸಮಗ್ರ ಕೃಷಿಯಲ್ಲಿನ ಅನುಭವ ಕುರಿತು ಕೆ.ಪಿ.ವೆಂಕಟೇಶ್ ಅವರೊಂದಿಗೆ ಸಂದರ್ಶನ, 8.00 ಸಂಧ್ಯಾರಾಗ, 9.15ಜನಪದ ಸಂಗೀತ–ಶಿವಣ್ಣ ಮತ್ತು ತಂಡ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 23 ಶುಕ್ರವಾರ 2022


ಸಂಪುಟ: 43 | ಸಂಚಿಕೆ: 246 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಕೆಬಿಜಿಯವರ
ಭೂಮಂತ್ರ... ಭೂಮಂತ್ರ...




ಭೌಗೋಳಿಕ ವಿಸ್ಮಯದಂತಿರುವ ಕಾಶ್ಮೀರದ ಬಗ್ಗೆ ಪ್ರವಾಸಿಗರೊಬ್ಬರ ಅನಿಸಿಕೆ–1

■ ಪುಟ–4

ಮಹಾರಾಷ್ಟ್ರದ ಗಡಿ ವಿವಾದ ಸಂಬಂಧ ಖಂಡನಾ ನಿರ್ಣಯಕ್ಕೆ ವಿಧಾನಸಭೆಯಲ್ಲಿ ಸರ್ವಾನುಮತದ ಅಂಗೀಕಾರ

ಬೆಳಗಾವಿ, ಡಿ.22– ಮಹಾರಾಷ್ಟ್ರದ ಗಡಿ ವಿವಾದ ಖಂಡಿಸಿ ರಾಜ್ಯ ವಿಧಾನ ಸಭೆಯಲ್ಲಿ ಇಂದು ಸರ್ವಾನುಮತದಿಂದ ಖಂಡನಾ ನಿರ್ಣಯ ಅಂಗೀಕರಿಸಲಾಗಿದೆ. ವಿಧಾನಸಭೆಯಲ್ಲಿ ಮುಖ್ಯಮಂತ್ರಿ ಬಸವ ರಾಜ ಬೊಮ್ಮಾಯಿ ಮಂಡಿಸಿದ ಖಂಡನಾ ನಿರ್ಣಯ ಸರ್ವಾನುಮತದಿಂದ ಅಂಗೀ ಕಾರವಾಯಿತು. ನಂತರ ಮಾತನಾಡಿದ ಮುಖ್ಯಮಂತ್ರಿ, ಕರ್ನಾಟಕದ ನೆಲ, ಜಲದ ಹಿತ ಕಾಪಾಡಲು ಮತ್ತು ಕಾನೂನಿನ ಹೋರಾಟದ ಸಮರ್ಥನೆ ಮಾಡಲು, ಈ ಮೂಲಕ ರಾಜ್ಯ ▶ 9ನೇ ಪುಟಕ್ಕೆ

ಮಹಿಳೆಯರೇ ಎಚ್ಚರ...ಎಚ್ಚರ...



ಪ್ರೀತಿ, ಫ್ರೆಂಡ್‌ಶಿಪ್, ಉದ್ಯೋಗದ ಆಸೆ ತೋರಿಸಿ ವಂಚಿಸುವವರಿದ್ದಾರೆ

● ಮೈಸೂರು ಪೊಲೀಸ್ ಆಯುಕ್ತ ಬಿ.ರಮೇಶ್ ಎಚ್ಚರಿಕೆ ● ಮಹಿಳೆಯರು, ಮಕ್ಕಳ ಮೇಲಿನ ದೌರ್ಜನ್ಯ ಕುರಿತ ಕಾನೂನು ಅರಿವು ಕಾರ್ಯಕ್ರಮದಲ್ಲಿ ಸಾಕಷ್ಟು ಕಿವಿಮಾತು ● ಶಾಲಾ–ಕಾಲೇಜು ವಿದ್ಯಾರ್ಥಿನಿಯರೇ ಹೆಚ್ಚಾಗಿ ವಂಚಕರ ಟಾರ್ಗೆಟ್ ● ಬರೀ ಫ್ರೆಂಡ್‌ಶಿಪ್, ಉದ್ಯೋಗದ ಆಸೆಗೆ ಮರುಳಾಗದಿರಲು ಕಟ್ಟೆಚ್ಚರಿಕೆ

ಮೈಸೂರು, ಡಿ.22(ಎಂಟಿವೈ)– ಪ್ರೀತಿ, ಫ್ರೆಂಡ್‌ಶಿಪ್ ಹೆಸರಲ್ಲಿ ಹಾಗೂ ಉದ್ಯೋಗ ಕೊಡಿಸುವ ಆಮಿಷವೊಡ್ಡಿ ವಿದ್ಯಾರ್ಥಿನಿಯರು ಹಾಗೂ ಮಹಿಳೆಯರ ದಿಕ್ಕು ತಪ್ಪಿಸುವವರ ಸಂಖ್ಯೆ ಹೆಚ್ಚಾಗಿದ್ದು, ಇಂತಹ ಕೃತ್ಯಗಳ ವಿರುದ್ಧ ವಿದ್ಯಾರ್ಥಿನಿಯರು ಜಾಗೃತರಾಗಿರಬೇಕು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಸಲಹೆ ನೀಡಿದ್ದಾರೆ.

ಮೈಸೂರಿನ ಜೆ.ಕೆ.ಮೈದಾನದಲ್ಲಿರುವ ಸರ್ಕಾರಿ ಮೆಡಿಕಲ್ ಕಾಲೇಜಿನ ಅಮೃತೋತ್ಸವ ಭವನ





ಮೈಸೂರಿನ ಜೆ.ಕೆ.ಮೈದಾನದಲ್ಲಿರುವ ಅಮೃತೋತ್ಸವ ಭವನದಲ್ಲಿ ಅಪರಾಧ ತಡೆ ಮಾಸಾಚರಣೆ ಅಂಗವಾಗಿ ಗುರುವಾರ ಆಯೋಜಿಸಿದ್ದ 'ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ' ಕುರಿತ ಕಾನೂನು ಅರಿವು ಕಾರ್ಯಕ್ರಮವನ್ನು ನಗರ ಪೊಲೀಸ್ ಆಯುಕ್ತ ರಮೇಶ್ ಭಾನೋತ್ ಉದ್ಘಾಟಿಸಿದರು. ಚಿತ್ರದಲ್ಲಿ ಡಿಸಿಪಿಗಳಾದ ಎಂ.ಮುತ್ತುರಾಜ್, ಗೀತ ಪ್ರಸನ್ನ, ದೇವರಾಜ ಉಪ ವಿಭಾಗದ ಎಸಿಪಿ ಎಂ.ಎನ್.ಶಶಿಧರ್, ಸಂಪನ್ಮೂಲ ವ್ಯಕ್ತಿಗಳಾದ ಶ್ವೇತ ಹಾಗೂ ಹೇಮಲತಾ ಅವರನ್ನು ಕಾಣಬಹುದು. ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ವಿವಿಧ ಶಾಲಾ–ಕಾಲೇಜಿನ ವಿದ್ಯಾರ್ಥಿನಿಯರನ್ನು ಕಾಣಬಹುದು.

ದಲ್ಲಿ ಗುರುವಾರ ಅಪರಾಧ ತಡೆ ಮಾಸಾಚರಣೆ ಹಿನ್ನೆಲೆಯಲ್ಲಿ ನಗರ ಪೊಲೀಸ್ ಹಾಗೂ ದೇವರಾಜ ಉಪ ವಿಭಾಗ ಪೊಲೀಸ್ ಇಲಾಖೆ ವತಿಯಿಂದ ಆಯೋಜಿಸಿದ್ದ 'ಮಹಿಳೆಯರು ಮತ್ತು ಮಕ್ಕಳ ಮೇಲಿನ ದೌರ್ಜನ್ಯ' ಕುರಿತ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಹೆಣ್ಣು ಮಕ್ಕಳು ಹಾಗೂ ಮಹಿಳೆಯರ ಮೇಲಿನ ದೌರ್ಜನ್ಯದ ಪ್ರಕರಣಗಳು ಹೆಚ್ಚಾಗುತ್ತಿವೆ. ಅದರಲ್ಲೂ ಶಾಲಾ–ಕಾಲೇಜಿನ ವಿದ್ಯಾರ್ಥಿನಿಯರನ್ನು ಮಿಸ್‌ಗೈಡ್ ಮಾಡುವ ಕೃತ್ಯಗಳು ವರದಿಯಾಗುತ್ತಿವೆ. ಇದರ ಬಗ್ಗೆ ಪೋಷಕರು ಹಾಗೂ ಶಿಕ್ಷಕರು, ಉಪನ್ಯಾಸಕರು ವಿದ್ಯಾರ್ಥಿನಿಯರಲ್ಲಿ ಜಾಗೃತಿ ಮೂಡಿಸಬೇಕಾಗಿದೆ. ಗುಡ್ ಟಚ್, ಬ್ಯಾಡ್ ಟಚ್ ಬಗ್ಗೆ ವಿದ್ಯಾರ್ಥಿನಿಯರಿಗೆ ಹೇಳಿಕೊಡಬೇಕಾಗುತ್ತದೆ. ಸಾರ್ವಜನಿಕ ಸ್ಥಳ, ಶಾಲಾ–ಕಾಲೇಜು, ಉದ್ಯೋಗ ಮಾಡುವ ಸ್ಥಳದಲ್ಲಿ ದುರುದ್ದೇಶದಿಂದ ▶ 9ನೇ ಪುಟಕ್ಕೆ

ಕೊರೊನಾ ಉಪ ತಳಿ ಬಿಎಫ್.7ನಿಂದ ಪಾರಾಗಲು ಬೂಸ್ಟರ್ ಡೋಸ್ ರಾಮಬಾಣ

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಸಭೆ ನಿರ್ಧಾರ ● ಮುಂಜಾಗ್ರತಾ ಕ್ರಮಕ್ಕೆ ಸೂಚನೆ; ಸದ್ಯಕ್ಕೆ ಯಾವ ನಿರ್ಬಂಧವಿಲ್ಲ ● ಹವಾ ನಿಯಂತ್ರಿತ ಹೋಟೇಲ್, ಮಾಲ್, ಥಿಯೇಟರ್ ಸೇರಿ ಒಳಾಂಗಣ ಪ್ರದೇಶದಲ್ಲಿ ಮಾಸ್ಕ್ ಧರಿಸುವುದು ಕಡ್ಡಾಯ ● ಸೋಮವಾರದಿಂದಲೇ ಎಲ್ಲೆಡೆ ಬೂಸ್ಟರ್ ಡೋಸ್ ನೀಡಿಕೆ ● ಮುಂಜಾಗ್ರತಾ ಕ್ರಮವಾಗಿ ಆಸ್ಪತ್ರೆಗಳಲ್ಲಿ ಹಾಸಿಗೆ, ಆಮ್ಲಜನಕ ಘಟಕ, ಔಷಧಿಗಳ ವ್ಯವಸ್ಥೆ



ಬೆಂಗಳೂರು, ಡಿ.22 (ಕೆಎಂಶಿ)– **ಕೊರೊನಾ ಉಪ ತಳಿ ಬಿಎಫ್–7ನಿಂದ ರಕ್ಷಣೆಗೆ ಬೂಸ್ಟರ್ ಡೋಸ್ ಮದ್ದು ಎಂದು ರಾಜ್ಯ ಸರ್ಕಾರ ಪ್ರಕಟಿಸಿದೆ.**

ವಿಶ್ವದ ಕೆಲವೆಡೆ ಸೋಂಕು ಹೆಚ್ಚಳವಾಗಿರುವ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮ ತೆಗೆದುಕೊಳ್ಳಲು ಮುಖ್ಯಮಂತ್ರಿ ಬಸವ ರಾಜ ಬೊಮ್ಮಾಯಿ ಬೆಳಗಾವಿಯ ಸುವರ್ಣ ಸೌಧದಲ್ಲಿ ಅಧಿಕಾರಿಗಳು ಮತ್ತು ತಾಂತ್ರಿಕಾ ಸಲಹಾ ಸಮಿತಿ ಸದಸ್ಯರೊಟ್ಟಿಗೆ ಚರ್ಚೆ ನಡೆಸಿದ ನಂತರ ಈ ನಿರ್ಧಾರಕ್ಕೆ ಬಂದಿದೆ.

ರಾಷ್ಟ್ರದಲ್ಲಿ ಬಿಎಫ್–7 ಉಪತಳಿ ಕಾಣಿಸ ದಿದ್ದರೂ, ಜನರ ರಕ್ಷಣೆಗಾಗಿ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು ಸಭೆ ನಿರ್ಧರಿಸಿದೆ. ಸಭೆಯ ನಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ. ಸುಧಾಕರ್ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ್ದಲ್ಲದೆ, ಸಾರ್ವಜನಿಕವಾಗಿ ಯಾವುದೇ ಕಠಿಣ ನಿರ್ಬಂಧಗಳನ್ನು ಕೈಗೊಂಡಿಲ್ಲ ಆದರೆ ಹವಾನಿಯಂತ್ರಿತ ▶ 9ನೇ ಪುಟಕ್ಕೆ

ಕಟ್ಟುನಿಟ್ಟಾದ ನಿಗಾ ವಹಿಸಿ: ಕೋವಿಡ್-19 ಕುರಿತ ಉನ್ನತ ಮಟ್ಟದ ಸಭೆಯಲ್ಲಿ ಪ್ರಧಾನಿ ಮೋದಿ ಸಲಹೆ



ನವದೆಹಲಿ, ಡಿ.22–ಚೀನಾ ಸೇರಿದಂತೆ ವಿಶ್ವದ ಕೆಲವು ರಾಷ್ಟ್ರಗಳಲ್ಲಿ ಮತ್ತೆ ಕೋವಿಡ್–19 ಉಲ್ಬಣ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಇಂದು ನಡೆದ ಉನ್ನತ ಮಟ್ಟದ ಸಭೆಯಲ್ಲಿ ದೇಶದಲ್ಲಿ ಕೋವಿಡ್–19 ಸಂಬಂಧಿತ ಪರಿಸ್ಥಿತಿ ಕುರಿತು ಪರಾಮರ್ಶಿ ಸಲಾಯಿತು. ಕೇಂದ್ರ ಗೃಹ ಸಚಿವ ಅಮಿತ್ ಶಾ, ಆರೋಗ್ಯ ಸಚಿವ ಮನ್ಸುಖ್ ಮಾಂಡವೀಯಾ, ನಾಗರಿಕ ವಿಮಾನಯಾನ ಸಚಿವ ಜ್ಯೋತಿರಾಧಿತ್ಯ ಸಿಂಧಿಯಾ ಸೇರಿದಂತೆ ಹಿರಿಯ ಅಧಿಕಾರಿಗಳು ವರ್ಚುಯಲ್ ಸಭೆಯಲ್ಲಿ ಪಾಲ್ಗೊಂಡರು.

ಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಸೋಂಕು ನಿರ್ವಹಣೆಗೆ ಕಟ್ಟುನಿಟ್ಟಾದ ನಿಗಾ ವಹಿಸುವಂತೆ ಸಲಹೆ ನೀಡಿದರು. ಜನದಟ್ಟಣೆಯ ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಬಳಕೆಗೆ ಜನರನ್ನು ಒತ್ತಾಯಿಸಬೇಕು, ಕೋವಿಡ್–19 ಪರೀಕ್ಷೆ ಮತ್ತು ಜಿನೋಮಿಕ್ ಸಿಕ್ವೆನ್ಸಿಂಗ್ ಹೆಚ್ಚಿಸಬೇಕು, ವೃದ್ಧರು ಹಾಗೂ ದುರ್ಬಲ ಜನರು ಮುನ್ನೆಚ್ಚರಿಕೆ ಡೋಸ್ ಪಡೆಯುವಂತೆ ಪ್ರೋತ್ಸಾಹಿಸಬೇಕು ಎಂದರು.

ಆಕ್ಸಿಜನ್ ಸಿಲಿಂಡರ್‌ಗಳು, ಪಿಎಸ್‌ಎ ಪ್ಲಾಂಟ್‌ಗಳು, ವೆಂಟಿ ಲೇಟರ್‌ಗಳು ಮತ್ತು ಮಾನವ ಸಂಪನ್ಮೂಲ ಸೇರಿದಂತೆ ಆಸ್ಪತ್ರೆಯ ಮೂಲಸೌಕರ್ಯಗಳ ಕಾರ್ಯಾಚರಣೆಯ ಸಿದ್ಧತೆ ಖಚಿತ ಪಡಿಸಿಕೊಳ್ಳಲು ಕೋವಿಡ್ ನಿರ್ದಿಷ್ಟ ಸೌಲಭ್ಯಗಳನ್ನು ಲೆಕ್ಕ ಪರಿಶೋಧಿಸಲು ರಾಜ್ಯಗಳಿಗೆ ಪ್ರಧಾನಿ ಮೋದಿ ಸಲಹೆ ನೀಡಿ ದರು ಎಂದು ಪ್ರಧಾನ ಮಂತ್ರಿ ಕಾರ್ಯಾಲಯ ತಿಳಿಸಿದೆ.

ನಾನು ಮುಖ್ಯಮಂತ್ರಿ ಆಗಲು ಬಯಸಿರುವುದು ಶೋಕಿಗಲ್ಲ, ಜನರ ಸಮಸ್ಯೆಗಳ ನಿವಾರಿಸಲು...!

● ಪಂಚರತ್ನ ಯಾತ್ರೆ ಮೂಲಕ ಜಾತಿಗಿಂತ ಬದುಕು ಮುಖ್ಯ ಎಂಬುದನ್ನು ಜನರಿಗೆ ಮನವರಿಕೆ ಮಾಡ್ತೇನೆ
● ನನಗೆ ಬರೀ 5 ವರ್ಷ ಅಧಿಕಾರ ಕೊಟ್ಟು ನೋಡಿ: ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಮನವಿ
● ಸಕ್ಕರೆ ನಾಡು ಮಂಡ್ಯದಲ್ಲಿ ಪಂಚರತ್ನ ಯಾತ್ರೆ ಭಾರೀ ಸಮಾವೇಶ



"ಕಳೆದ ಲೋಕಸಭಾ ಚುನಾವಣೆಯಲ್ಲಿ ನಿಖಿಲ್ ಕುಮಾರಸ್ವಾಮಿ ಸೋತಿದ್ದರೂ, ಜನರ ಮನಸ್ಸನ್ನು ಗೆದ್ದಿದ್ದಾರೆ. ಯಾತ್ರೆ ಸಂದರ್ಭ ನಿಖಿಲ್ ಸೋಲಿನ ಬಗ್ಗೆ ಜನ ಈಗಲೂ ವಿಷಾದ ವ್ಯಕ್ತಪಡಿಸುತ್ತಾರೆ. ಈ ನಿಟ್ಟಿನಲ್ಲಿ ಜೆಡಿಎಸ್ ಬಗ್ಗೆ ಮಂಡ್ಯ ಜನರಿಗೆ ಇರುವ ಒಲವು ವ್ಯಕ್ತವಾಗುತ್ತಿದೆ. 2018ರಲ್ಲಿ 7ಕ್ಕೆ 7 ಸೀಟು ಗೆಲ್ಲಿಸಿದಂತೆ ಮುಂದಿನ 2023ರ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ಸಂಪೂರ್ಣ ಬಹುಮತದೊಂದಿಗೆ ಅಧಿಕಾರಕ್ಕೆ ತನ್ನಿ. ಕುಮಾರಸ್ವಾಮಿ ನೇತೃತ್ವದಲ್ಲಿ ಜಿಲ್ಲೆಯ ಅಭಿವೃದ್ಧಿಗೆ ಶಕ್ತಿ ಮೀರಿ ನಾವೆಲ್ಲರೂ ಶ್ರಮಿಸುತ್ತೇವೆ.

– ಸಿ.ಎಸ್.ಪುಟ್ಟರಾಜು, ಶಾಸಕ.

ಮಂಡ್ಯ, ಡಿ.22– ಚುನಾವಣೆ ಸಂದರ್ಭ ಜಾತಿ ನಿರ್ಣಾಯಕ ಪಾತ್ರ ವಹಿಸುತ್ತಿದ್ದು, ಪಂಚರತ್ನ ಯಾತ್ರೆ ಮೂಲಕ ಜನರ ಭಾವನೆ ಬದಲಿಸುತ್ತೇನೆ. ಜಾತಿಗಿಂತ ಬದುಕು ಮುಖ್ಯ ಎಂಬುದನ್ನು ಜನರಿಗೆ ಮನವರಿಕೆ ಮಾಡುವುದೇ ನನ್ನ ಪ್ರಮುಖ ಗುರಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಗುರುವಾರ ಪಂಚರತ್ನ ಯಾತ್ರೆ ಬಹಿರಂಗ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ನಾನು ಈಗಾಗಲೇ 2 ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿದ್ದು, ಮತ್ತೊಮ್ಮೆ ಮುಖ್ಯಮಂತ್ರಿಯಾಗಬೇಕು ಎನ್ನುತ್ತಿರುವುದು ನನ್ನ ಶೋಕಿಗಲ್ಲ. ಬದಲಿಗೆ ಜನರ ಸಮಸ್ಯೆ ಬಗೆಹರಿಸುವ ಸಲುವಾಗಿ. ನಾನು ಮಣ್ಣಿಗೆ ಹೋಗುವಾಗ ಮಾಜಿ ಸಿಎಂ ಎನಿಸಿಕೊಂಡೇ ಹೋಗುತ್ತೇನೆ. ಅಧಿಕಾರ ಶಾಶ್ವತವಲ್ಲ. ಬಡವರು, ರೈತರು, ವಿದ್ಯಾರ್ಥಿಗಳ ಸಾವಿರಾರು ಸಮಸ್ಯೆಗಳು ಪಂಚರತ್ನ ಯಾತ್ರೆ ಮೂಲಕ ಹತ್ತಿರದಿಂದ ಗೋಚರವಾಗುತ್ತಿದ್ದು, ಇವೆಲ್ಲವನ್ನು ಬಗೆಹರಿಸಬೇಕೆಂದರೆ ನನಗೆ ಸಂಪೂರ್ಣ 5 ವರ್ಷಗಳ ಕಾಲ ಅವಕಾಶ ನೀಡಿ ಎಂದು ಮನವಿ ಮಾಡಿದರು.

ಪಂಚರತ್ನ ಯಾತ್ರೆ ಬರುವಾಗ ಮಂಡ್ಯ ಮಹಿಳಾ ಕಾಲೇಜು ಬಳಿ ವಿದ್ಯಾರ್ಥಿನಿಯರು ಬಸ್, ಲ್ಯಾಪ್‌ಟಾಪ್ ಸಮಸ್ಯೆಗಳ ಬಗ್ಗೆ ಹೇಳಿದರು. ಮೊನ್ನೆ ಮಳವಳ್ಳಿಯಲ್ಲಿ ಹಾಗೂ ನಿನ್ನೆ ಮದ್ದೂರಿನಲ್ಲಿ ಹತ್ತಾರು ಕಿಡ್ನಿ ಹಾಗೂ ಲಿವರ್ ವೈಫಲ್ಯದ ರೋಗಿಗಳು ಧನ ಸಹಾಯಕ್ಕಾಗಿ ಬಂದಿದ್ದರು. ರೈತರ ಸಮಸ್ಯೆಗಳು ನೂರಾರಿವೆ. ರಾಜ್ಯದಲ್ಲಿ ಶಿಕ್ಷಣ ಪದ್ಧತಿ, ಆರೋಗ್ಯ ಸೌಲಭ್ಯಗಳ ಪದ್ಧತಿ ಬದಲಾಗಬೇಕಿದೆ ಎಂದರು. ಸಿಎಂ ಬಸವರಾಜ ಬೊಮ್ಮಾಯಿ ತವರು ಶಿಗ್ಗಾವಿಯಿಂದ ನೂರಾರು ಜನ ನನ್ನ ಬಳಿ ಬಂದು ಸಮಸ್ಯೆ ಹೇಳಿಕೊಳ್ಳುತ್ತಾರೆ. ಮುಖ್ಯಮಂತ್ರಿಗಳು ನಮಗೆ ಸ್ಪಂದಿಸುತ್ತಿಲ್ಲ. ನೀವಾದರೂ ನಮಗೆ ಸಹಾಯ ಮಾಡಿ ಎನ್ನುತ್ತಾರೆ. ರಾಜ್ಯದ ಕಥೆ ಹೀಗಿರುವಾಗ ಬಿಜೆಪಿ ಸರ್ಕಾರದಿಂದ ಜನರ ಸಮಸ್ಯೆ ಬಗೆಹರಿಯುತ್ತಾ ಎಂದು ಪ್ರಶ್ನಿಸಿದ ಅವರು, ▶ 6ನೇ ಪುಟಕ್ಕೆ

ಎಸ್‌ಟಿ ಪಟ್ಟಿಗೆ ಈಡಿಗ ಸಮುದಾಯ ಸೇರ್ಪಡೆ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ

ಜ.6ರಿಂದ ಮಂಗಳೂರಿಂದ ಬೆಂಗಳೂರಿಗೆ ಪಾದಯಾತ್ರೆ

ಡಿ.25ರಂದು ಮೈಸೂರಲ್ಲಿ ಸಭೆ



ಮೈಸೂರು, ಡಿ.22(ಪಿಎಂ)– ಈಡಿಗ ಸಮುದಾಯದ ಅಭಿವೃದ್ಧಿ ನಿಗಮ ಸ್ಥಾಪಿಸಬೇಕು, ಪರಿಶಿಷ್ಟ ವರ್ಗದ ಪಟ್ಟಿಗೆ ಸಮುದಾಯ ಸೇರ್ಪಡೆಗೊಳಿಸಬೇಕು ಎಂಬಿತ್ಯಾದಿ ಬೇಡಿಕೆ ಈಡೇರಿಸಲು ಆಗ್ರಹಿಸಿ 2023ರ ಜ.6ರಿಂದ ಮಂಗಳೂರಿಂದ ಬೆಂಗಳೂರುವರೆಗೆ ಹಮ್ಮಿಕೊಂಡಿರುವ ಪಾದಯಾತ್ರೆ ಸಂಬಂಧ ಡಿ.25ರಂದು ಮೈಸೂರಿನಲ್ಲಿ ಸಭೆ ಏರ್ಪಡಿಸಲಾಗಿದೆ ಎಂದು ಕಲಬುರಗಿ ಚಿತ್ತಾಪುರ ಕರದಾಳು ಗ್ರಾಮದ ಬ್ರಹ್ಮಶ್ರೀ ನಾರಾಯಣ ಗುರು ಶಕ್ತಿ ಪೀಠದ ಶ್ರೀ ಪ್ರಣವಾನಂದ ಸ್ವಾಮೀಜಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿ.25ರಂದು ಮೈಸೂರಿನ ಕೃಷ್ಣಮೂರ್ತಿಪುರಂನ ಆರ್ಯ–ಈಡಿಗರ ಸಂಘದ ಎಂ.ಕೆ. ಶ್ರೀನಿವಾಸಪ್ಪ ಸಭಾಂಗಣದಲ್ಲಿ ಸಂಜೆ 4ಕ್ಕೆ ಸಭೆ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಒಂದೊಂದು ತಾಲೂಕಿನಿಂದ ಸಮುದಾಯದ ಐವರು ಪ್ರಮುಖರು ಸಭೆಯಲ್ಲಿ ಭಾಗವಹಿಸಲಿದ್ದಾರೆ. ಪಾದಯಾತ್ರೆಯ ಉದ್ಘಾಟನೆ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲೆಯ ಕನಿಷ್ಠ 500 ಮಂದಿ ಸಮುದಾಯದವರು ಪಾಲ್ಗೊಳ್ಳಲು ಪೂರ್ವ ಸಿದ್ಧತೆಗಾಗಿ ಈ ಸಭೆ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಎಲ್ಲಾ 26 ಪಂಗಡಗಳನ್ನು ಒಳಗೊಂಡಂತೆ ಈಡಿಗ ಸಮುದಾಯವನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರ್ಪಡೆ ಮಾಡಬೇಕು ಎಂಬುದೂ ಸೇರಿದಂತೆ ರಾಜ್ಯ ಸರ್ಕಾರದ ಮುಂದೆ 10 ಬೇಡಿಕೆಗಳನ್ನು ಇಟ್ಟಿದ್ದೇವೆ. ಒಟ್ಟು 658 ಕಿ.ಮೀ. ಐತಿಹಾಸಿಕ ಪಾದಯಾತ್ರೆ ಇದಾಗಿದ್ದು, ಇಡೀ ಪಾದಯಾತ್ರೆಯಲ್ಲಿ ಆರಂಭದಿಂದ ಕೊನೆವರೆಗೂ ನನ್ನ ನೇತೃತ್ವ ಇರಲಿದೆ. ಉಳಿದಂತೆ ಇಂತಿಷ್ಟು ▶ 9ನೇ ಪುಟಕ್ಕೆ

ಕರ್ನಾಟಕದ ಬೆಟ್ಟ–ಕುರುಬ ಸಮುದಾಯ ಎಸ್‌ಟಿಗೆ ಸೇರ್ಪಡೆ

ಸಂಸತ್ತಿನಲ್ಲಿ ಮಸೂದೆ ಅಂಗೀಕಾರ



ನವದೆಹಲಿ, ಡಿ.22– ಕರ್ನಾಟಕದ "ಕಾಡು ಕುರುಬ" ಜೊತೆಗೆ 'ಬೆಟ್ಟ–ಕುರುಬ' ಸಮುದಾಯವನ್ನು ಪರಿಶಿಷ್ಟ ಪಂಗಡಗಳ ಪಟ್ಟಿಗೆ ಸೇರಿಸುವ ಮಸೂದೆಯನ್ನು ಸಂಸತ್ತು ಗುರುವಾರ ಅಂಗೀಕರಿಸಿದೆ. ಲೋಕಸಭೆ ಅಂಗೀಕಾರಗೊಂಡಿದ್ದ ಮಸೂದೆಯನ್ನ ಇಂದು ರಾಜ್ಯಸಭೆಯಲ್ಲಿ ಧ್ವನಿ ಮತದ ಮೂಲಕ ಸಂವಿಧಾನ(ಪರಿಶಿಷ್ಟ ಬುಡಕಟ್ಟು) ಆದೇಶ (4ನೇ ತಿದ್ದುಪಡಿ) ಮಸೂದೆ, 2022 ಅನ್ನು ಅಂಗೀಕರಿಸಲಾಯಿತು.

ಬುಡಕಟ್ಟು ವ್ಯವಹಾರಗಳ ಸಚಿವ ಅರ್ಜುನ್ ಮುಂಡಾ ಅವರು ಮೇಲ್ಮನೆಯಲ್ಲಿ ಮಂಡಿಸಿದ ಮಸೂದೆಯನ್ನು ಲೋಕಸಭೆಯು ಡಿಸೆಂಬರ್ 19 ರಂದು ಅಂಗೀಕರಿಸಿತ್ತು. ಈ ಮಸೂದೆ ದಕ್ಷಿಣ ರಾಜ್ಯದಲ್ಲಿ ಕೇವಲ 5,000 ಸದಸ್ಯರನ್ನು ಹೊಂದಿರುವ ಕರ್ನಾಟಕದ ಬೆಟ್ಟ–ಕುರುಬ ಸಮುದಾಯಕ್ಕೆ ನ್ಯಾಯ ಒದಗಿಸಲಿದೆ ಎಂದು ಕೇಂದ್ರ ಸಚಿವರು ಹೇಳಿದ್ದಾರೆ. ಬೆಟ್ಟ–ಕುರುಬ ಸಮುದಾಯವನ್ನು ಕರ್ನಾಟಕದ ಪರಿಶಿಷ್ಟ ಪಂಗಡಗಳ ಪಟ್ಟಿಗೆ ಕಾಡು ಕುರುಬ ಎಂಬ ಪದಕ್ಕೆ ಸಮಾನಾರ್ಥಕ ಪದವಾಗಿ ಸೇರಿಸಲು ಕರ್ನಾಟಕ ರಾಜ್ಯ ಸರ್ಕಾರ ಮನವಿ ಮಾಡಿತ್ತು ಎಂದು ಮಸೂದೆಯ ಉದ್ದೇಶ ಮತ್ತು ಕಾರಣಗಳನ್ನು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮಧ್ಯಪ್ರದೇಶಕ್ಕೆ ದುಬಾರೆ ಶಿಬಿರದಿಂದ ಐದು ಸಾಕಾನೆ ಶಿಫ್ಟ್

● ಜನರಲ್ ತಿಮ್ಮಯ್ಯ, ಜನರಲ್ ಕಾರ್ಯಪ್ಪ, ವಲ್ಲಿ, ಲವ, ಮಾರುತಿ ಸ್ಥಳಾಂತರ
● ರಾಮಾಪುರ ಶಿಬಿರದಿಂದ ಈಗಾಗಲೇ ಕೃಷ್ಣ, ಗಜ, ಮಹರ್ಷಿ, ಪೂಜಾ ಸ್ಥಳಾಂತರಿಸಲಾಗಿತ್ತು
● ಜೊತೆಗೆ ಮತ್ತಿಗೋಡು ಶಿಬಿರದಿಂದ ಎರಡು ಆನೆ ಕಳಿಸಲಾಗಿದೆ; ಒಟ್ಟು 14 ಆನೆಗಳ ವರ್ಗಾವಣೆ



ಸಿದ್ದಾಪುರ, ಡಿ.22–ಕರ್ನಾಟಕದ ಸಾಕಾನೆ ಶಿಬಿರಗಳಿಂದ ಮಧ್ಯಪ್ರದೇಶದ ಶಿಬಿರಗಳಿಗೆ 14 ಆನೆಗಳನ್ನು ಸ್ಥಳಾಂತರಿಸುವ ಒಪ್ಪಂದದಡಿ ಗುರುವಾರ ಕೊಡಗಿನ ದುಬಾರೆ ಶಿಬಿರದಿಂದ ಐದು ಆನೆಗಳನ್ನು ಮಧ್ಯಪ್ರದೇಶದ ಭೋಪಾಲ್‌ಗೆ ಕಳುಹಿಸಲಾಯಿತು.

8 ವರ್ಷ ವಯಸ್ಸಿನ ಜನರಲ್ ತಿಮ್ಮಯ್ಯ, 8 ವರ್ಷ ವಯಸ್ಸಿನ ಜನರಲ್ ಕಾರ್ಯಪ್ಪ, 40 ವರ್ಷದ ವಲ್ಲಿ, 21 ವರ್ಷದ ಲವ ಮತ್ತು 20 ವರ್ಷದ ಮಾರುತಿ ಆನೆಗಳನ್ನು ಇಂದು ದುಬಾರೆಯಿಂದ ಲಾರಿಗಳ ಮೂಲಕ ಭೋಪಾಲ್‌ಗೆ ಬೀಳ್ಕೊಡಲಾಯಿತು. ಕರ್ನಾಟಕದ ಅರಣ್ಯಾಧಿಕಾರಿಗಳು ಹಸ್ತಾಂತರಿಸಿದ ಆನೆಗಳನ್ನು ಮಧ್ಯಪ್ರದೇಶದ ಅರಣ್ಯಾಧಿಕಾರಿಗಳು ಸ್ವೀಕರಿಸಿ, ಕೊಂಡೊಯ್ದರು. ಈ ಆನೆಗಳ ಜೊತೆ ಮಾವುತರು ಹಾಗೂ ಕಾವಾಡಿಗಳೂ ಭೋಪಾಲ್‌ಗೆ ತೆರಳಿದ್ದು, ಕೆಲ ದಿನಗಳ ಕಾಲ ಇವರು ಅಲ್ಲೇ ಇದ್ದು, ಆನೆಗಳು ಅಲ್ಲಿನ ಪರಿಸರಕ್ಕೆ ಹಾಗೂ ಮಾವುತರು ಮತ್ತು ಕಾವಾಡಿಗಳಿಗೆ ಹೊಂದಿಕೊಂಡ ನಂತರ ಹಿಂತಿರುಗುವ ಸಾಧ್ಯತೆ ಇದೆ. ಮಧ್ಯಪ್ರದೇಶದಲ್ಲಿ ಹೆಚ್ಚುತ್ತಿರುವ ಹುಲಿ ದಾಳಿ, ▶ 9ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹೆಂಡತಿ : ಎಲ್ಲಾ ಮದುವೆಗಳಲ್ಲಿ ವಧು ಎಡಗಡೆಗೆ ಮತ್ತು ವರ ಬಲಗಡೆಗೆ ಯಾಕೆ ಕೂತಿರುತ್ತಾರೆ?

ಗಂಡ : ಲಾಭ ಮತ್ತು ನಷ್ಟದ ಸ್ಟೇಟ್‌ಮೆಂಟ್ ಅಕೌಂಟ್‌ನ ಪ್ರಕಾರ ಎಲ್ಲಾ ಆದಾಯ ಬಲ ಬದಿಗೆ ಇರುತ್ತದೆ ಮತ್ತು ಖರ್ಚುಗಳು ಎಡ ಬದಿಗೆ ಇರುತ್ತದೆ ಅದಕ್ಕೆ!

ಮೈಸೂರು ಮಿತ್ರ

ಶುಕ್ರವಾರ, 23 ಡಿಸೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ದುಃಖಿತರಾಗಿದ್ದರೂ ತಮಗಿಂತ ಹೆಚ್ಚು ದುಃಖಿತರಾದವರನ್ನು ನೋಡಿಯಾದರೂ ಬದುಕು ಸಾಗಿಸಬೇಕು. –ನೀತಿಸಾರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಅಡುಗೆ ಯಾಕೆ ಹಿಂಗೆ ಅಂದ್ರೆ ಕೋಣೆ ಕಿರಿದಾಗಿತ್ತು ಅಂದ್ಲಂತೆ

ನಿಮ್ಮ ಪತ್ರಗಳು

ವಿ.ಶ್ರೀನಿವಾಸ ಪ್ರಸಾದ್ ಸಭ್ಯತೆಯ ಕೊನೆಯ ಕೊಂಡಿ!

ಮಾನ್ಯರೇ,



ಇತ್ತೀಚೆಗೆ ಹಿರಿಯ ರಾಜಕಾರಣಿಗಳಾದ ವಿ.ಶ್ರೀನಿವಾಸ ಪ್ರಸಾದ್ ಹಾಗೂ ಹೆಚ್. ವಿಶ್ವನಾಥ್‌ರ ನಡುವೆ ಶೀತಲಸಮರ ಶುರುವಾಗಿದೆ. ಹೆಚ್.ವಿಶ್ವನಾಥ್ ಅವರಿಗೆ ಎಲ್ಲರನ್ನೂ ಬಾಯಿಗೆ ಬಂದಂತೆ ಬಯ್ಯುವುದು, ಹೀಯಾಳಿಸುವುದು, ಚಾಳಿಯಾಗಿ ಬಿಟ್ಟಿದೆ. ತಾವು ಯಾರ ವಿರುದ್ಧ ಸೋತಿರುತ್ತಾರೋ ಅವರ ವಿರುದ್ಧ ಏಕಾಏಕಿ ಗದಾಪ್ರಹಾರ ಮಾಡುವುದು ಕೊನೆಗೆ ಆಣೆ – ಪ್ರಮಾಣ ಮಾಡು ಎನ್ನುವುದು. ಹೆಚ್.ಡಿ. ದೇವೇಗೌಡರು ಮತ್ತು ಅವರ ಕುಟುಂಬ, ಬಿ.ಎಸ್.ಯಡಿಯೂರಪ್ಪ ಮತ್ತು ಅವರ ಕುಟುಂಬ, ಸಿದ್ದರಾಮಯ್ಯ, ಪ್ರತಾಪ್ ಸಿಂಹ, ಸಾ.ರಾ. ಮಹೇಶ್, ಎಸ್.ಟಿ. ಸೋಮಶೇಖರ್ ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಈಗ ಕೊನೆಗೆ ವಿಶ್ವನಾಥರೇ ಹೇಳುವ 40 ವರ್ಷದ ಸ್ನೇಹಯಾನದ ಸಂಸತ್ ಸದಸ್ಯರಾದ ವಿ.ಶ್ರೀನಿವಾಸ ಪ್ರಸಾದ್ ಅವರ ವಿರುದ್ಧ ಅಲೆಮಾರಿಯ ರಾಜ ಎಂದು ಲೇವಡಿ ಮಾಡಿ ಮಾತನಾಡಿದರು.

ಧೈರ್ಯ ಮತ್ತು ಸ್ವಾಭಿಮಾನಕ್ಕೆ ಹೆಸರಾದ ವಿ.ಶ್ರೀನಿವಾಸ ಪ್ರಸಾದ್ ಅವರು ಕೆರಳಿ "ನಾನು ಅಲೆಮಾರಿಯ ರಾಜನಲ್ಲ; ಸ್ವಾಭಿಮಾನಿ ಚಕ್ರವರ್ತಿ". ವಿಶ್ವನಾಥ್ ಹಸು ವೇಷ ಧರಿಸಿ ಹುಲಿ ಶಿಕಾರಿ ಮಾಡಲು ಹೊರಟಿದ್ದಾನೆ. ಗೂಳಿ ಅಟ್ಟಾಡಿಸಿ ಕೊಂಡು ಬಂದಂತೆ ಎಲ್ಲರೂ ಅಟ್ಟಾಡಿಸಿಕೊಂಡು ಬರುತ್ತಿದ್ದಾರೆ. ಈತ ಓಡುತ್ತಿದ್ದಾನೆ. ಆದರೆ ನಾನು ಮಲಗಿರುವ ಹುಲಿಯನ್ನು ಬಡಿದೆಬ್ಬಿಸಿ ಶಿಕಾರಿ ಮಾಡುವವನು ಎಂದು ನೀತಿಪಾಠದ ಮೂಲಕ ಎಚ್ಚರಿಸಿ ಪತ್ರಿಕಾಗೋಷ್ಠಿಯಲ್ಲಿ ವಿಶ್ವನಾಥರ ಜನ್ಮವನ್ನು ಜಾಲಾಡಿದ್ದಾರೆ. ಪ್ರಸಾದ್ ಅವರು ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ಎಂದಿಗೂ ಶರಣಾಗತಿಯ ರಾಜಕಾರಣ ಮಾಡಿದವರಲ್ಲ; ಹಾಗೆಯೇ ಎಂದಿಗೂ ಸಭ್ಯತೆಯನ್ನು ಮೀರಿದವರೂ ಅಲ್ಲ. ಮೈಸೂರಿನ ಅಶೋಕಪುರಂ ಗಲ್ಲಿಯಿಂದ ದಿಲ್ಲಿಯ ಪಾರ್ಲಿಮೆಂಟ್ ಎತ್ತರಕ್ಕೇರಿದ ಸ್ವಾಭಿಮಾನಿ ಹಾಗೂ ಶೋಷಿತ ಸಮುದಾಯಕ್ಕೆ ಆತ್ಮಸ್ಥೈರ್ಯ ಮತ್ತು ನೈತಿಕ ಬಲ ತಂದು ಕೊಡುವುದರ ಮೂಲಕ ದಲಿತ ರಾಜಕಾರಣಕ್ಕೆ ಮಾದರಿಯಾದ ಶುದ್ಧ ಹಸ್ತ ರಾಜಕಾರಣಿ.

ಹಿರಿಯ ಮುತ್ಸದ್ದಿ ವಿ.ಶ್ರೀನಿವಾಸ ಪ್ರಸಾದ್ ಅವರ ಆಡಳಿತಾವಧಿಯಲ್ಲಾಗಲೀ ಅಥವಾ ಅವರು ವಾಸವಿರುವ ಸುತ್ತಮುತ್ತ ಪ್ರದೇಶದಲ್ಲಾಗಲೀ ಶಾಂತಿಯುತ ವಾತಾವರಣ ನೆಲೆಸಿರುತ್ತದೆ. ಸದಾ ಸಾಮಾಜಿಕ ಸಾಮರಸ್ಯಕ್ಕೆ ಆದ್ಯತೆ ನೀಡುವ 'ಪ್ರಸಾದ್ ಅವರು ಸಭ್ಯತೆಯ ಕೊನೆಯ ಕೊಂಡಿ' ಎಂದರೆ ತಪ್ಪಾಗಲಾರದು. ಆದರೆ ಪ್ರಸ್ತುತ ಗಲ್ಲಿ ಸಿಂಹದಂತೆ ಎಲ್ಲರನ್ನೂ ಬಯ್ದುಕೊಂಡೇ ಕಾಲಕಳೆಯುತ್ತಿರುವ ವಿಶ್ವನಾಥರು ರಾಜಕಾರಣದಲ್ಲಿ ಯಾರನ್ನೂ ನಂಬರು; ಇವರನ್ನು ಯಾರು ನಂಬಲಾರರು' ಎನ್ನುವ ಸ್ಥಿತಿಗೆ ತಲುಪಿದ್ದಾರೆ. ಏನೇ ಆಗಲಿ ಹಳ್ಳಿಹಕ್ಕಿ ಇನ್ನು ಮುಂದಾದರೂ ತಮಗೆ ಉಪಕಾರ ಮಾಡಿ, ಆಶ್ರಯ ನೀಡಿದವರನ್ನು ನೆನೆದು ಸಹಜ ಸ್ಥಿತಿಗೆ ಮರಳಲಿ!

– ಪ್ರಜ್ವಲ್ ಶಶಿ, ತಗಡೂರು, ನಂಜನಗೂಡು ತಾ.

ಚೀನಾ ಈಗ ಮಾಡಿದ್ದುಣ್ಣೋ ಮಹಾರಾಯ

ಮಾನ್ಯರೆ,

ಮಾಡಿದ್ದುಣ್ಣೋ ಮಹಾರಾಯ ಎಂಬ ಗಾದೆ ಮಾತು ಚೀನಾ ದೇಶಕ್ಕೆ ಪ್ರಸ್ತುತ ಅನ್ವಯವಾಗುತ್ತದೆ. ಕೊರೊನಾ ಎಂಬ ಮಹಾಮಾರಿಯನ್ನು ಜಗತ್ತಿಗೆ ಹರಡಿಸಿ ತಾನು ಲಾಭ ಮಾಡಿಕೊಂಡು ಇತರೆ ದೇಶಗಳನ್ನು ದುರ್ಬಲಗೊಳಿಸುವ ತನ್ನ ನೀಚ ಯೋಚನೆಗೆ ಚೀನಾ ಇಂದು ಬೆಲೆ ತೆತ್ತುತ್ತಿದೆ. ಅದು 2019ರ ಸಮಯ. ಅಮೆರಿಕ ಮತ್ತು ಚೀನಾ ದೇಶದ ನಡುವಿನ ವ್ಯಾಪಾರ ಯುದ್ಧ ಕೊರೊನಾ ವೈರಸ್ ಜನನಕ್ಕೆ ಮುಖ್ಯ ಕಾರಣ. ಅಮೆರಿಕ ಹಲವಾರು ಚೀನಿ ಉತ್ಪನ್ನಗಳ ಮೇಲೆ ದೊಡ್ಡ ಮಟ್ಟದ ತೆರಿಗೆ ವಿಧಿಸಿತು. ಇದಕ್ಕೆ ಪ್ರತಿಯಾಗಿ ಚೀನಾ ಕೂಡ ಅಮೆರಿಕ ಉತ್ಪನ್ನಗಳ ಮೇಲೆ ತೆರಿಗೆ ವಿಧಿಸಿತು. ಈ ವ್ಯಾಪಾರ ಯುದ್ಧದಲ್ಲಿ ಅಮೆರಿಕ, ಯುರೋಪ್ ರಾಷ್ಟ್ರಗಳು, ಆಸ್ಟ್ರೇಲಿಯಾ, ಭಾರತ ಮುಂತಾದ ದೇಶಗಳ ಬೆಂಬಲದೊಂದಿಗೆ ಚೀನಾದ ಮೇಲೆ ಅಮೆರಿಕ ಮೇಲುಗೈ ಸಾಧಿಸಿತು.

ಇದಕ್ಕೆ ಪ್ರತಿಯಾಗಿ ಚೀನಾ ನೇರ ಯುದ್ಧದಲ್ಲಿ ಭಾಗವಹಿಸಿದರೆ ಅಪಾರ ಪ್ರಮಾಣದ ಆರ್ಥಿಕ ನಷ್ಟಕ್ಕೆ ಬೆದರಿ, ಪ್ರಾಕ್ಸಿ ವಾರ್ (ಛಾಯ ಯುದ್ಧ)ದ ಭಾಗವಾಗಿ ಜಗತ್ತಿಗೆ ಕೊರೊನಾ ವೈರಾಣು ಹರಡಿಸಿ ತನ್ನ ವಿರೋಧಿಗಳನ್ನು ಉಸಿರುಕಟ್ಟಿಸುವಂತೆ ಮಾಡಿತು. ಇದರಲ್ಲಿ ಯಶಸ್ಸನ್ನು ಕಂಡ ಚೀನಾ, ಕೊರೊನಾದಿಂದ ಜಗತ್ತು ನಲುಗುವಂತೆ ಮಾಡಿ ಹಲವಾರು ಕಳಪೆ ಕೊರೊನಾ ಉಪಕರಣಗಳನ್ನು ಜಗತ್ತಿಗೆ ರಫ್ತು ಮಾಡಿ ಲಾಭ ಮಾಡಿಕೊಂಡಿತು.

ಆದರೆ ಜಗತ್ತಿನ ಹಲವಾರು ದೇಶಗಳೂ ಕೊರೊನಾ ವೈರಾಣುವಿನಿಂದ ಬೇಗ ಚೇತರಿಸಿಕೊಂಡವು. ಆದರೆ ಪ್ರಸ್ತುತ ಚೀನಾ ಕೊರೊನಾ ವೈರಾಣುವಿನಿಂದ ತತ್ತರಿಸುವಂತಾಗಿದೆ. ಮುಂದಿನ 90 ದಿನಗಳಲ್ಲಿ ಚೀನಾ ದೇಶದ ಶೇ.60 ಮಂದಿಗೆ ಕೊರೊನಾ ತಗಲುವ ಸಾಧ್ಯತೆ ಇದೆ ಎಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ ಮತ್ತು ಜಗತ್ತಿನ ಶೇ.10 ರಷ್ಟು ಜನಕ್ಕೆ ಕೊರೊನಾ ವೈರಾಣು ಸೋಂಕು ಹಬ್ಬುವ ಸಾಧ್ಯತೆಯಿದೆ ಎಂದೂ ಹೇಳಲಾಗಿದೆ.

2023 ಅಂತ್ಯಕ್ಕೆ ಕೊರೊನಾ ಸೋಂಕಿಗೆ 16 ಲಕ್ಷ ಚೀನಾ ನಾಗರಿಕರು ಬಲಿಯಾಗುವ ಸಾಧ್ಯತೆಯಿದೆ ಎಂಬ ವರದಿ ಆತಂಕಕಾರಿಯಾಗಿದೆ. ಚೀನಾದ ಆಸ್ಪತ್ರೆಗಳು ಕೊರೊನಾ ರೋಗಿಗಳಿಂದ ತುಂಬಿ ಹೋಗಿದ್ದು ಚೀನಾಕ್ಕೆ ತಲೆ ನೋವಾಗಿ ಪರಿಣಮಿಸಿದೆ.

ಕೊರೊನಾ ಪ್ರಕರಣಗಳು ಅಮೆರಿಕ, ಜರ್ಮನಿ ಮುಂತಾದ ದೇಶಗಳಲ್ಲಿ ಹೆಚ್ಚಾಗಿದ್ದು, ಭಾರತದಲ್ಲಿ ಕೊರೊನಾ ಪ್ರಕರಣಗಳು ಕಡಿಮೆಯಿದ್ದರೂ ಎಚ್ಚರಿಕೆ ಅಗತ್ಯವಾಗಿದೆ. ಬೇರೆಯವರನ್ನು ಹಾಳು ಮಾಡಲು ಬಯಸಿದರೆ ನಾವೇ ಅಧೋಗತಿಗೆ ತಲುಪುತ್ತೇವೆ ಎಂಬುದಕ್ಕೆ ಚೀನಾ ಉತ್ತಮ ಉದಾಹರಣೆ. ಭಾರತ ಕೊರೊನಾ ಸೋಂಕು ಕುರಿತು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.

–ರಾಸುಮ ಭಟ್, ಚಿಕ್ಕಮಗಳೂರು.


ಹೆದ್ದಾರಿಯಲ್ಲೇ ಕಲುಷಿತ ನೀರು, ದುರ್ವಾಸನೆ



ಮಾನ್ಯರೆ,

ಪಿರಿಯಾಪಟ್ಟಣ ತಾಲೂಕು, ಕಂಪಲಾಪುರದ ರಾಷ್ಟ್ರೀಯ ಹೆದ್ದಾರಿ ಬಿ.ಎಂ. ರಸ್ತೆಯ ಪಕ್ಕದಲ್ಲಿರುವ ಎಪಿಎಂಸಿ ಮಾಜಿ ಉಪಾಧ್ಯಕ್ಷ ಎಂ. ರಮೇಶ್ ಅವರ ಮನೆ ಮುಂದೆ ಹಲವಾರು ದಿನಗಳಿಂದ ಕಲುಷಿತ ನೀರು ಹರಿಯುತ್ತಿದ್ದು, ದುರ್ವಾಸನೆ ಬೀರುತ್ತಿದೆ. ಶಾಲಾ ಮಕ್ಕಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ಸೊಳ್ಳೆಗಳ ಆವಾಸ ಸ್ಥಾನವಾಗಿದೆ. ಕೂಡಲೇ ಗ್ರಾಮ ಪಂಚಾಯಿತಿ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕೆಂದು ಮನವಿ.

–ಸದಾಶಿವ, ಕಂಪಲಾಪುರ, ಪಿ.ಪಟ್ಟಣ ತಾ.



ಕೆಬಿಜಿಯವರ

ಭೂಮಂತ್ರ... ಭೂಮಂತ್ರ... ಭೂಮಂತ್ರ...


ಭೌಗೋಳಿಕ ವಿಸ್ಮಯದಂತಿರುವ ಕಾಶ್ಮೀರದ ಬಗ್ಗೆ ಪ್ರವಾಸಿಗರೊಬ್ಬರ ಅನಿಸಿಕೆ–1



ಗುಲ್ಮರ್ಗ್‌ನಲ್ಲಿ ಶಿವನ ದೇವಸ್ಥಾನ



ಶ್ರೀನಗರದಲ್ಲಿ ಶಂಕರಾಚಾರ್ಯರ ದೇವಸ್ಥಾನ



ಶಂಕರಾಚಾರ್ಯರ ಮೂರ್ತಿ

ಓಂ ನಮಃ ಶಿವಾಯ ಎಂಬುದು ನಮ್ಮ ಪ್ರಾರ್ಥನೆಯಾಗಿರಲಿ. ಏಕೆಂದರೆ, ಎನ್.ಕೆ.ಸಿಂಗ್ ಅವರು ಬರೆದಿರುವ "Saivism in Kashmir"(ಕಾಶ್ಮೀರದಲ್ಲಿ ಶೈವ ಧರ್ಮ) ಎಂಬ ಪುಸ್ತಕದಲ್ಲಿ ಕಾಶ್ಮೀರದ ಪ್ರಥಮ ಧರ್ಮ ಶೈವ ಧರ್ಮವಾಗಿದೆ–ಅರ್ಥಾತ್ ಶಿವ ಪೂಜೆ. ನಾನು ಒಂದು ವಾರ ಕಾಶ್ಮೀರದಲ್ಲಿ ತಂಗಿದ್ದು, ನಂತರ ಹಿಂದಿರುಗುವಾಗ ಈ ಪುಸ್ತಕವನ್ನು ಕಾಶ್ಮೀರದ ರಾಜಧಾನಿ ಶ್ರೀನಗರದ ವಿಮಾನ ನಿಲ್ದಾಣದಲ್ಲಿ ಕಳೆದ ಡಿಸೆಂಬರ್ 3ರ ಶನಿವಾರದಂದು ಖರೀದಿಸಿದೆ. ಅನಾದಿ ಕಾಲದಿಂದ, 14ನೇ ಶತಮಾನದಲ್ಲಿ ಮುಸ್ಲಿಮರ ಆಕ್ರಮಣದವರೆಗೂ, ಕಾಶ್ಮೀರವು ಶೈವ ಧರ್ಮದ ಒಂದು ಪ್ರಮುಖ ಧಾರ್ಮಿಕ ಕೇಂದ್ರವಾಗಿ ಪ್ರಸಿದ್ಧಿಯಾಗಿತ್ತು.

ವೇದಗಳಲ್ಲಿ, ಶಿವನನ್ನು ಪಶುಪತಿ ಎಂದೇ ಕರೆಯಲಾಗುತ್ತದೆ. ವೇದದಲ್ಲಿ ಪತಿ ಎಂದರೆ ಒಡೆಯ, ಸ್ವಾಮಿ. ಪಶು ಎಂದರೆ ಜಾನುವಾರು. ಆದ್ದರಿಂದ ಶಿವ ಎಂದರೆ ಪಶುಪತಿ. ಸಹಜವಾಗಿಯೇ ಶಿವನ ವಾಹನ ನಂದಿ. ವೇದಗಳ ಪ್ರಕಾರ, ಪಶುಗಳನ್ನು ಸಂರಕ್ಷಿಸುವ ಶಕ್ತಿ ಶಿವನಿಗಿದೆ. ಹಳೆಯ ಶೈವ ಧರ್ಮವು, ದ್ವೈತ ಮತ್ತು ಶಿವನನ್ನು ಸರ್ವಾಂತರ್ಯಾಮಿ ಮತ್ತು ಸರ್ವಶಕ್ತನೆಂದು ಪರಿಭಾವಿಸಲಾಗಿದೆ.

ಆದಾಗ್ಯೂ, ದ್ವೈತ ಸಿದ್ಧಾಂತವು ಕ್ರಿ.ಶ. 850ಕ್ಕೆ ಮುಂಚೆಯೇ, ಕಾಶ್ಮೀರ ಕಣಿವೆಯಲ್ಲಿ ಶಂಕರಾಚಾರ್ಯರ ಪ್ರವೇಶದೊಂದಿಗೆ ಅದ್ವೈತ ಸಿದ್ಧಾಂತವಾಗಿ ಪರಿವರ್ತನೆಗೊಂಡಿತು. ಈ ಪುಸ್ತಕದ ಪ್ರಕಾರ, ಕಾಶ್ಮೀರಿ ಪಂಡಿತರನ್ನು ಈ ಸಮಯದಲ್ಲಿ ಅದ್ವೈತ ಪಂಥಕ್ಕೆ ಪರಿಚಯಿಸುವುದರ ಮೂಲಕ ವ್ಯವಸ್ಥೆಯನ್ನು ಬದಲಾಯಿಸಲು ಪ್ರಯತ್ನಿಸಲಾಯಿತು. ಅಲ್ಲದೆ ಶುದ್ಧ ಹಾಗೂ ಬದುಕಿಗೆ ಅಗತ್ಯವಾದ ಅದ್ವೈತ ಸಿದ್ಧಾಂತವನ್ನು ಪುನಃ ಪರಿಚಯ ಮಾಡಿಕೊಡಲಾಯಿತು. ಶಂಕರಾಚಾರ್ಯರು ಬದರಿನಾಥದಲ್ಲಿ ಪೀಠವೊಂದನ್ನು ಸ್ಥಾಪಿಸಿದರು ಹಾಗೂ ಇದನ್ನು ಶ್ರೀನಗರ ಅಥವಾ ಅದರ ಸುತ್ತಮುತ್ತ ಶಂಕರಚಾರ್ಯರ ದೇವಾಲಯವೆಂದು ಆರಾಧಿಸಲಾಗುತ್ತದೆ. ಇದರ ಬಗ್ಗೆ ಹೆಚ್ಚಿನ ವಿಚಾರಗಳನ್ನು ಮುಂದೆ ಹೇಳುತ್ತೇನೆ.

ಲಲ್ಲೇಶ್ವರಿ (ಕ್ರಿ.ಶ.1335–1358) ಅವರನ್ನು ಕಾಶ್ಮೀರದ ಸುಪ್ರಸಿದ್ಧ ಸಂತ–ಕವಯಿತ್ರಿ ಎಂದು ಕರೆಯಲಾಗುತ್ತಿತ್ತು. ಅವರನ್ನು ಲಾಲ್‌ದೇದ್ ಎಂದು ಕೂಡ ಕರೆಯಲಾಗುತ್ತದೆ. ಅವರು ಚಿಕ್ಕ, ಚೊಕ್ಕದಾದ ಬೋಧನೆ (ವಾಕ್)ಗಳನ್ನು ರಚಿಸಿದ್ದಾರೆ. ಅಲ್ಲಿಯ ಸಾಮಾನ್ಯ ಜನರಿಗೆ ಅವು ಅತ್ಯಂತ ಪ್ರಿಯವಾಗಿದ್ದವು. ಅವರ ಅತ್ತೆ ಮಾವನ ಮನೆಯಲ್ಲಿ ಅವರನ್ನು ಅತ್ಯಂತ ಕ್ರೂರ ರೀತಿಯಲ್ಲಿ ನಡೆಸಿಕೊಂಡಾಗ, ಅವರು ಮನೆಯಿಂದ ಹೊರಬಂದು ಅರೆನಗ್ನತೆ ಇಲ್ಲವೇ ನಗ್ನಾವಸ್ಥೆಯಲ್ಲಿ ಹಾಡುತ್ತಾ, ನರ್ತಿಸುತ್ತ ದೇಶವನ್ನು ಸುತ್ತಿದರು. ಇದು ನಮಗೆ 12ನೇ ಶತಮಾನದಲ್ಲಿ ನಮ್ಮವರೇ ಆದ ಮತ್ತೋರ್ವ ಸಂತ –ಕವಯಿತ್ರಿ ಅಕ್ಕ ಮಹಾದೇವಿ ಅವರನ್ನು (ಕ್ರಿ.ಶ 1130–1160) ನೆನಪಿಗೆ ತರುತ್ತದೆ. ಇವರೀರ್ವರೂ ಶಿವನ ಭಕ್ತೆಯರೇ (ಶಿವಶರಣೆಯರು) ಆಗಿದ್ದಾರೆ.

ಅದು ಹಾಗಿರಲಿ, ಲಲ್ಲರವರು ತಮ್ಮ ತತ್ವ ಮತ್ತು ಬೋಧನೆಗಳ ಮೂಲಕ ಎಲ್ಲಾ ಪ್ರಾಪಂಚಿಕ ವಸ್ತುಗಳು, ಮಂಜುಗಡ್ಡೆ, ಹಿಮ ಮತ್ತು ನೀರು–ಮೂರು ಬೇರೆ ಬೇರೆಯಾಗಿದ್ದರೂ ಸಹ ಅವುಗಳ ಪ್ರತಿಫಲನದಲ್ಲಿ (reflection) ಅವು ಬೇರೆ ಬೇರೆಯದಲ್ಲ ಎಂಬುದನ್ನು ನಮಗೆ ತಿಳಿಸಿಕೊಡುತ್ತಾರೆ. ಸೂರ್ಯ ರಶ್ಮಿ ಯಲ್ಲಿ (ಕಿರಣಗಳಲ್ಲಿ) ಈ ಮೂರೂ ಒಂದೇ ಆಗಿಬಿಡುತ್ತವೆ. ಅರ್ಥಾತ್ ನೀರಾಗಿ ಬಿಡುತ್ತದೆ.

ಇದೇ ರೀತಿಯಲ್ಲಿ ಪರಿಪೂರ್ಣವಾದ ಜ್ಞಾನವೆಂಬ ಸೂರ್ಯನ ಕಿರಣಗಳು ನಿಮ್ಮನ್ನು ತಾಕಿದಾಗ, ನೀವು –ಮಂಜುಗಡ್ಡೆ, ಹಿಮ ಮತ್ತು ನೀರು –ಈ ಮೂರು ಸರ್ವಶಕ್ತನಾದ ಭಗವಂತನ ಅಂಶಗಳೆಂದು ಗುರುತಿಸುತ್ತೀರಿ ಮತ್ತು ಈ ಭೂಮಂಡಲವು ಒಂದೇ ಎಂಬುದನ್ನು ಮನಗಾಣುತ್ತೀರಿ ಎಂದು ಅವರು ವಿವರಿಸುತ್ತಾರೆ.

ಎಲ್ಲಾ ನಮ್ಮ ಧಾರ್ಮಿಕ ಮುಖಂಡರು ಹಾಗೂ ವಿವಿಧ ಧರ್ಮ ಮತ್ತು ಪಂಥಗಳ ಅನುಯಾಯಿಗಳು ಈ ಸರಳವಾದ ಸತ್ಯವನ್ನು ಅರ್ಥ ಮಾಡಿಕೊಂಡು, ಇನ್ನಿತರೆ ಮತ ಧರ್ಮಗಳವರೊಂದಿಗೆ ಶಾಂತಿ ಮತ್ತು ಸಹನೆಯಿಂದ ಬಾಳುತ್ತಿಲ್ಲವೇಕೆ ಎಂಬುದು ನನಗೆ ಆಶ್ಚರ್ಯವನ್ನುಂಟು ಮಾಡಿದೆ.

ಸಾಮ್ರಾಟ್ ಅಶೋಕನು ಶೈವನಾಗಿದ್ದು, ಮುಂದೆ ಬೌದ್ಧ ಧರ್ಮವನ್ನು ಸ್ವೀಕರಿಸಿ, ಆ ಧರ್ಮವನ್ನು ಕಾಶ್ಮೀರದಲ್ಲಿ ಪ್ರಚುರಪಡಿಸಿದನು. ಕ್ರಿಸ್ತಪೂರ್ವದಲ್ಲಿ ಅಶೋಕನ ಮಗ ಸಹ ಅದೇ ಕಾರ್ಯವನ್ನು ಮಾಡಿದನು.

13ನೇ ಶತಮಾನದಲ್ಲಿ ಮಾತ್ರ ಮುಸಲ್ಮಾನ ಆಡಳಿತಗಾರರು ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಸಾಧ್ಯವಾಯಿತು. ಅಲ್ಲಿಯವರೆಗೂ ಕಾಶ್ಮೀರ ಹಿಂದೂ ರಾಜರ ಆಳ್ವಿಕೆಗೆ ಒಳಪಟ್ಟಿತ್ತು. ನಿರೀಕ್ಷೆಯಂತೆಯೇ, ಅಲ್ಲಿಂದ ಮುಂದೆ ಶೈವ ಧರ್ಮವು ಕಾಶ್ಮೀರದಲ್ಲಿ ಅವನತಿಯತ್ತ ಸಾಗಿತು. ಕ್ರಿ.ಶ. 1339ರಲ್ಲಿ ಕಾಶ್ಮೀರದಲ್ಲಿ ಇಸ್ಲಾಮೀಕರಣ ಪ್ರಾರಂಭವಾಗಿ, ಷಾಮಿರ್‌ರವರು ಪ್ರಥಮ ಮುಸ್ಲಿಂ ರಾಜರಾದರು. ನಂತರ, ಮೊಘಲರು, ಆಫ್ಘನಿನ ದುರಾನಿಗಳು, ಆಡಳಿತ ನಡೆಸಿದರು. ಆ ನಂತರ, ಸಿಖ್ಖರು, ರಣಜಿತ್ ಸಿಂಗನ ನೇತೃತ್ವದಲ್ಲಿ ಕಾಶ್ಮೀರವನ್ನು ಆಕ್ರಮಿಸಿಕೊಂಡರು.

1846ರಲ್ಲಿ ನಡೆದ ಆಂಗ್ಲೋ–ಸಿಖ್ಖರ ಸಂಗ್ರಾಮದಲ್ಲಿ ಸಿಖ್ಖರು ಪರಾಭವಗೊಂಡರು. ಜಮ್ಮುವಿನ ರಾಜ ಗುಲಾಬ್‌ಸಿಂಗ್‌ರವರು ಬ್ರಿಟೀಷರ ಪರಮಾದಿತ್ಯದಲ್ಲಿ ಕಾಶ್ಮೀರದ ನೂತನ ಆಡಳಿತಗಾರನಾದ. ಇದು 1947ರಲ್ಲಿ ಅಂತ್ಯಗೊಂಡಿತು. ಈಗಿನ ಇತಿಹಾಸ ಎಲ್ಲಾ ಭಾರತೀಯರು, ಪಾಕಿಸ್ತಾನಿಗಳು ಹಾಗೂ ಕಾಶ್ಮೀರಿಗಳಿಗೆ ತಿಳಿದಿರುವ ಸಂಗತಿಯೇ ಆಗಿದೆ.

8ನೇ ಶತಮಾನದ ಕೆಚ್ಚೆದೆಯ ಕಾಶ್ಮೀರ ರಾಜ ಲಲಿತಾದಿತ್ಯ ಮುಕ್ತಪೀಡ ಅವರ ಬಗ್ಗೆ ಲೇಖನ 'ಮೈಸೂರು ಮಿತ್ರ'ನ ಇದೇ ಅಂಕಣದಲ್ಲಿ ಡಿ.22 ರಂದು ಪ್ರಕಟವಾಗಿತ್ತು. ಸಿಂಧ್ ಪ್ರಾಂತ್ಯವನ್ನು ಮುಸಲ್ಮಾನರು ಆಕ್ರಮಿಸಿಕೊಂಡರೂ ಈ ಆಕ್ರಮಣಕಾರರು ಕಾಶ್ಮೀರವನ್ನು ಆಕ್ರಮಿಸಿಕೊಳ್ಳಲು ಆಗಲಿಲ್ಲ. ಲಲಿತಾದಿತ್ಯ ಅವರು ಕಾರ್ಕೋಟ ರಾಜವಂಶಕ್ಕೆ ಸೇರಿದ್ದವರು. ಈ ಬಗ್ಗೆ ಮಹಾಭಾರತದಲ್ಲಿಯೂ ಒಂದು ಉಲ್ಲೇಖವಿದೆ. ಅವರು ಸೂರ್ಯನಿಗೆ ಸಮರ್ಪಿತವಾದ ಸೂರ್ಯ ದೇವಾಲಯವನ್ನು ಕಟ್ಟಿದ್ದರು. ಇದು ಭರತ ಖಂಡದಲ್ಲಿ ಬಹುದೊಡ್ಡ ದೇವಸ್ಥಾನ ಸಮುಚ್ಚಯವಾಗಿದೆ. ಆದರೆ ಇದರ ಅವಶೇಷಗಳು ಪಾಕಿಸ್ತಾನದಲ್ಲಿ ಇವೆ ಎಂದು ತೋರುತ್ತದೆ. ಏಕೆಂದರೆ, ಇದರ ಕುರಿತಂತೆ ಯಾವುದೇ ಪ್ರವಾಸಿ ಸಾಹಿತ್ಯದಲ್ಲಿ ಉಲ್ಲೇಖವಿಲ್ಲ. ಅದೇ ರೀತಿ ಪ್ರವಾಸಿ ಮಾರ್ಗದರ್ಶಿಯಾಗಲೀ ಅಥವಾ ಏಜೆಂಟ್ ಆಗಲೀ ಇದರ ಬಗ್ಗೆ ಪ್ರಸ್ತಾಪ ಮಾಡುವುದಿಲ್ಲ. ಹೌದು, ಆದರೆ ಅವರು ಪಾಕಿಸ್ತಾನ ವಶದಲ್ಲಿರುವ ಕಾಶ್ಮೀರದಲ್ಲಿರುವ (POK) ಶಂಕರಾಚಾರ್ಯರ ದೇವಸ್ಥಾನದ ಬಗ್ಗೆ ಉಲ್ಲೇಖಿಸುತ್ತಾರೆ.

ಆದಾಗ್ಯೂ, ನಾವು ಎರಡು ದೇವಸ್ಥಾನಗಳನ್ನು ನೋಡಿದೆವು. ಶ್ರೀನಗರದಿಂದ 56 ಕಿಲೋಮೀಟರ್ ದೂರವಿರುವ ಗುಲ್ಮರ್ಗ್‌ನಲ್ಲಿ ಬೆಟ್ಟದ ಮೇಲಿನ ಪ್ರದೇಶದಲ್ಲಿರುವ (ಚಿತ್ರ ನೋಡಿ) ಶಿವನ ದೇವಸ್ಥಾನವನ್ನು ಸಂದರ್ಶಿಸಿದೆವು. ಇದೊಂದು ಸಣ್ಣ ದೇವಸ್ಥಾನವೆಂದು ಹೇಳುವ ಅಗತ್ಯವಿಲ್ಲ. ಸ್ಥಳೀಯರ ಪ್ರಕಾರ, ಈ ದೇವಸ್ಥಾನವನ್ನು ಇತ್ತೀಚೆಗೆ ರಕ್ಷಣಾ ಸಿಬ್ಬಂದಿ ಪುನಃ ನಿರ್ಮಿಸಿದರಂತೆ.

ಮತ್ತೊಂದು ದೇವಸ್ಥಾನ, ಶ್ರೀನಗರದಲ್ಲಿರುವ ಶಂಕರಾಚಾರ್ಯರ ದೇವಸ್ಥಾನ. ಟ್ಯಾಕ್ಸಿ ಮೂಲಕ ಈ ದೇವಸ್ಥಾನವನ್ನು ತಲುಪಬಹುದು. ದೇವಸ್ಥಾನವನ್ನು ತಲುಪಲು ಕಡಿದಾದ 250 ಮೆಟ್ಟಿಲುಗಳನ್ನೇರಬೇಕಾಗುತ್ತದೆ. (ಚಿತ್ರ ಗಮನಿಸಿ).

ಶಂಕರಾಚಾರ್ಯರ ದೇವಸ್ಥಾನ ಅಥವಾ ಜ್ಯೆಸ್ಥೇಶ್ವರ ದೇವಸ್ಥಾನ ಹಿಂದೂ ದೇವಸ್ಥಾನವಾಗಿದ್ದು ಶ್ರೀನಗರದ ಜಬರ್‌ವಾನ್ ವಲಯದಲ್ಲಿ, ಶಂಕರಾಚಾರ್ಯ ಬೆಟ್ಟದ ಮೇಲೆ ಸ್ಥಾಪನೆಗೊಂಡಿದೆ. ಈ ದೇವಸ್ಥಾನವನ್ನು ಪರಶಿವನಿಗೇ ಅರ್ಪಿಸಲಾಗಿದೆ. ದೇವಸ್ಥಾನದಿಂದ ಶ್ರೀನಗರದ ವಿಹಂಗಮ ನೋಟವನ್ನು ನೋಡಬಹುದು. ದೇವಸ್ಥಾನ ಮತ್ತು ಅದಕ್ಕೆ ಹೊಂದಿಕೊಂಡಂತಿರುವ ಭೂಮಿ, ರಾಷ್ಟ್ರೀಯ ಮಹತ್ವ ಹೊಂದಿರುವ ಸ್ಮಾರಕವಾಗಿದೆ. ಇದು ಪುರಾತತ್ವ ಇಲಾಖೆಯಿಂದ ಸಂರಕ್ಷಿಸಲ್ಪಟ್ಟಿದೆ. ಇದನ್ನು ಧರ್ಮನಾಥ್ ಟ್ರಸ್ಟ್ 19ನೇ ಶತಮಾನದಿಂದಲೂ ನಿರ್ವಹಿಸಿಕೊಂಡು ಬರುತ್ತಿದೆ.

ಈ ಸ್ಮಾರಕವನ್ನು ಚರಿತ್ರೆಯಲ್ಲಿ ಕಾಶ್ಮೀರದ ಅತೀ ಪ್ರಾಚೀನವಾದ ಸ್ಮಾರಕ ಎಂದು ಪರಿಗಣಿಸಲಾಗಿದೆ. ಪರ್ವತವನ್ನು 'ಗೋಪಾದ್ರಿ' ಅಥವಾ 'ಗೋಪಬೆಟ್ಟ' ಎಂದು ಕರೆಯಲಾಗುತ್ತದೆ. ಗೋಪಾದಿತ್ಯ ಎಂಬ ರಾಜನು, ಬೆಟ್ಟದ ಪಾದದಲ್ಲಿ 'ಆರ್ಯದೇಶ'ದಿಂದ ಬಂದ ಬ್ರಾಹ್ಮಣರಿಗೆ ಭೂಮಿಯನ್ನು ದಾನವಾಗಿ ನೀಡಿದನು. ಬೆಟ್ಟಗಳ ಮೇಲೆ, ರಾಜಗೋಪಾದಿತ್ಯನು ಜ್ಯೆಸ್ಥೇಶ್ವರ ದೇವಸ್ಥಾನವನ್ನು (ಶಿವ ಜ್ಯೆಸ್ಥೇಶ್ವರ) ಕ್ರಿ.ಪೂ.371ಕ್ಕಿಂತ ಮುಂಚಿತವಾಗಿ ನಿರ್ಮಿಸಿದ. ಆದಿ ಶಂಕರರು (ಕ್ರಿ.ಶ 8ನೇ ಶತಮಾನ) ಈ ದೇವಸ್ಥಾನಕ್ಕೆ ಭೇಟಿ ನೀಡಿದ್ದರೆಂದು ಹಿಂದೂಗಳು ಬಲವಾಗಿ ನಂಬುತ್ತಾರೆ. ಹಾಗೂ ಅಂದಿನಿಂದಲೂ, ಈ ದೇವಸ್ಥಾನ ಶಂಕರಾಚಾರ್ಯರ ಹೆಸರಿನೊಂದಿಗೆ ಸಮ್ಮಿಲನ ಹೊಂದಿದೆ. ಈ ರೀತಿ ದೇವಸ್ಥಾನ ಮತ್ತು ಬೆಟ್ಟ ಪ್ರಸ್ತುತ ಶಂಕರಾಚಾರ್ಯರ ಹೆಸರನ್ನು ಹೊಂದಿದೆ.

ಏಪ್ರಿಲ್ 1961ರಲ್ಲಿ ದ್ವಾರಕಾ ಪೀಠದ ಜಗದ್ಗುರು ಶಂಕರಾಚಾರ್ಯರು, ಶಂಕರಾಚಾರ್ಯ ದೇವಸ್ಥಾನದಲ್ಲಿ ಆದಿಶಂಕರರಮೂರ್ತಿ (ವಿಗ್ರಹ) ಯನ್ನು ಪ್ರತಿಷ್ಠಾಪಿಸಿದರು. ಶಂಕರಾಚಾರ್ಯ ದೇವಸ್ಥಾನವು ಕಾಶ್ಮೀರದ ಅತ್ಯಂತ ಪ್ರಾಚೀನವಾದ ಹಿಂದೂ ದೇವಾಲಯವಾಗಿದೆ. ಕಪ್ಪು ಶಿಲೆಯ ಲಿಂಗದ ಪ್ರತಿಷ್ಠಾಪನೆಯಾದ ನಂತರ, ದೋಗ್ರಾರಾಜರ ಆಳ್ವಿಕೆಯ ಕಾಲದಲ್ಲಿ, ದೈನಂದಿನ ಪೂಜಾ ಕಾರ್ಯಗಳನ್ನು ಪ್ರಾರಂಭಿಸಲಾಯಿತು. ದೇವಸ್ಥಾನದಲ್ಲಿ ಮೂಲ ದೇವರನ್ನು ತಲುಪಲು, ಸುಮಾರು 240 ಮೆಟ್ಟಿಲುಗಳಿದ್ದು 1976ರಲ್ಲಿ ಇವುಗಳನ್ನು ಧರ್ಮನಾಥ ಟ್ರಸ್ಟ್‌ನ ಅಧ್ಯಕ್ಷರಾಗಿದ್ದ ಡಾ. ಕರಣ್ ಸಿಂಗ್ ಅವರು ನಿರ್ಮಾಣ ಮಾಡಿದರು. ಸದರಿ ಟ್ರಸ್ಟ್ ಅನ್ನು 1846ರಲ್ಲಿ ಮಹಾರಾಜ ಗುಲಾಬ್ ಸಿಂಗ್, ಧಾರ್ಮಿಕ ದತ್ತಿಯಾಗಿ, ಹಾಗೂ ಹಿಂದೂ ಧರ್ಮವನ್ನು ಉಳಿಸಿ–ಬೆಳೆಸಲು ಹಾಗೂ ಬೆಂಬಲಿಸಲು ಸ್ಥಾಪಿಸಿದರು.

ಪ್ರವಾಸಿ ಮಾರ್ಗದರ್ಶಿಗಳ ಪ್ರಕಾರ ಕಾಶ್ಮೀರದಲ್ಲಿ ಏಪ್ರಿಲ್, ಮೇ ಮತ್ತು ಜೂನ್ ತಿಂಗಳಲ್ಲಿ ಗಾಲ್ಫ್ ಸೇರಿದಂತೆ ವಿವಿಧ ರೀತಿಯ ಕ್ರೀಡಾ ಹಾಗೂ ಇನ್ನಿತರ ಚಟುವಟಿಕೆಗಳನ್ನು ಆಸ್ವಾದಿಸಲು ಅತ್ಯಂತ ಪ್ರಶಸ್ತ ಕಾಲವಾಗಿದೆ. ಈ ಸಮಯದಲ್ಲಿ ಹಿಮವಾಗಲೀ ಅಥವಾ ಹೆಚ್ಚು ತಾಪಮಾನವಾಗಲೀ ಇರುವುದಿಲ್ಲ. ಅಗಸ್ಟ್ ಮತ್ತು ಸೆಪ್ಟೆಂಬರ್ ತಿಂಗಳುಗಳಲ್ಲಿ ಪ್ರವಾಸಿಗನು ಸೇಬು ಕೊಯ್ಲನ್ನು ನೋಡಬಹುದು. ಆದರೂ, ಯಾರು ಮಂಜುಗಡ್ಡೆ, ಹಿಮ ಮತ್ತು ಮಳೆಯನ್ನು ನೋಡಲು ಅಪೇಕ್ಷಿಸುತ್ತಾರೋ, ಮೈನಡುಗಿಸುವ ಚಳಿಯ ಅನುಭವವನ್ನು ಹೊಂದಲು ಅಪೇಕ್ಷಿಸುತ್ತಾರೋ ಅಂತಹವರಿಗೆ ನವೆಂಬರ್ ತಿಂಗಳಿನಿಂದ ಸೂಕ್ತ ಸಮಯ. ಹೌದು, ಅದು ನವೆಂಬರ್ ತಿಂಗಳ ಕಡೆಯ ದಿನಗಳು. ಬೆಚ್ಚಗಿನ ಮತ್ತು ಉಣ್ಣೆಯ ಬಟ್ಟೆಗಳಿಂದ ರಕ್ಷಣೆ ಪಡೆಯದಿದ್ದಲ್ಲಿ ಘೋರ ಚಳಿ ನಿಮ್ಮ ದೇಹವನ್ನು ಪೀಡಿಸಬಹುದು.

(ಮುಂದುವರೆಯುತ್ತದೆ)

(ಮೂಲ ಇಂಗ್ಲಿಷ್ ಲೇಖನದ ಕನ್ನಡ ಅನುವಾದ)

Email:
voice@starofmysore.com

ಡಿ.26, ಕ್ರೀಡಾಪಟುಗಳಿಗೆ ರಿಫ್ರೆಶರ್ ತರಬೇತಿ

ಮೈಸೂರು,ಡಿ.22– ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಡಿಸೆಂಬರ್ 26 ರಂದು ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ, ತರಬೇತುದಾರರಿಗೆ ಹಾಗೂ ದೈಹಿಕ ಶಿಕ್ಷಕರಿಗೆ 2022–23 ನೇ ಸಾಲಿನ ಇಲಾಖಾ ಕಾರ್ಯಕ್ರಮವಾದ ರಿಫ್ರೆಶರ್ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಭಾಗವಹಿಸಲು ಇಚ್ಛಿಸುವ ಕ್ರೀಡಾಪಟುಗಳು, ತರಬೇತುದಾರರು ಹಾಗೂ ದೈಹಿಕ ಶಿಕ್ಷಕರು ಬೆಳಗ್ಗೆ 10 ಗಂಟೆಗೆ ಕ್ರೀಡಾಂಗಣದಲ್ಲಿ ವರದಿ ಮಾಡಿಕೊಳ್ಳಬೇಕು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಿ.25ಕ್ಕೆ ಕ್ಯಾಲೆಂಡರ್ ಬಿಡುಗಡೆ

ಮೈಸೂರು, ಡಿ.22– ಅಟಲ್ ಬಿಹಾರಿ ವಾಜಪೇಯಿ ಅವರ ಹುಟ್ಟುಹಬ್ಬದ ಪ್ರಯುಕ್ತ ಜಿಲ್ಲಾ ಬ್ರಾಹ್ಮಣ ಮಹಾಸಭಾ, ಸಂಧ್ಯಾ ಸುರಕ್ಷಾ ಟ್ರಸ್ಟ್, ಕರ್ನಾಟಕ ಬ್ರಾಹ್ಮಣ ಹಿರಿಯ ನಾಗರಿಕ ವೇದಿಕೆ, ಬ್ರಾಹ್ಮಣ ಧರ್ಮ ಸಂಸ್ಕಾರ ಪ್ರತಿಷ್ಠಾನದ ಸಹಯೋಗದಲ್ಲಿ ಮೈಸೂರಿನ ಅಮ್ಮ ಕಾಂಪ್ಲೆಕ್ಸ್ ಸಮೀಪದ ಸಂಧ್ಯಾಚೇತನ ಸಭಾ ಭವನದಲ್ಲಿ ಡಿ.25ರಂದು ಬೆಳಗ್ಗೆ 10.30ಕ್ಕೆ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಶಾಸಕ ಜಿ.ಟಿ.ದೇವೇಗೌಡರು, ಅಧಮ್ಯ ಚೇತನ ಫೌಂಡೇಶನ್‌ನ ಅಧ್ಯಕ್ಷೆ ತೇಜಸ್ವಿನಿ ಅನಂತಕುಮಾರ್, ಹಿರಿಯ ಸಾಹಿತಿ ಸಿ.ಪಿ. ಕೃಷ್ಣಕುಮಾರ್, ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ನಿವೃತ್ತ ಪೊಲೀಸ್ ಅಧಿಕಾರಿ ಭಾಸ್ಕರ್ ರಾವ್, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ರಾಜ್ಯ ಮಹಿಳಾ ಅಧ್ಯಕ್ಷೆ ಪುಷ್ಪ ಅಯ್ಯಂಗಾರ್, ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸಲಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Acadeny News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಬೆಳ್ಳಿ ಬೆಳಕು





'ವೇದ' ಸಮಾರಂಭದಲ್ಲಿ ಭಾವುಕರಾದ ಶಿವಣ್ಣ...

ಹರ್ಷ ನಿರ್ದೇಶನದ ಬಹುನಿರೀಕ್ಷಿತ 'ವೇದ' ಚಿತ್ರದ ಪ್ರೀ ರಿಲೀಸ್ ಕಾರ್ಯಕ್ರಮವನ್ನು ನಟ ನಿರ್ಮಾಪಕರೂ ಆದ ಶಿವಣ್ಣ ತಮ್ಮ ನಿವಾಸದಲ್ಲಿ ಏರ್ಪಡಿಸಿದ್ದರು. ವೇದಿಕೆಯಲ್ಲಿ ಭಾವುಕರಾಗಿಯೇ ಮಾತಾಡಿದ ಶಿವಣ್ಣ, 'ವೇದ' ಒಬ್ಬ ನಾರ್ಮಲ್ ಹ್ಯೂಮನ್ ಬಿಯಿಂಗ್, ಹೂವಿನಂಥ ಮನುಷ್ಯ. ಆತನ ಬಾಳೇ ಒಂದು ಗ್ರಂಥದ ಥರ. 'ವೇದ' ಅಂದರೆ ಫೈರ್, ಅದರ ಹಿಂದೆಯೂ ಒಂದು ಹೂ ಇರುತ್ತದೆ. ಎರಡು ಹಳ್ಳಿಗಳ ನಡುವೆ ನಡೆಯೋ ಕಥೆಯಿದಾಗಿದ್ದು, ಹ್ಯಾಪಿ ಫ್ಯಾಮಿಲಿಯೊಂದರಲ್ಲಿ ಬಿರುಕು ಬಂದಾಗ ಏನೆಲ್ಲ ಆಗುತ್ತೆ ಅನ್ನೋದೇ 'ವೇದ' ಚಿತ್ರದ ಕಂಟೆಂಟ್. ಇಷ್ಟು ವರ್ಷದ ಸಿನಿ ಜರ್ನಿಯಲ್ಲಿ ಮಾಧ್ಯಮದವರು ನನ್ನ ಕುಟುಂಬದ ರೀತಿ ನನಗೆ ತಿದ್ದಿ ತೀಡಿದ್ದಾರೆ. ನೀವೆಲ್ಲ ನನ್ನ ಫ್ಯಾಮಿಲಿ, ಕುಟುಂಬದವರನ್ನು ಇಲ್ಲಿಗೆ ಕರೆಸಿಕೊಂಡಿದ್ದೇನೆ ಎನ್ನುವ ಭಾವನೆಯಿದೆ. ನನ್ನ ಮೊದಲ ಚಿತ್ರವನ್ನು ನಮ್ಮಮ್ಮ ಆರಂಭಿಸಿದ್ದರು. ಈಗ 125ನೇ ಚಿತ್ರವನ್ನು ಪತ್ನಿ ಗೀತಾ ಮಾಡಿದ್ದಾರೆ. ನನ್ನ ಇಡೀ ಜರ್ನಿ ಆನಂದವೇದಾ ಆಗಿದೆ. ತಮಿಳು ಭಾಷೆಗೆ ನಾನೇ ಡಬ್ ಮಾಡಿದ್ದೇನೆ. ಎಲ್ಲರ ಹಾಗೆ ಭಯವೂ ಇದೆ ಎಂದು ಹೇಳಿದರು. ಗೀತಾ ಶಿವರಾಜಕುಮಾರ್ ಹಾಗೂ ಜೀ ಸ್ಟುಡಿಯೋಸ್ ನಿರ್ಮಾಣದ, ಶಿವರಾಜಕುಮಾರ್ ನಟನೆಯ 125ನೇ ಚಿತ್ರ ಇದಾಗಿದ್ದು, ಇಂದಿನಿಂದ ರಾಜ್ಯಾದ್ಯಂತ ಬಿಡುಗಡೆಯಾಗುತ್ತಿದೆ. ಈ ಚಿತ್ರದ ಮೂಲಕ ಶಿವಣ್ಣ ನಿರ್ಮಾಪಕರಾಗುತ್ತಿದ್ದಾರೆ. ಅರ್ಜುನ್ ಜನ್ಯ ಸಂಗೀತ ನೀಡಿರುವ ಈ ಚಿತ್ರಕ್ಕೆ ಸ್ವಾಮಿ ಜೆ.ಗೌಡ ಅವರ ಛಾಯಾಗ್ರಹಣ, ದೀಪು ಎಸ್.ಕುಮಾರ್ ಅವರ ಸಂಕಲನ ಹಾಗೂ ರವಿವರ್ಮ, ವಿಕ್ರಮ್‌ಮೋರ್, ಚೇತನ್ ಡಿಸೋಜ, ಅರ್ಜುನ್‌ರಾಜ್ ಅವರ ಸಾಹಸ ನಿರ್ದೇಶನವಿದೆ. ರವಿ ಸಂತೆಹಕ್ಲು ಅವರ ಕಲಾನಿರ್ದೇಶನವಿರುವ ಈ ಚಿತ್ರಕ್ಕೆ ರಘು ನಿಡುವಳ್ಳಿ ಸಂಭಾಷಣೆ ಬರೆದಿದ್ದಾರೆ. ಶಿವರಾಜಕುಮಾರ್, ಗಾನವಿ, ಲಕ್ಷ್ಮಣ್, ಉಮಾಶ್ರೀ, ಅದಿತಿ ಸಾಗರ್, ಶ್ವೇತ ಚಂಗಪ್ಪ, ಚೆಲುವರಾಜು, ರಾಘು ಶಿವಮೊಗ್ಗ, ವಿನಯ್ ಬಿದ್ದಪ್ಪ, ಪ್ರಸನ್ನ, ಕುರಿ ಪ್ರತಾಪ್, ಲಾಸ್ಯ ನಾಗರಾಜ್, 'ರತ್ ಸಾಗರ್, ಸಂಜೀವ್, ಚಾರ್ವಿಗೌಡ, ಜಗಪ್ಪ, ಚೇತನ ಹರಿ ಮುಂತಾದವರು ಚಿತ್ರದ ಪ್ರಮುಖ ತಾರಾಬಳಗದಲ್ಲಿದ್ದಾರೆ.

'ಥಗ್ಸ್ ಆಫ್ ರಾಮಘಡ' ಟ್ರೈಲರ್ ಬಿಡುಗಡೆ

ಕಾರ್ತಿಕ್ ಮಾರಲಭಾವಿ ಅವರ ಪ್ರಥಮ ನಿರ್ದೇಶನದಲ್ಲಿ ಮೂಡಿಬಂದಿರುವ 'ಥಗ್ಸ್ ಆಫ್ ರಾಮಘಡ' ಚಿತ್ರದ ಟ್ರೈಲರನ್ನು ಡಾಲಿ ಧನಂಜಯ ಅವರು ಬಿಡುಗಡೆಗೊಳಿಸಿ, ಶುಭ ಹಾರೈಸಿದ್ದಾರೆ. ನೈಜ ಘಟನೆ ಆಧರಿಸಿ ನಿರ್ಮಾಣವಾಗಿರುವ ಈ ಚಿತ್ರದಲ್ಲಿ ಚಂದನ್‌ರಾಜ್, ಅಶ್ವಿನ್‌ಹಾಸನ್, ಮಹಾಲಕ್ಷ್ಮಿ, ಸೂರ್ಯ ಕಿರಣ್, ಪ್ರಭು ಹೊಸದುರ್ಗ, ಟೈಗರ್ ಗಂಗ, ಜಗದೀಶ್, ರಾಘವೇಂದ್ರ, ವಿಶಾಲ್ ಪಾಟೀಲ್, ರವಿ ಸಾಲಿಯನಾ, ಲೋಕೇಶ್‌ಗೌಡ ಸೇರಿದಂತೆ ಹಲವು ರಂಗಭೂಮಿ ಕಲಾವಿದರು ನಟಿಸಿದ್ದಾರೆ.

ಡಾಲಿ ಧನಂಜಯ ಮಾತನಾಡಿ, ನಿರ್ದೇಶಕ ಕಾರ್ತಿಕ್ ಒಂದೊಳ್ಳೆ ಟೀಂ ಕಟ್ಟಿಕೊಂಡು, ಉತ್ತಮ ಕಲಾವಿದರನ್ನು ಬಳಸಿಕೊಂಡು ಈ ಸಿನಿಮಾ ಮಾಡಿದ್ದಾರೆ. ಜನವರಿ 6ಕ್ಕೆ ಸಿನಿಮಾ ರಿಲೀಸ್ ಆಗುತ್ತಿದೆ. ಇದು ವರ್ಷದ ಮೊದಲ ಹಿಟ್ ಸಿನಿಮಾ ಆಗಲಿ ಎಂದು ಚಿತ್ರ ತಂಡಕ್ಕೆ ಶುಭ ಹಾರೈಸಿದರು.

ನಿರ್ದೇಶಕ ಕಾರ್ತಿಕ್ ಮಾತನಾಡಿ ಚಿತ್ರಕ್ಕಾಗಿ ಒಂದೂವರೆ ವರ್ಷ ಇಡೀ ತಂಡ ಕಷ್ಟಪಟ್ಟಿದ್ದೇವೆ. ಟ್ರೈಲರ್‌ನಲ್ಲಿ ವೈಲೆನ್ಸ್ ಜಾಸ್ತಿ ಇದೆ. ಅದು ಯಾಕೆ ಅಂತ ಸಿನಿಮಾದಲ್ಲಿ ಉತ್ತರವಿದೆ. ಒಂದಷ್ಟು ಕಿರುಚಿತ್ರಗಳನ್ನು ನಿರ್ದೇಶಿಸಿದ ನಂತರ ಮಾಡಿರುವ ಮೊದಲ ಚಿತ್ರವಿದು. ಊರಿನಲ್ಲಿ ಹಿರಿಯರು ಹಿಂದೆ ನಡೆದ ಘಟನೆಗಳ ಬಗ್ಗೆ ಕಥೆ ಹೇಳುತ್ತಿದ್ದರು. ಆ ಘಟನೆಯನ್ನೇ ಆಧಾರವಾಗಿಟ್ಟುಕೊಂಡು ಕಥೆ ಹೆಣೆದು ಅದಕ್ಕೊಂದಿಷ್ಟು ಸಿನಿಮ್ಯಾಟಿಕ್ ಟಚ್ ಕೊಟ್ಟಿದ್ದೇನೆ ಎಂದು ಹೇಳಿದರು. ನಾಯಕ ಚಂದನ್‌ರಾಜ್ ಮಾತನಾಡಿ ನೈಜ ಘಟನೆ ಆಧರಿಸಿದ ಸಿನಿಮಾ ಇದಾಗಿದ್ದು, ಆ ಕಾರಣಕ್ಕೆ ವೈಲೆನ್ಸ್ ಜಾಸ್ತಿ ಇದೆ, ಈ ಸಿನಿಮಾ ಗೆದ್ದರೆ ನಮ್ಮೆಲ್ಲರ ಕನಸು ನನಸಾಗುತ್ತೆ ಎಂದರು. ಇನ್ನೊಬ್ಬ ನಾಯಕ ನಟ ಅಶ್ವಿನ್‌ಹಾಸನ್ ಮಾತನಾಡಿ ಇದರಲ್ಲಿ ಸಾಮ್ಯುಯಲ್ ಎಂಬ ಲೀಡ್ ರೋಲ್‌ನಲ್ಲಿ ಕಾಣಿಸಿಕೊಂಡಿದ್ದೇನೆ. ನಿರ್ದೇಶಕರು ನನ್ನ ಮೇಲೆ ನಂಬಿಕೆಯಿಟ್ಟು ದೊಡ್ಡ ಪಾತ್ರ ನೀಡಿದ್ದಾರೆ. ಅವರಿಗೆ ತೃಪ್ತಿ ಆಗೋ ಹಾಗೆ ನಟಿಸಿದ್ದೇನೆ. ಈ ಸಿನಿಮಾ ನಮ್ಮೆಲ್ಲರ ಕನಸು, ಗೆಲ್ಲಲೇಬೇಕು ಎಂದರು. ಈ ಚಿತ್ರವನ್ನು ಭಾರತ್ ಟಾಕೀಸ್ ಅಡಿ ಜೈಕುಮಾರ್, ಕೀರ್ತಿರಾಜ್ ನಿರ್ಮಾಣ ಮಾಡಿದ್ದಾರೆ. ನಾಲ್ಕು ಹಾಡುಗಳಿದ್ದು, ವಿವೇಕ್ ಚಕ್ರವರ್ತಿ ಸಂಗೀತ ನೀಡಿದ್ದಾರೆ. ಮನು ದಾಸಪ್ಪ ಅವರ ಛಾಯಾಗ್ರಹಣ, ಶ್ರೀಧರ್ ಅವರ ಸಂಕಲನ ಈ ಚಿತ್ರಕ್ಕಿದೆ.



ನಾನು ಅದು ಮತ್ತು ಸರೋಜಾ...


'ನಾನು ಅದು ಮತ್ತು ಸರೋಜಾ' ಹೀಗೊಂದು ಚಿತ್ರದ ಶೀರ್ಷಿಕೆ ಗಾಂಧಿನಗರದಲ್ಲಿ ತುಂಬಾ ಹರಿದಾಡುತ್ತಿದೆ. ವಿನಯ್ ಪ್ರೀತಂ ಕಥೆ, ಚಿತ್ರಕಥೆ ಬರೆದು ಆಕ್ಷನ್‌ಕಟ್ ಹೇಳಿರುವ ಈ ಚಿತ್ರದ ಟ್ರೈಲರ್ ಇತ್ತೀಚೆಗಷ್ಟೇ ಬಿಡುಗಡೆಯಾಯಿತು. ಅಪೂರ್ವ ಭಾರದ್ವಾಜ್, ಲೂಸ್‌ಮಾದ ಯೋಗಿ ಹಾಗೂ ದತ್ತಣ್ಣ ಚಿತ್ರದ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ವೇಶ್ಯೆಯೊಬ್ಬಳ ಸುತ್ತ ಹೆಣೆದಿರುವ ಕಥೆಯಿದು, ಈ ಸಂದರ್ಭದಲ್ಲಿ ಮಾತನಾಡಿದ ನಿರ್ದೇಶಕ ವಿನಯ್, ಟಾಪ್‌ಕಾಮಿಡಿ ಜೊತೆಗೆ ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಇಟ್ಟುಕೊಂಡು ಮಾಡಿರುವ ಈ ಚಿತ್ರ ಡಿ.30ಕ್ಕೆ ಬಿಡುಗಡೆಯಾಗುತ್ತಿದೆ. ಮುಖ್ಯವಾಗಿ ದತ್ತಣ್ಣ, ಅಪೂರ್ವ, ಯೋಗಿ ಈ ಮೂರು ಪಾತ್ರಗಳ ಮೇಲೆ ಬಹುತೇಕ ಚಿತ್ರದ ಕಥೆ ಸಾಗುತ್ತದೆ. ಅದು ಎನ್ನುವುದು ಒಂದು ಕಂಟೆಂಟ್ ಅಷ್ಟೇ, ಈ ಮೂರು ಪಾತ್ರಗಳ ಜೊತೆಗೆ ಅದು ಯಾವಾಗಲೂ ಇರುತ್ತದೆ. ಅದು ಹೇಗೆ ಎಂದು ಈಗಲೇ ಹೇಳಿದರೆ ಕುತೂಹಲ ಇರುವುದಿಲ್ಲ, ಚಿತ್ರ ರಿಲೀಸಾದ ನಂತರವಷ್ಟೇ ಗೊತ್ತಾಗುತ್ತದೆ. ಶೂಟಿಂಗ್ ಟೈಮ್‌ನಲ್ಲಿ ಕೋವಿಡ್ ನಿಬಂಧನೆ ಇದ್ದುದರಿಂದ ಸೀಮಿತ ಲೊಕೇಶನ್‌ನಲ್ಲೇ ಚಿತ್ರೀಕರಿಸಬೇಕಾಯಿತು. ಎರಡು ರಾತ್ರಿ, ಒಂದು ಹಗಲಿನಲ್ಲಿ ನಡೆಯುವ ಕಥೆಯಿದು. ನಾನು ಬರೆದಂಥ ಕಥೆಗೆ ಜೀವ ತುಂಬುವವರು ಕಲಾವಿದರು. ಎಲ್ಲರೂ ತುಂಬಾ ಚೆನ್ನಾಗಿ ಅಭಿನಯಿಸಿದ್ದಾರೆ ಎಂದರು.

ನಾಯಕಿ ಅಪೂರ್ವ ಮಾತನಾಡಿ, ವಿನಯ್ ನನಗೆ ಈ ಕಥೆ ಹೇಳಿದಾಗ ತುಂಬಾ ಎಕ್ಸೈಟ್ ಆಗಿದ್ದೆ. ಚಿತ್ರದಲ್ಲಿ ನಾನೊಬ್ಬ ಸೆಕ್ಸ್‌ವರ್ಕರ್. ಎಲ್ಲಾ ಥರದ ಎಮೋಷನ್ಸ್ ಕ್ಯಾರಿ ಮಾಡುವ ಪಾತ್ರ ನನ್ನದು. ಒಬ್ಬ ಪ್ರಾಸಿಕ್ಯೂಟ್ ಹೇಗಿರುತ್ತಾಳೆಂದು ತಿಳಿದುಕೊಳ್ಳಲು ನಿರ್ದೇಶಕರು ಒಂದಷ್ಟು ವೀಡಿಯೋಗಳನ್ನು ನನಗೆ ಕೊಟ್ಟಿದ್ದರು. ಆರಂಭದಲ್ಲಿ ಪಾತ್ರ ಮಾಡುವಾಗ ಸ್ವಲ್ಪ ಮುಜುಗರವಾಯ್ತು, ನಂತರ ಸರಿಹೋಯ್ತು. ಸಾಕಷ್ಟು ಜನ ಇಂಥ ಪಾತ್ರ ಮಾಡಲು ಹಿಂಜರಿಯುತ್ತಾರೆ. ನನ್ನ ಮೇಲೆ ನಂಬಿಕೆಯಿಟ್ಟು ನಿರ್ದೇಶಕರು ಇಂಥ ದೊಡ್ಡ ಪಾತ್ರ ನೀಡಿದ್ದರು. ಚೆನ್ನಾಗಿ ನಿಭಾಯಿಸಿದ್ದೇನೆಂಬ ನಂಬಿಕೆಯಿದೆ. ಕನ್ನಡದಲ್ಲಿ ಈ ಥರದ ಎಕ್ಸ್‌ಪೆರಿಮೆಂಟಲ್ ಸಿನಿಮಾ ತುಂಬಾ ಕಡಿಮೆ. ಎಂದರು. ಯೋಗಿ ಮಾತನಾಡಿ ಈ ಥರದ ಸಿನಿಮಾಗಳಲ್ಲಿ ಅಭಿನಯಿಸಬೇಕೆಂದು ನನಗೂ ಆಸೆಯಿತ್ತು. ದತ್ತಣ್ಣ ಅದ್ಭುತ ಕಲಾವಿದರು. ಇಂಥ ನಿರ್ಮಾಪಕರು ಬಂದಾಗ ಅವರನ್ನು ಉದ್ಯಮ ಉಳಿಸಿಕೊಳ್ಳಬೇಕು ಎಂದರು.



ಸಿನಿಪದಬಂಧ–454

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು

ವಿಳಾಸ

ದೂರವಾಣಿ ಸಂಖ್ಯೆ

ಎಡದಿಂದ ಬಲಕ್ಕೆ

1.ಟೈಟಲ್ ಭಕ್ತಿ ಪ್ರಧಾನ ಎನಿಸಿದರೂ ಇದು ಆಕ್ಷನ್, ಥ್ರಿಲ್ಲರ್ ಚಿತ್ರ 7
6.ನಗುವ ಹೂವಂತೆ ಸೊಗಸು ಹೊಳೆವ ಹೊನ್ನಂತೆ ಮನಸಿನ ಪ್ರಿಯೆಯನ್ನ ಹೀರೋ ಕರೆದ ... 7
8.ಜಗಪತಿರಾವ್ ಎನ್ನುವ ಮೊದಲೇ ಘರ್ಜಿಸುತಿದೆ 3
9. _ _ ಆಫ್ ಫುಟ್ ಪಾತ್ 2
10.ಶ್ರೀನಾಥ್ – ಮಂಜುಳ ಇವರಿಬ್ಬರ ಬಂಧನ 3
12. ಬಿ.ಆರ್. ಪಂತುಲು ಅವರ ತಾಯಿ 2
14.ಶ್ರೀರಾಮ್ ಚಿತ್ರದ ನಾಯಕಿ 3
16.ಅನಂತ್ ನಾಗ್ – ವಿನಯಪ್ರಸಾದ್ ಅಭಿನಯಕ್ಕೆ ಬಿ.ರಾಮಮೂರ್ತಿ ನಿರ್ದೇಶಕ 7
17.ಒಲವು ಜೊತೆಗಿನ ಜಯ 3
18." _ _ _ _ _ _ _ ಈ ಬಿಸಿ ಏಕೋ... ಮಾಗಿದ ಮೈಯಲ್ಲಿ ಮಿಂಚಿದು ಏಕೋ....", 7

ವಿಜೇತರು: ಸ್ವಪ್ನ ಆರ್. D/O ರವಿ.ಆರ್., #195/3, ಚಾಮಲಾಪುರ ಮೊಹಲ್ಲಾ, ಮೇದರ ಬೀದಿ, ನಂಜನಗೂಡು-571301

ಸಿನಿ ಪದಬಂಧ 453ರ ಸರಿ ಉತ್ತರ

ಅ	ರ	ಸು		ಕ	ಲಿ	ಯು	ಗ	ಕ	ರ್ಣ	
ಮ				ಶಾ				ನ್ನ		ಯ
ರ	ತ್ನ	ಮಂ	ಜ	ರಿ		ಕೋ	ದಂ	ಡ	ರಾ	ಮ
ಶಿ		ಜು				ಕಿ		ದ		ಲೋ
ಲ್ಪಿ				ರ		ಲ		ರ		ಕ
ಜ	ನು	ಮ		ವಿ	ಹ	ವಾ		ವಿ	ನೋ	ದ
ಕ		ಧು		ಶಂ		ಣಿ				ಲ್ಲಿ
ಣಾ		ರ		ಕ				ವಾ		ವೀ
ಚಾ	ರ್	ಮಿ	ನಾ	ರ್		ಕ	ನ	ಸು	ಗಾ	ರ
ರಿ		ಲ				ನ				ಪ್ಪ
	ಮಾ	ನ	ವ	ದಾ	ನ	ವ		ಟ್ರೈ	ಸ	ನ್

ಮೇಲಿನಿಂದ ಕೆಳಕ್ಕೆ

1.ವಿಷ್ಣುವಿನ ಪವಿತ್ರ ಲಾಂಛನದಲ್ಲಿ ದನಿ ಹೊರ ಹೊಮ್ಮಿದೆ 4
2. ಬಿ.ಸಿ.ಪಾಟೀಲ್ ಕೆಳದಿಯ ಅರಸನನ್ನು ನೆನಪು ಮಾಡಿಕೊಟ್ಟ 6
3.ಅಂಬಿಕಾ ಚಳಿ ತಾಳೆನು ಅಂಬಿಕಾ ಎಂದು ಉಪೇಂದ್ರ ಹಾಡಿ ಕುಣಿದ ಚಿತ್ರ 11
5.ರಾಜಾಹುಲಿಗೆ ಇರುವ ಲಕ್ಕಿ ಬಿರುದು 5
7.ಮಲ್ಲಿಗೆಯ ಊರು 3
11.ವಿಷ್ಣು,ಶಂಕರ್ ನಡುವೆ ಬಿರುಸಿನ ಸೆಣಸಾಟವೇ ಸರಿ ! 6
12.ಹಿರಿಯ ಸಹೋದರನ ಜೊತೆ ಆತನ ಹೆಂಡತಿಯೂ ಇದ್ದಾಳೆ 5
13.ಗೂಡು ಕಟ್ಟಿದ ಪಕ್ಷಿ 3
15.ರಾಮನಾಥನ ಪ್ರೇಯಸಿ ಶಾಸ್ತ್ರೀಯ ನೃತ್ಯಗಾತಿಯು ಹೌದು 4

'ಸಿನಿಬಂಧ' ವಿಭಾಗ, 'ಮೈಸೂರು ಮಿತ್ರ' ದಿನಪತ್ರಿಕೆ, ಬನ್ನಿಮಂಟಪ, ಮೈಸೂರು-570 015

ಆರ್ಥಿಕ ಸ್ವಾತಂತ್ರಕ್ಕಾಗಿ ಪ್ರಜಾರಾಜ್ಯ

ನರರೋಗ ತಜ್ಞ ಡಾ.ವರದರಾಜು ಡಿಎಸ್ ಅವರು ಕಥೆ, ಚಿತ್ರಕಥೆ ಸಂಭಾಷಣೆ ಬರೆದು ನಿರ್ಮಾಣದ ಜೊತೆಗೆ ಅಭಿನಯ ಕೂಡ ಮಾಡಿರುವ ಚಿತ್ರ ಪ್ರಜಾರಾಜ್ಯ. ಈ ಚಿತ್ರದ ಟೀಸರನ್ನು ನಟ ದೇವರಾಜ್ ಅವರು ಬಿಡುಗಡೆ ಮಾಡಿದರು. ವಿಜಯ ಭಾರ್ಗವ ಅವರ ನಿರ್ದೇಶನವಿರುವ ಈ ಚಿತ್ರದಲ್ಲಿ ರಾಜಕೀಯ ಮುಖಂಡನಾಗಿ ದೇವರಾಜ್ ಅವರು ಕಾಣಿಸಿಕೊಂಡಿದ್ದಾರೆ. ಈಗಿನ ರಾಜಕೀಯದಲ್ಲಿರುವ ಲೋಪದೋಷಗಳನ್ನು ಎತ್ತಿಹಿಡಿದು, ಅದಕ್ಕೆ ಪರಿಹಾರವನ್ನೂ ಹೇಳುವ ಪ್ರಯತ್ನ ಈ ಚಿತ್ರದಲ್ಲಿದೆ. ನಿರ್ಮಾಪಕ ಒಬ್ಬ ವೈದ್ಯರಾಗಿದ್ದು, ಸಾಮಾಜಿಕ ಕಾಳಜಿಯಿಂದ ಈ ಚಿತ್ರವನ್ನು ನಿರ್ಮಿಸಿದ್ದಾರೆ ಎಂದು ದೇವರಾಜ್ ಹೇಳಿದರು.

ಭಾರತಕ್ಕೆ ಸ್ವಾತಂತ್ರ್ಯ ಬಂದು 75 ವರ್ಷಗಳಾಗಿದೆ. ನಮ್ಮ ತಾತಂದಿರ ಕಾಲದಲ್ಲಿ ಸ್ವಾತಂತ್ರ್ಯದ ರಜತ ಮಹೋತ್ಸವ ಆಚರಿಸಿದರು. ನಮ್ಮ ತಂದೆಯ ಕಾಲದವರು ಸುವರ್ಣ ಮಹೋತ್ಸವ ಆಚರಣೆ ಮಾಡಿದರು. ನಾವು ಈಗ ಸ್ವಾತಂತ್ರ್ಯದ ಅಮೃತ ಮಹೋತ್ಸವ ಆಚರಿಸುತ್ತಿದ್ದೇವೆ. ಇಷ್ಟು ವರ್ಷವಾದರೂ ನಾವು ಯೋಚಿಸುವುದು ನಮಗೆ ಸ್ವಾತಂತ್ರ್ಯ ತಂದುಕೊಟ್ಟವರು ಯಾರು ಅಂತ. ಆದರೆ ನಮಗೆ ಬೇಕಾದ ಆರ್ಥಿಕ ಸ್ವಾತಂತ್ರ್ಯದ ಬಗ್ಗೆ ನಾವು ಒಮ್ಮೆಯೂ ಯೋಚಿಸಿಯೇ ಇಲ್ಲ. ಅಂಬೇಡ್ಕರ್ ಅವರು ಸಂವಿಧಾನದಲ್ಲಿ ಆರ್ಥಿಕ ಸ್ವಾತಂತ್ರ್ಯದ ಬಗ್ಗೆ ಯೋಚಿಸಿ ಎಂದು ಹೇಳಿದ್ದಾರೆ. ನಾವ್ಯಾರೂ ಅದರ ಬಗ್ಗೆ ಯೋಚಿಸುತ್ತಲೇ ಇಲ್ಲ. ಎಂಬ ಅಂಶದೊಂದಿಗೆ ಈ ಚಿತ್ರವನ್ನು ನಿರ್ಮಿಸಲಾಗಿದೆ ಎಂದು ನಿರ್ಮಾಪಕ ಡಾ।ವರದರಾಜು ಅವರು ಮಾಹಿತಿ ನೀಡಿದರು.

ಗೋಬರ್ ಧನ್ ಸೇರಿದಂತೆ ವಿವಿಧ ಕಾಮಗಾರಿಗೆ ಅನುಮೋದನೆ

ಮಂಡ್ಯ, ಡಿ.22– ಜಿಲ್ಲೆಯಲ್ಲಿ ನೀರು ಮತ್ತು ನೈರ್ಮಲ್ಯ ವಿಷಯದಲ್ಲಿ ಮಹತ್ವದ ಹೆಜ್ಜೆ ಇಡಲು ಯೋಜಿಸಲಾಗಿದ್ದು, ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಮಲ ತ್ಯಾಜ್ಯ ನಿರ್ವಹಣಾ ಘಟಕ, ಗೋಬರ್ ಧನ್ ಮತ್ತು ಎಂಆರ್‌ಎಫ್ ಘಟಕಗಳ ಯೋಜನೆಗಳಿಗೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶಾಂತ ಎಲ್.ಹುಲ್ಮನಿ ಅವರ ಅಧ್ಯಕ್ಷತೆಯಲ್ಲಿ ನಡೆದ ನೀರು ಮತ್ತು ನೈರ್ಮಲ್ಯ ಸಮಿತಿಯಲ್ಲಿ ಅನುಮೋದನೆ ನೀಡಲಾಯಿತು.



ಜಿಪಂ ಸಭಾಂಗಣದಲ್ಲಿ ನಡೆದ ಸಭೆಯಲ್ಲಿ ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಶ್ರೀರಂಗಪಟ್ಟಣ ತಾಲೂಕಿನ ಬೆಳಗೊಳ ಗ್ರಾಮ ವ್ಯಾಪ್ತಿಯಲ್ಲಿ ಮಲ ತ್ಯಾಜ್ಯ ನಿರ್ವಹಣಾ ಘಟಕ, ನಾಗಮಂಗಲ ಚುಂಚನಹಳ್ಳಿ ಗ್ರಾಪಂ ವ್ಯಾಪ್ತಿಯ ಆದಿ ಚುಂಚನಗಿರಿಯಲ್ಲಿ ಗೋಬರ್ ಧನ್ ಘಟಕ ಮತ್ತು ಮದ್ದೂರು ತಾಲೂಕಿನ ಗೊರವನಹಳ್ಳಿ ಗ್ರಾಪಂ ವ್ಯಾಪ್ತಿಯಲ್ಲಿ ಎಂಆರ್‌ಎಫ್ (ತ್ಯಾಜ್ಯ ನಿರ್ವಹಣಾ ಘಟಕ) ಘಟಕ ನಿರ್ಮಾಣ ಮಾಡಲು ಸಮಿತಿ ಅನುಮೋದನೆ ನೀಡಿತು.

ಜಲ ಜೀವನ ಮಿಷನ್ ಯೋಜನೆಯಡಿ ಜಿಲ್ಲೆಯ ಎಲ್ಲಾ ಗ್ರಾಮ ಮತ್ತು ಜನವಸತಿಗಳಲ್ಲಿನ ನಲ್ಲಿ ಸಂಪರ್ಕ ಹೊಂದಿಲ್ಲದ ಎಲ್ಲಾ ಕುಟುಂಬಗಳಿಗೂ ನಲ್ಲಿ ಸಂಪರ್ಕ ಕಲ್ಪಿಸಲು ಸಿದ್ಧಪಡಿಸಲಾಗಿರುವ ಯೋಜನೆ ಸುಸ್ಥಿರವಾಗಿರುವ ಬಗ್ಗೆ ಖಚಿತಪಡಿಸಿಕೊಳ್ಳಲು ರಾಜ್ಯ ಸರ್ಕಾರವು ಸುಸ್ಥಿರ ಯೋಜನೆ ಅನ್ನು ಸಿದ್ಧಪಡಿಸಿ ಸಲ್ಲಿಸಬೇಕಿರುತ್ತದೆ. ಈ ಹಿನ್ನಲೆಯಲ್ಲಿ ಜಿಲ್ಲೆಯ 1984 ಗ್ರಾಮ/ಜನವಸತಿಗಳಲ್ಲಿಯೂ ಕೂಡ ಜಲ ಜೀವನ ಮಿಷನ್ ಯೋಜನೆಯನ್ನು ವಿವಿಧ ಹಂತಗಳಲ್ಲಿ ತೆಗೆದುಕೊಂಡು ಅನುಷ್ಠಾನಗೊಳಿಸಲಾಗುತ್ತಿರುವ ಬಗ್ಗೆ ಯೋಜನೆಸಿದ್ಧಪಡಿಸಲಾಗಿದೆ ಎಂದರು.

ಸಭೆಯಲ್ಲಿ ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಧನಂಜಯ್ ಸೇರಿದಂತೆ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಜೆಡಿಎಸ್‌ಗೆ ಅಧಿವೇಶನ ಮುಖ್ಯವೋ ಪಂಚರತ್ನ ಯಾತ್ರೆ ಮುಖ್ಯವೋ?

ಮಾಜಿ ಸಚಿವ ಚಲುವರಾಯಸ್ವಾಮಿ ಪ್ರಶ್ನೆ

ಮಂಡ್ಯ, ಡಿ.22– ಜೆಡಿಎಸ್‌ಗೆ ಉತ್ತರ ಕರ್ನಾಟಕದ ಸಮಸ್ಯೆ ಬಗ್ಗೆ ಚರ್ಚಿಸಲು ಕರೆದಿರುವ ಬೆಳಗಾವಿ ಅಧಿವೇಶನ ಮುಖ್ಯವೋ ಅಥವಾ ಪಂಚರತ್ನ ಯಾತ್ರೆ ಮುಖ್ಯವೋ? ಎಂದು ಮಾಜಿ ಸಚಿವ ಎನ್. ಚಲುವರಾಯಸ್ವಾಮಿ ಪ್ರಶ್ನಿಸಿದರು.



ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹೆಚ್‌ಡಿಕೆ ಅವರು ಸದನಕ್ಕಿಂತ ಪಂಚರತ್ನ ಯಾತ್ರೆಯೇ ಮುಖ್ಯ ಎನ್ನುವಂತೆ ವರ್ತಿಸುತ್ತಿದ್ದಾರೆ. ಹೀಗೆಂದ ಮೇಲೆ ಅವರು ಸದನಕ್ಕೆ ಏಕೆ ಹೋಗಬೇಕು. ಒಂದೆಡೆ ಮಂಡ್ಯದಲ್ಲಿ ರೈತರು ಪ್ರತಿಭಟನೆ ಮಾಡುತ್ತಿದ್ದರೆ ಇವರೂ ಮಾತ್ರ ಪಂಚರತ್ನ ಯಾತ್ರೆ ನಡೆಸುತ್ತಿದ್ದಾರೆ ಎಂದು ಹರಿಹಾಯ್ದರು.

ಮಂಡ್ಯದಲ್ಲಿ ರೈತರು 45 ದಿನಗಳಿಂದ ಪ್ರತಿಭಟನೆ ನಡೆಸುತ್ತಿದ್ದು, ಈ ಬಗ್ಗೆ ಸದನದಲ್ಲಿ ಧ್ವನಿ ಎತ್ತಬೇಕಾದ ಜಿಲ್ಲೆಯ ಶಾಸಕರು ಪಂಚರತ್ನ ಯಾತ್ರೆಯಲ್ಲಿ ನಿರತರಾಗಿದ್ದಾರೆ. ಜಿಲ್ಲೆಯಲ್ಲಿ 6 ಮಂದಿ ಶಾಸಕರು ಮತ್ತು ಸಚಿವರು ಇದ್ದರೂ ಯಾವುದೇ ಪ್ರಯೋಜನವಾಗಿಲ್ಲ ಎಂದರು.

ಸಿದ್ದರಾಮಯ್ಯ ಆಡಳಿತದಲ್ಲಿ ಜಿಲ್ಲೆಗೆ 75 ಸಾವಿರ ವಸತಿ: ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಜಿಲ್ಲೆಗೆ 75 ಸಾವಿರ ಆಶ್ರಯ ಮನೆಗಳನ್ನು ನೀಡಿದ್ದಾರೆ. ಆದರೆ, ಕುಮಾರಸ್ವಾಮಿ ಹಾಗೂ ಈಗಿನ ಬಸವರಾಜ ಬೊಮ್ಮಾಯಿ ಅವಧಿಯಲ್ಲಿ ಜನರಿಗೆ ಹೆಚ್ಚು ಆಶ್ರಯ ಮನೆಗಳನ್ನು ನೀಡಿಲ್ಲ. ಬಿಜೆಪಿ ಅವಧಿಯಲ್ಲಿ ಕೇವಲ 50 ಮನೆಗಳನ್ನು ವಿತರಿಸಿದ್ದು, ಅದು ಇನ್ನೂ ನೀಡಲಾಗಿಲ್ಲ ಎಂದು ಆರೋಪಿಸಿದರು.

ಒಕ್ಕಲಿಗ ಮೀಸಲಾತಿ ಹೆಚ್ಚಳಕ್ಕೆ ಹೋರಾಟ: ಒಕ್ಕಲಿಗ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಿಸುವಂತೆ ಆಗ್ರಹಿಸಿ ಚುಂಚಶ್ರೀಗಳ ನೇತೃತ್ವದಲ್ಲಿ ಹೋರಾಟ ನಡೆಸಲಾಗುವುದು. ರಾಜ್ಯದಲ್ಲಿ ಒಕ್ಕಲಿಗ ಸಮುದಾಯದ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿಯನ್ನು ಶೇ.15ಕ್ಕೆ ಹೆಚ್ಚಳ ಮಾಡಬೇಕು ಎಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಸಚಿವ ಎಂ.ಎಸ್. ಆತ್ಮಾನಂದ, ಮಾಜಿ ಶಾಸಕರಾದ ರಮೇಶ್‌ಬಾಬು ಬಂಡಿಸಿದ್ದೇಗೌಡ ಕೆ.ಬಿ.ಚಂದ್ರಶೇಖರ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್, ಮುಖಂಡರಾದ ಗಣಿಗ ರವಿಕುಮಾರ್, ಅಂಜನಾ ಶ್ರೀಕಾಂತ್,ವಿಜಯ್ ಕುಮಾರ್, ರುದ್ರಪ್ಪ, ಗುರುಚರಣ್ ಉಪಸ್ಥಿತರಿದ್ದರು.

ಮಾರ್ಗದುದ್ದಕ್ಕೂ ಪಂಚರತ್ನ ಯಾತ್ರೆಗೆ ಅದ್ಧೂರಿ ಸ್ವಾಗತ

ಮಂಡ್ಯ, ಡಿ.22– ನಿನ್ನೆ ಮದ್ದೂರಿನಲ್ಲಿ ಯಾತ್ರೆ ಮುಗಿಸಿ ಗೆಜ್ಜಲಗೆರೆ ಯಲ್ಲಿ ವಾಸ್ತವ್ಯ ಮಾಡಿದ್ದ ರಥಯಾತ್ರೆ ಗುರುವಾರ ಮಧ್ಯಾಹ್ನ 12 ಗಂಟೆ ವೇಳೆಗೆ ಶಾಸಕ ಎಂ.ಶ್ರೀನಿವಾಸ್ ಸ್ವಗ್ರಾಮ ಮಂಡ್ಯ ತಾಲೂಕಿನ ಹನಕೆರೆ ಪ್ರವೇಶಿಸಿತು. ಈ ವೇಳೆ ಪಂಚರತ್ನ ಯಾತ್ರೆಯನ್ನು ಪೂರ್ಣಕುಂಭದೊಂದಿಗೆ ಅದ್ಧೂರಿ ಯಾಗಿ ಸ್ವಾಗತಿಸಲಾಯಿತು.



ಅದ್ಧೂರಿ ಸ್ವಾಗತ: ಹನಕೆರೆಯಿಂದ ಮಂಡ್ಯಕ್ಕೆ ಬರುವ ಮಾರ್ಗದುದ್ದಕ್ಕೂ ರಸ್ತೆ ಬದಿ ನಿಂತಿದ್ದ ನೂರಾರು ಜನರು, ಮಹಿಳೆಯರು, ಮಕ್ಕಳು ಹೆಚ್‌ಡಿಕೆ ಪರ ಘೋಷಣೆ ಕೂಗಿ, ನಿಖಿಲ್ ಕುಮಾರ್ ಸ್ವಾಮಿ ಸೇರಿದಂತೆ ಜೆಡಿಎಸ್ ಮುಖಂಡರಿಗೆ ಅದ್ಧೂರಿ ಸ್ವಾಗತ ಕೋರಿದರು. ದಾರಿಯುದ್ದಕ್ಕೂ ತುಳಸಿ, ಹೂವಿನ ಹಾರ, ಕಬ್ಬು ಜೋಳ, ಕೊಬ್ಬರಿ– ಬೆಲ್ಲ ಸೇರಿದಂತೆ ನಾನಾ ಬಗೆಯ ಹಾರವನ್ನು ಕುಮಾರಸ್ವಾಮಿಗೆ ಹಾಕಲಾಯಿತು.

ಹನಕೆರೆ, ಹಳೇ ಬೂದನೂರು, ಉಮ್ಮಡಹಳ್ಳಿ ಗೇಟ್, ಅಸ್ಟೇಟ್ ಟೌನ್, ಸ್ವರ್ಣಸಂದ್ರ, ಫ್ಯಾಕ್ಟರಿ ವೃತ್ತ, ನಂದಾ ವೃತ್ತದ ಮೂಲಕ ಮಂಡ್ಯ ನಗರ ಪ್ರವೇಶಿಸಿ ಸಿಲ್ವರ್ ಜ್ಯುಬಿಲಿ ಪಾರ್ಕ್‌ನಲ್ಲಿ ಬೃಹತ್ ಸಮಾವೇಶ ನಡೆಯಿತು.

ಸಮಸ್ಯೆ ಹೇಳಿಕೊಂಡ ವಿದ್ಯಾರ್ಥಿನಿ ಯರು: ಯಾತ್ರೆ ಮಂಡ್ಯ ಸರ್ಕಾರಿ ಮಹಿಳಾ ಕಾಲೇಜು ಬಳಿ ಬರುತ್ತಿದ್ದಂತೆ ಕಾಲೇಜಿಗೆ ಸಾಮೂಹಿಕ ರಜೆ ಹಾಕಿ ಗೇಟ್ ಬಳಿ ಬಂದ ನೂರಾರು ವಿದ್ಯಾರ್ಥಿನಿಯರು, ಕಾಲೇಜಿಗೆ ಬರಲು ಬಸ್ ಸಮಸ್ಯೆ ಉನ್ನತ ಶಿಕ್ಷಣಕ್ಕೆ ಲ್ಯಾಪ್ ಟಾಪ್ ಸಮಸ್ಯೆ ಆಗುತ್ತಿರುವ ಬಗ್ಗೆ ಮನವರಿಕೆ ಮಾಡಿದರು. ಈ ವೇಳೆ ಕುಮಾರಸ್ವಾಮಿ ಸಮಸ್ಯೆ ಬಗೆಹರಿಸುವ ಭರವಸೆ ನೀಡಿದರು.

ಹಲವರು ಜೆಡಿಎಸ್ ಸೇರ್ಪಡೆ: ಗುಂಡ್ಲುಪೇಟೆ ಸಮಾಜ ಸೇವಕ ಕಡಬೂರು ಮಂಜುನಾಥ್ ಸೇರಿದಂತೆ ನೂರಾರು ಮುಖಂಡರು ಬಿಜೆಪಿ ಹಾಗೂ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಿದರು. ಈ ವೇಳೆ ಕಡಬೂರು ಮಂಜುನಾಥ್ ಅವರನ್ನು ಗುಂಡ್ಲುಪೇಟೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯನ್ನಾಗಿ ಕುಮಾರಸ್ವಾಮಿ ಘೋಷಿಸಿದರು.

ನಗರದ ಸಿಲ್ವರ್ ಜ್ಯುಬಿಲಿ ಪಾರ್ಕ್‌ನಲ್ಲಿ ಬಹಿರಂಗ ಸಭೆ 6 ಗಂಟೆಗೆ ಮುಕ್ತಾಯವಾಯಿತು. ಬಳಿಕ ಕುಮಾರಸ್ವಾಮಿ ಅವರ ಪಂಚರತ್ನ ಯಾತ್ರೆ ಮಂಡ್ಯದ ಕಾರಿಮನೆ ಗೇಟ್ ಮೂಲಕ ಚಿಕ್ಕಮಂಡ್ಯ, ಸಾತನೂರು, ಹುಲಿವಾನ, ಕೆರಗೋಡು, ಹಲ್ಲೆಗೆರೆ ಪ್ರವೇಶಿಸಿ, ಹಲ್ಲೆಗೆರೆಯಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಹೆಚ್‌ಡಿಕೆ ಮಾತನಾಡಿದರು.

ಗ್ರಾಮ ವಾಸ್ತವ್ಯ: ದೊಡ್ಡಗರುಡನಹಳ್ಳಿ, ಬಸರಾಳು, ಚಂದಗಾಲು, ಉಪ್ಪರಕನ ಹಳ್ಳಿ, ಬಿಳಿದೇಗುಲು ಮೂಲಕ ಬಿ. ಹೊಸೂರು ಗ್ರಾಮ ಪ್ರವೇಶಿಸಿ ಅದೇ ಗ್ರಾಮದಲ್ಲಿ ಕುಮಾರಸ್ವಾಮಿ ಗ್ರಾಮ ವಾಸ್ತವ್ಯ ಮಾಡಿದರು. ಬಿ.ಹೊಸೂರು ಗ್ರಾಮಕ್ಕೆ ಆಗಮಿಸುವ ವೇಳೆ ತಡ ರಾತ್ರಿಯಾಗಿತ್ತು. ಶುಕ್ರವಾರ ಶ್ರೀರಂಗ ಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಪಂಚರತ್ನ ಯಾತ್ರೆ ನಡೆಯಲಿದೆ.

ಪಾಂಡವ ಕ್ರೀಡಾಂಗಣದ ಚರಂಡಿ ಸ್ಲ್ಯಾಬ್ ದುರಸ್ತಿಗೆ ಆಗ್ರಹ


ಪಾಂಡವಪುರ, ಡಿ.22– ಇತ್ತೀಚೆಗೆ ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ನಡೆದ ಬಿಜೆಪಿ ಜನಸಂಕಲ್ಪ ಯಾತ್ರೆ ವೇಳೆ ಕ್ರೀಡಾಂಗಣದ ಒಳಚರಂಡಿ ಮೇಲೆ ಹಾಕಿದ್ದ ಸ್ಲ್ಯಾಬ್‌ಗಳು ಹಾಳಾಗಿದ್ದು, ಇದರಿಂದ ಸಾರ್ವಜನಿಕರು, ಕ್ರೀಡಾಪಟುಗಳು ತೊಂದರೆ ಅನುಭವಿಸುವಂತಾಗಿದೆ.



ಪುನೀತೋತ್ಸವ ಅಂಗವಾಗಿ ಶಾಸಕ ಸಿ.ಎಸ್.ಪುಟ್ಟರಾಜು ಪಾಂಡವ ಕ್ರೀಡಾಂಗಣವನ್ನು ಸಂಪೂರ್ಣವಾಗಿ ಅಭಿವೃದ್ಧಿ ಪಡಿಸಿದ್ದರು. ಕ್ರೀಡಾಂಗಣ ಸುಣ್ಣಬಣ್ಣ ಕಂಡಿತು. ವಿದ್ಯುತ್ ಸಂಪರ್ಕ ಕಲ್ಪಿಸಿ, ಒಳಚರಂಡಿ ಸ್ಲ್ಯಾಬ್‌ಗಳನ್ನು ದುರಸ್ತಿಪಡಿಸಿದ್ದರು. ಆದರೆ, ಡಿ.16 ರಂದು ಸಿಎಂ ಬಸವರಾಜ ಬೊಮ್ಮಾಯಿ ನೇತೃತ್ವದಲ್ಲಿ ನಡೆದ ಬಿಜೆಪಿ ಜನಸಂಕಲ್ಪ ಕಾರ್ಯಕ್ರಮದಲ್ಲಿ ಕ್ರೀಡಾಂಗಣದ ಒಳಚರಂಡಿಗೆ ಹಾಕಿದ್ದ ಹಲವು ಸ್ಲ್ಯಾಬ್‌ಗಳನ್ನು ಮುರಿದು ಹಾಕಿದ್ದಾರೆ. ಇದು ಸಾರ್ವಜನಿಕರ ಆಕ್ರೋಶಕ್ಕೆ ಕಾರಣವಾಗಿದೆ ಕ್ರೀಡಾಂಗಣದಲ್ಲಿ ವಾಕಿಂಗ್ ಮಾಡಲು ಮಹಿಳೆಯರು, ಮಕ್ಕಳು ಸಾರ್ವಜನಿಕರು ಬರುತ್ತಾರೆ. ವಿದ್ಯಾರ್ಥಿಗಳು, ಕ್ರೀಡಾಪಟುಗಳು ಕ್ರೀಡೆಗಳಲ್ಲಿ ಭಾಗವಹಿಸುತ್ತಾರೆ. ಈಗ ಕ್ರೀಡಾಂಗಣದಲ್ಲಿ ಸ್ಲ್ಯಾಬ್‌ಗಳು ಮುರಿದಿರುವು ದರಿಂದ ಸಾರ್ವಜನಿಕರಿಗೆ ಸಾಕಷ್ಟು ತೊಂದರೆ ಉಂಟಾಗುತ್ತಿದೆ. ಆಟವಾಡುವ ವೇಳೆ ವಿದ್ಯಾರ್ಥಿಗಳು ಚರಂಡಿಗೆ ಕಾಲು ಹಾಕಿ ಗಾಯ ಮಾಡಿಕೊಂಡಿರುವ ಘಟನೆ ನಡೆದಿವೆ. ಒಳಚರಂಡಿ ಸ್ಲ್ಯಾಬ್‌ಗಳನ್ನು ದುರಸ್ತಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಸಹಾಯ ಮಾಡುವ ಮನೋಭಾವ ಬೆಳೆಸಿಕೊಳ್ಳಿ: ನಟ ದರ್ಶನ್

ಶ್ರೀರಂಗಪಟ್ಟಣ, ಡಿ.22– ವಿದ್ಯಾರ್ಥಿಗಳು ಸಾಮಾಜಿಕ ಕಾಳಜಿ ಮೈಗೂಡಿಸಿಕೊಳ್ಳಬೇಕಿದ್ದು, ಸಮಾಜಕ್ಕೆ ಸಹಾಯ ಮಾಡುವ ಮನೋಭಾವ ಪ್ರತಿಯೊಬ್ಬರಲ್ಲೂ ಮೂಡಬೇಕು ಎಂದು ನಟ ದರ್ಶನ್ ತಿಳಿಸಿದರು.



ತಾಲೂಕಿನ ಕೆಆರ್‌ಎಸ್ ಸರ್ಕಾರಿ ಕಾಲೇಜಿಗೆ ಎಂ.ಶಂಕರೇಗೌಡ ಟ್ರಸ್ಟ್‌ನಿಂದ ನೀಡಲಾದ ಅಗತ್ಯ ಪರಿಕರ ವಿತರಿಸಿ ಮಾತನಾಡಿದ ಅವರು, ಇಂದಿನ ವಿದ್ಯಾರ್ಥಿಗಳೇ ನಾಳಿನ ಪ್ರಭುಗಳು. ಇಂದು ಶಿಕ್ಷಣಕ್ಕೆ ಹೆಚ್ಚಿನ ಮನ್ನಣೆ ದೊರೆಯುತ್ತಿದೆ. ಅಗ್ರ ಶ್ರೇಯಾಂಕದಲ್ಲಿ ತೇರ್ಗಡೆ ಹೊಂದಿ ಅತ್ಯುನ್ನತ ಸ್ಥಾನ ಅಲಂಕರಿಸಿರುವವರನ್ನು ಸ್ಫೂರ್ತಿಯಾಗಿ ತೆಗೆದುಕೊಳ್ಳಬೇಕು ಎಂದರು.

ಶಂಕರೇಗೌಡ ಚಾರಿಟಬಲ್ ಟ್ರಸ್ಟ್ ಮುಖ್ಯಸ್ಥ ಇಂಡುವಾಳು ಸಚ್ಚಿದಾನಂದ ಮಾತನಾಡಿ, ಟ್ರಸ್ಟ್ ವತಿಯಿಂದ ಈಗಾಗಲೇ ಹತ್ತು ಹಲವು ಸಾಮಾಜಿಕ ಕಾರ್ಯ ಹಮ್ಮಿಕೊಂಡು ಬರುತ್ತಿದ್ದೇವೆ. ಇದೀಗ ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಶಿಕ್ಷಣಕ್ಕೆ ಅನುಕೂಲವಾಗಲೆಂಬ ನಿಟ್ಟಿನಲ್ಲಿ ಕ್ಷೇತ್ರದ ಹಲವು ಶಾಲಾ–ಕಾಲೇಜುಗಳಿಗೆ ಅಗತ್ಯ ಪರಿಕರಗಳನ್ನು ನೀಡುತ್ತಿದ್ದು, ವಿದ್ಯಾರ್ಥಿಗಳು ಇವುಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು.

ಜೆಸಿಬಿ ಮೂಲಕ ಕಬ್ಬಿನ ಹಾರ ಹಾಕಿ ದರ್ಶನ್ ಸ್ವಾಗತಿಸಿದ ಅಭಿಮಾನಿಗಳು ಹೂ ಮಳೆ ಸುರಿಸಿ ತಮ್ಮ ನೆಚ್ಚಿನ ನಟನಿಗೆ ಜೈಕಾರ ಕೂಗಿದರು. ಬಳಿಕ ಹುಲಿಕೆರೆ, ಬೆಳಗೊಳ, ಪಾಲಹಳ್ಳಿ, ನಗುವನಹಳ್ಳಿ, ಮೇಳಾಪುರ, ಮಹದೇವಪುರ, ಚಿಕ್ಕಂಕನಹಳ್ಳಿ ಗ್ರಾಮಗಳ ಸರ್ಕಾರಿ ಶಾಲೆಗಳಿಗೆ ಅಗತ್ಯ ಪರಿಕರಗಳನ್ನು ವಿತರಿಸಿ ವಿದ್ಯಾರ್ಥಿಗಳಿಗೆ ಶುಭ ಕೋರಿದರು. ರಸ್ತೆಯುದ್ದಕ್ಕೂ ನೆರೆದಿದ್ದ ಅಭಿಮಾನಿಗಳು ಜೈಕಾರ ಕೂಗಿ ಸಂತಸ ವ್ಯಕ್ತಪಡಿಸಿದರು.

ಭತ್ತ, ರಾಗಿ ನೋಂದಣಿ ಆರಂಭ: ತಹಸೀಲ್ದಾರ್ ರೂಪ

ಕೆ.ಆರ್.ಪೇಟೆ, ಡಿ.22– ತಾಲೂಕಿನಲ್ಲಿ ರಾಜ್ಯ ಸರ್ಕಾರದ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಭತ್ತ ಮತ್ತು ರಾಗಿ ಖರೀದಿ ಕೇಂದ್ರಗಳನ್ನು ತೆರೆಯಲಾಗಿದೆ ಎಂದು ತಹಸೀಲ್ದಾರ್ ಎಂ.ವಿ.ರೂಪ ತಿಳಿಸಿದರು.



ಪಟ್ಟಣದ ತಾಲೂಕು ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭತ್ತವನ್ನು ಕ್ವಿಂಟಾಲ್‌ಗೆ 2040ರೂ., ರಾಗಿ ಕ್ವಿಂಟಾಲ್‌ಗೆ 3578 ರೂ. ಬೆಂಬಲ ಬೆಲೆ ನಿಗದಿಪಡಿಸ ಲಾಗಿದೆ. ಖರೀದಿ ಪ್ರಕ್ರಿಯೆ ಜ.1ರಿಂದ ಆರಂಭವಾಗಲಿದೆ. ಭತ್ತ ಮತ್ತು ರಾಗಿ ಬೆಳೆದಿರುವ ರೈತರ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ. ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ಆರ್‌ಟಿಸಿ ದಾಖಲೆ ನೀಡಿ ನೋಂದಣಿ ಮಾಡಿಸಿಕೊಳ್ಳುವಂತೆ ತಿಳಿಸಿದರು.

ನೋಂದಣಿ ಕೇಂದ್ರ: ಎಪಿಎಂಸಿ ಕಚೇರಿ, ಕೆ.ಆರ್.ಪೇಟೆ ಟೌನ್, ರೈತ ಸಂಪರ್ಕ ಕೇಂದ್ರ ತೆಂಡೇಕೆರೆ, ರೈತ ಸಂಪರ್ಕ ಕೇಂದ್ರ ಸಂತೇಬಾಚಹಳ್ಳಿ, ರೈತ ಸಂಪರ್ಕ ಕೇಂದ್ರ ಅಕ್ಕಿಹೆಬ್ಬಾಳು, ರೈತ ಸಂಪರ್ಕ ಕೇಂದ್ರ ಬೂಕನಕೆರೆ, ರೈತ ಸಂಪರ್ಕ ಕೇಂದ್ರ ಕಿಕ್ಕೇರಿ ಇಲ್ಲಿ ರೈತರು ತಮ್ಮ ಹೆಸರು ನೋಂದಾಯಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

ಭತ್ತ, ರಾಗಿ ಖರೀದಿ ಕೇಂದ್ರ: ಕೆ.ಆರ್.ಪೇಟೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣ, ಎಪಿಎಂಸಿ ಉಪ ಮಾರುಕಟ್ಟೆ ಆವರಣ ಕಿಕ್ಕೇರಿ ಖರೀದಿ ಕೇಂದ್ರವನ್ನು ತೆರೆಯಲಾಗಿದೆ. ಹೆಚ್ಚಿನ ಮಾಹಿತಿಗೆ ಕೃಷಿ ಇಲಾಖೆ ರೈತ ಸಂಪರ್ಕ ಕೇಂದ್ರ ಹಾಗೂ ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಲ, ಪಾಂಡವಪುರ– ನಾಗಮಂಗಲ ಮುಖ್ಯ ರಸ್ತೆ, ಪಾಂಡವಪುರ ಅಥವಾ ತಾಲೂಕು ಆಹಾರ ಶಾಖೆ ಸಂಪರ್ಕಿಸಬಹುದು ಎಂದು ತಹಶೀಲ್ದಾರ್ ತಿಳಿಸಿದ್ದಾರೆ.

ನಾಳೆಯಿಂದ 'ಅರಮನೆ ಫಲಪುಷ್ಪ ಪ್ರದರ್ಶನ'


● ಜ.2ರವರೆಗೆ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ● ಬೆಳಿಗ್ಗೆ 10 ರಿಂದ ರಾತ್ರಿ 9 ರವರೆಗೆ ಫಲಪುಷ್ಪ ಪ್ರದರ್ಶನ; ಸಂಜೆ 7 ರಿಂದ 9 ರವರೆಗೆ ವಿವಿಧ ಮನರಂಜನೆ

ಮೈಸೂರು, ಡಿ.22(ಎಂಕೆ)– ಮೈಸೂರು ಅರಮನೆ ಆವರಣದಲ್ಲಿ ಡಿ.24ರಿಂದ ಜ.2ರವರೆಗೆ 'ಅರಮನೆ ಫಲಪುಷ್ಪ ಪ್ರದರ್ಶನ' ಆಯೋಜಿಸಲಾಗಿದೆ.

ಅರಮನೆ ಮಂಡಳಿಯಿಂದ 10 ದಿನಗಳ 'ಫಲಪುಷ್ಪ ಪ್ರದರ್ಶನ' ಹಾಗೂ 'ಸಾಂಸ್ಕೃತಿಕ ಕಾರ್ಯಕ್ರಮ'ಗಳಿಗೆ ಡಿ.24ರಂದು ಸಂಜೆ 5 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಲಿದ್ದಾರೆ. ಶಾಸಕ ಎಸ್.ಎ.ರಾಮದಾಸ್ ಅಧ್ಯಕ್ಷತೆ ವಹಿಸಲಿದ್ದು, ಮೇಯರ್ ಶಿವಕುಮಾರ್ ಸೇರಿದಂತೆ ಸ್ಥಳೀಯ ಶಾಸಕರು, ಸಂಸದರು, ನಿಗಮ ಮಂಡಳಿಗಳ ಅಧ್ಯಕ್ಷರು ಭಾಗವಹಿಸಲಿದ್ದಾರೆ.

ಸಾಂಸ್ಕೃತಿಕ ಕಾರ್ಯಕ್ರಮಗಳು: ಸಂಜೆ 6.30 ರಿಂದ 7.15ರವರೆಗೆ ಯದು ಕುಮಾರ್ ಅವರಿಂದ 'ವಾದ್ಯಗೋಷ್ಠಿ', 7.30ರಿಂದ 9.30ರವರೆಗೆ ಕಲಾವಿದ ಶ್ರೀಧರ್ ಜೈನ್ ಮತ್ತು ತಂಡದ 500 ಕಲಾವಿದರಿಂದ ವೈವಿಧ್ಯಮಯ ಸಾಂಪ್ರದಾಯಿಕ 'ಮೇರಾ ಭಾರತ್' ನೃತ್ಯ ಪ್ರದರ್ಶನ ನಡೆಯಲಿದೆ. ಡಿ.25 ರಂದು ಸಂಜೆ 6 ಗಂಟೆಯಿಂದ 6.45ರವರೆಗೆ ಕು.ಗುರುದತ್ತ ನಾಗರಾಜ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ', 7 ರಿಂದ 9ರವರೆಗೆ ಖ್ಯಾತ ಹಿನ್ನಲೆಗಾಯಕ ರಾಜೇಶ್‌ಕೃಷ್ಣ ಮತ್ತು ಜೋಗಿ ಸುನೀತ ತಂಡದಿಂದ 'ಸಂಗೀತ ರಸಸಂಜೆ' ನಡೆಯಲಿದೆ.

ಡಿ.26 ರಂದು ಸಂಜೆ 6 ರಿಂದ 6.45ರವರೆಗೆ ಬಿ.ಎನ್.ಗಾಯತ್ರಿದೇವಿ ಅವರಿಂದ 'ಶಾಸ್ತ್ರೀಯ ಸಂಗೀತ', 7



ರಿಂದ 7.30ರವರೆಗೆ ನಿತ್ಯ ನಿರಂತರ ಟ್ರಸ್ಟ್‌ನ ವಿಶೇಷ ಚೇತನ ಮಕ್ಕಳಿಂದ ನೃತ್ಯ, 7.30ರಿಂದ 9.30ರವರೆಗೆ ಖ್ಯಾತ ಗಾಯಕರಾದ ವಿಜಯ್‌ಪ್ರಕಾಶ್, ಅನುರಾಧ ಭಟ್ ಹಾಗೂ ಲಕ್ಷ್ಮಿ ನಾಗರಾಜ್ ಅವರಿಂದ 'ಸಂಗೀತ ಗಾನಾಮೃತ' ಇರಲಿದೆ. ಡಿ.31ರ ರಾತ್ರಿ 11 ರಿಂದ 12ರವರೆಗೆ ಪೊಲೀಸ್ ಇಲಾಖೆ ವತಿಯಿಂದ 'ಕರ್ನಾಟಕ ಮತ್ತು ಆಂಗ್ಲ ಬ್ಯಾಂಡ್' ಕಾರ್ಯಕ್ರಮ, ಮಧ್ಯರಾತ್ರಿ 12 ರಿಂದ 12.15ರವರೆಗೆ 'ಹೊಸ ವರ್ಷಾಚರಣೆ'ಯ ಪ್ರಯುಕ್ತ ಬಣ್ಣಗಳ ಚಿತ್ತಾರದಿಂದ ಕೂಡಿದ ಶಬ್ದರಹಿತ ಪಟಾಕಿ ಸಿಡಿಸುವ ಕಾರ್ಯಕ್ರಮ ನಡೆಯಲಿದೆ.

ಬೊಂಬೆಗಳ ಪ್ರದರ್ಶನ: ಫಲಪುಷ್ಪ ಪ್ರದರ್ಶನದಲ್ಲಿ ನವರಾತ್ರಿ ಸಂದರ್ಭದಲ್ಲಿ ಮನೆಗಳಲ್ಲಿ ಪ್ರದರ್ಶಿಸುವ ಬೊಂಬೆಗಳನ್ನು ಪ್ರವಾಸಿಗರು ವೀಕ್ಷಣೆ ಮಾಡಲು ಅವಕಾಶ ಕಲ್ಪಿಸಲಾಗಿದೆ. ಗೀತಾ ಶ್ರೀಹರಿ ಅವರ 'ಪಾರಂಪರಿಕ ಶ್ರೀಕ್ಷೇತ್ರ ಮೇಲುಕೋಟೆ', ಜಯಶ್ರೀ ನಾಗಪ್ರಸಾದ್ 'ಸತ್ಯಂ ಶಿವಂ ಸುಂದರಂ', ಹೆಚ್.ಲೀಲಾವತಿಯವರ 'ಹರಿಹರಾ ಲೀಲಾಮೃತ', ಅನ್ನಪೂರ್ಣ ಗೋಪಾಲಕೃಷ್ಣ ಅವರ 'ನಮಃ ಶಂಕರ ಪಾರ್ವತೀಭ್ಯಾಂ' ಹಾಗೂ ಕೃಷ್ಣಭಟ್‌ರ 'ಶ್ರೀ ವೆಂಕಟೇಶ್ವರ ವೈಭವ'ದ ಬೊಂಬೆಗಳ ಪ್ರದರ್ಶನವಿರಲಿದೆ. ಹಾಗೆಯೇ ಮೈಸೂರು ಅರಮನೆ ಮಂಡಳಿ ವತಿಯಿಂದ ವಿಶೇಷವಾಗಿ ಆಯ್ದ ಛಾಯಾಚಿತ್ರಗಳ ಪ್ರದರ್ಶನ ಏರ್ಪಡಿಸಲಾಗಿದೆ. ಚಾಮರಾಜ ಒಡೆಯರ್ ಕೃತಿಗಳು, ದಸರಾ ಅಂದು–ಇಂದು, ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಮೈಸೂರು ಅರಮನೆ ಕುರಿತು ವೀಡಿಯೋ ಚಿತ್ರೀಕರಣ ಹಾಗೂ 2023ನೇ ಸಾಲಿನ ಕ್ಯಾಲೆಂಡರ್ ಬಿಡುಗಡೆ ಮತ್ತು ಸಸಿ ನೆಡುವ ಕಾರ್ಯಕ್ರಮಗಳು ನಡೆಯಲಿವೆ. ಬೆಳಗ್ಗೆ 10 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಅರಮನೆ ಫಲಪುಷ್ಪ ಪ್ರದರ್ಶನ ಇರಲಿದ್ದು, ಸಂಜೆ 7 ರಿಂದ ರಾತ್ರಿ 9ರವರೆಗೆ ಅರಮನೆಗೆ ವಿದ್ಯುತ್ ದೀಪಾಲಂಕಾರವಿರುತ್ತದೆ.

ಸ್ವಾತಂತ್ರ್ಯ ಹೋರಾಟಗಾರರಿಗೆ ಮಾಸಿಕ ಗೌರವ ಧನ 15 ಸಾವಿರಕ್ಕೆ ಹೆಚ್ಚಿಸಲು ಚಿಂತನೆ

ಬೆಂಗಳೂರು, ಡಿ.22(ಕೆಎಂಶಿ)– ಸ್ವಾತಂತ್ರ್ಯ ಹೋರಾಟ ಗಾರರಿಗೆ ಮಾಸಿಕ ವಾಗಿ ನೀಡಲಾಗುತ್ತಿರುವ 10 ಸಾವಿರ ರೂ. ಗೌರವಧನವನ್ನು ರೂ. 15 ಸಾವಿರಗಳಿಗೆ ಹೆಚ್ಚಿಸುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ. ಹಣಕಾಸು ಇಲಾಖೆ ಒಪ್ಪಿಗೆ ಬಂದ ತಕ್ಷಣ ಗೌರವಧನದಲ್ಲಿ ಹೆಚ್ಚಳ ಮಾಡಲಾಗುವುದು ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

ವಿಧಾನಪರಿಷತ್ ಕಲಾಪದಲ್ಲಿ ಶಾಸಕ ಯು.ಬಿ.ವೆಂಕಟೇಶ್ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಕಂದಾಯ ಸಚಿವರು ಉತ್ತರಿ ಸಿದರು. ಮಾಸಿಕ ಪಿಂಚಣಿ ಪಡೆಯು ತ್ತಿರುವ ಸ್ವಾತಂತ್ರ್ಯ ಹೋರಾಟಗಾರರು ಮರಣ ಹೊಂದಿದರೆ, ಅವರ ವಿಧವಾ ಪತ್ನಿ ಅಥವಾ ಪತಿಗೆ ಇಲ್ಲವೇ ಅವರ ಅಪ್ರಾಪ್ತ ವಯಸ್ಕ ಮಕ್ಕಳಿಗೆ ಕುಟುಂಬ ಪಿಂಚಣಿಯನ್ನು ನೀಡಲಾಗುತ್ತಿದೆ. ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಅವರ ವಿಧವಾ ಪತ್ನಿ ಅಥವಾ ಪತಿಗೆ ರಾಜ್ಯದ ವ್ಯಾಪ್ತಿಯಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸುಗಳಲ್ಲಿ ಪ್ರಯಾಣಿಸಲು ಜೀವಿತಾವಧಿಗೆ ಉಚಿತ ಬಸ್ ಪಾಸ್ ವಿತರಿಸಲಾಗುತ್ತಿದೆ. ಸ್ವಾತಂತ್ರ್ಯ ಯೋಧರು ಮರಣ ಹೊಂದಿದಲ್ಲಿ ಅವರ ಶವಸಂಸ್ಕಾರಕ್ಕಾಗಿ 4 ಸಾವಿರ ರೂ.ಗಳನ್ನು ಶವಸಂಸ್ಕಾರ ಭತ್ಯೆಯಾಗಿ ನೀಡಲಾಗುತ್ತಿದೆ ಎಂದರು.

ಸ್ವಾತಂತ್ರ್ಯ ಹೋರಾಟಗಾರ ಟಿ.ಪುಟ್ಟಣ್ಣ ನಿಧನ



ಮೈಸೂರು, ಡಿ.22– ಮೈಸೂರಿನ ಸಿದ್ಧಾರ್ಥನಗರ ವಿನಯ ಮಾರ್ಗ, ನಿವಾಸಿ, ಸ್ವಾತಂತ್ರ್ಯ ಹೋರಾಟಗಾರರಾದ ಟಿ.ಪುಟ್ಟಣ್ಣ(94) ಅವರು ಗುರುವಾರ ರಾತ್ರಿ ನಿಧನರಾದರು. ಮೃತರು ಪುತ್ರ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ಶನಿವಾರ ಮಧ್ಯಾಹ್ನ 12.30ಕ್ಕೆ ಅಂತ್ಯಸಂಸ್ಕಾರ ನೆರವೇರಿತು.

ಮೂರನೇ ಪುಟದಿಂದ

ಶೋಕಿಗಲ್ಲ, ಜನರ ಸಮಸ್ಯೆಗಳ ನಿವಾರಿಸಲು...!

ಬೆಳಗಾವಿ ಅಧಿವೇಶನಕ್ಕೆ ಹೋಗದೇ ಪಂಚರತ್ನ ಯಾತ್ರೆ ನಡೆಸುತ್ತಿದ್ದಾರೆ ಎಂದು ನನ್ನ ಟೀಕಿಸುತ್ತಾರೆ. ಈ ಯಾತ್ರೆ ಮೂಲಕವೇ ಜನರ ಕಷ್ಟ ಬಗೆಹರಿಸಲೆಂದೇ ಪಂಚರತ್ನ ಯಾತ್ರೆ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಟ್ಟು ಮತ ಕೇಳುತ್ತಿದ್ದೇನೆ ಎಂದು ತಿಳಿಸಿದರು.

ಹಣ ಮಾಡುವ ಆಸೆ ಇಲ್ಲ: ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಿ, ಪಂಚರತ್ನ ಯಾತ್ರೆ ಮುಂದಿನ ವಿಧಾನಸಭಾ ಚುನಾವಣೆಗೆ ದಿಕ್ಸೂಚಿಯಾಗಲಿದ್ದು, 2023ಕ್ಕೆ ಜೆಡಿಎಸ್ ಸ್ವಂತ ಶಕ್ತಿಯಿಂದ ಅಧಿಕಾರಕ್ಕೆ ಬರಲಿದೆ. ಕುಮಾರಸ್ವಾಮಿ ಅವರು ಮೊದಲ ಬಾರಿ ಸಿಎಂ ಆಗಿದ್ದ ಅವಧಿಯಲ್ಲಿ ಮಾಡಿದ್ದ ಗ್ರಾಮ ವಾಸ್ತವ್ಯ, ಜನತಾ ದರ್ಶನ, ಲಾಟರಿ ಹಾಗೂ ಸಾರಾಯಿ ನಿಷೇಧ ಇನ್ನು ಜನರ ಮನಸ್ಸಿನಲ್ಲಿದ್ದು, ಇಂತಹ ಜನರ ಕೆಲಸಗಳು ಆಗಬೇಕೆಂದರೆ ಮತ್ತೆ ಹೆಚ್ಡಿಕೆ ಸಿಎಂ ಆಗಬೇಕೆಂದರು. ಕುಮಾರಸ್ವಾಮಿ ಅವರಿಗೆ ಹಣ ಮಾಡಬೇಕೆಂಬ ಹಂಬಲವಿಲ್ಲ. ಜನಸೇವೆಗಾಗಿ ರಾಜಕೀಯಕ್ಕೆ ಬಂದಿದ್ದು, ಅದನ್ನು ಮಾಡಿಕೊಂಡು ಹೋಗುತ್ತಿದ್ದೇವೆ. ಕುಮಾರಸ್ವಾಮಿ ಎಂದು ಅಧಿಕಾರಕ್ಕಾಗಿ ಯಾರ ಮನೆ ಬಾಗಿಲಿಗೆ ಹೋಗಿಲ್ಲ. ಬದಲಾಗಿ ನಾವೇ ಅಧಿಕಾರ ಕೊಡುತ್ತೇವೆ ಮುಖ್ಯಮಂತ್ರಿಯಾಗಿ ಎಂದು ಕಾಂಗ್ರೆಸ್ ಹಾಗೂ ಬಿಜೆಪಿ ನಾಯಕರು ನಮ್ಮ ಮನೆಗೆ ಬಂದಿದ್ದಾರೆ. ಮುಂದೆ ಅಂತಹ ಯಾವುದೇ ಸನ್ನಿವೇಶ ಎದುರಾಗುವಂತೆ ಅವಕಾಶ ಕೊಡಬೇಡಿ. ಜೆಡಿಎಸ್ ಸಂಪೂರ್ಣ ಬಹುಮತ ಕೊಡಿ ಎಂದು ಮನವಿ ಮಾಡಿದರು. ಕಳೆದ ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಜನ 5 ಮುಕ್ಕಾಲು ಲಕ್ಷ ಮತ ಕೊಟ್ಟಿದ್ದೀರಿ. ನಿಮ್ಮ ನನ್ನ ಸಂಬಂಧವನ್ನು ಯಾರ ಕೈಯಲ್ಲೂ ಬಿಡಿಸಲಾಗುವುದಿಲ್ಲ. ಬಿಜೆಪಿ, ಕಾಂಗ್ರೆಸ್ ಇನ್ನಿತರರ ಷಡ್ಯಂತ್ರದಿಂದ ನಾನು ಚುನಾವಣೆಯಲ್ಲಿ ಸೋಲಬೇಕಾಯಿತು. ಸ್ವಾಭಿಮಾನದ ಹೆಸರಲ್ಲಿ ಗೆದ್ದವರು ಕ್ಷೇತ್ರವನ್ನು ಹೇಗೆ ಅಭಿವೃದ್ಧಿ ಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ. ನನ್ನ ಸೋಲಿನ ಬಗ್ಗೆ ಈಗಲೂ ಮಂಡ್ಯ ಜನಕ್ಕೆ ಅನುಕಂಪವಿದ್ದು, ಕೆಲವೆಡೆ ಕಣ್ಣೀರು ಸಹ ಹಾಕಿದ್ದಾರೆ ಎಂದು ಸ್ಮರಿಸಿದರು. ವೇದಿಕೆಯಲ್ಲಿ ಶಾಸಕ ಎಂ.ಶ್ರೀನಿವಾಸ್, ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು, ಉಪಾಧ್ಯಕ್ಷ ಎಂ.ಎಸ್.ರಘುನಂದನ್, ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಜಿಲ್ಲಾ ವಕ್ತಾರ ಮುದ್ದನಘಟ್ಟ ಮಹಾಲಿಂಗೇಗೌಡ, ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಮನ್‌ಮುಲ್ ನಿರ್ದೇಶಕ ಹೆಚ್.ಟಿ.ಮಂಜು, ನಗರಸಭೆ ಅಧ್ಯಕ್ಷ ಎಚ್.ಎಸ್.ಮಂಜು, ಉಪಾಧ್ಯಕ್ಷೆ ಇಶ್ರತ್ ಫಾತೀಮಾ, ಜೆಡಿಎಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹೆಚ್.ಕೆ.ರಾಮು, ಯುವ ಘಟಕದ ಜಿಲ್ಲಾಧ್ಯಕ್ಷ ಕಂಸಾಗರ ರವಿ, ಜಿ.ಪಂ. ಮಾಜಿ ಸದಸ್ಯ ಯೋಗೇಶ್ ಸೇರಿದಂತೆ ಇತರರಿದ್ದರು.



ಕೆ.ಆರ್.ನಗರ ವಿಧಾನಸಭಾ ಕ್ಷೇತ್ರ

ಸಾರಾ ಸಾಮ್ರಾಜ್ಯದಲ್ಲಿ 'ಕೈ' ಬಲ ಪ್ರದರ್ಶನದ ನಡುವೆ 'ಕಮಲ' ಕಲರವ

ಕ್ಷೇತ್ರದ ಶಾಸಕರ ಪರಂಪರೆ

1952	ಸಾಲಿಗ್ರಾಮ ತಮ್ಮಯ್ಯ	–ಪಕ್ಷೇತರ
1957	ಹೆಚ್.ಎಂ.ಚನ್ನಬಸಪ್ಪ	–ಕಾಂಗ್ರೆಸ್
1962	ಕೆ.ಎಸ್.ಗೌಡಯ್ಯ	–ಪಕ್ಷೇತರ
1967	ಬಿ.ಬಸವರಾಜು	–ಪಕ್ಷೇತರ
1972	ಹೆಚ್.ಬಿ.ಕೆಂಚೇಗೌಡ	–ಕಾಂಗ್ರೆಸ್
1978	ಎ.ಹೆಚ್.ವಿಶ್ವನಾಥ್	–ಕಾಂಗ್ರೆಸ್
1983	ಎಸ್.ನಂಜಪ್ಪ	–ಜನತಾ ಪಕ್ಷ
1985	ಎಸ್.ನಂಜಪ್ಪ	–ಜನತಾ ಪಕ್ಷ
1989	ಎ.ಎಸ್.ವಿಶ್ವನಾಥ್	–ಕಾಂಗ್ರೆಸ್
1994	ಎಸ್.ನಂಜಪ್ಪ	–ಜೆಡಿಎಸ್
1999	ಎ.ಹೆಚ್.ವಿಶ್ವನಾಥ್	–ಕಾಂಗ್ರೆಸ್
2004	ಮಂಚನಹಳ್ಳಿ ಮಹದೇವ್	–ಜೆಡಿಎಸ್
2008	ಸಾ.ರಾ.ಮಹೇಶ್	–ಜೆಡಿಎಸ್
2013	ಸಾ.ರಾ.ಮಹೇಶ್	–ಜೆಡಿಎಸ್
2018–	ಸಾ.ರಾ.ಮಹೇಶ್	–ಜೆಡಿಎಸ್


ಸಾರಾ ಮಹೇಶ್


ಡಿ.ರವಿಶಂಕರ್


ಶ್ವೇತಾ


ಐಶ್ವರ್ಯ


ಬಾಬು ಹನುಮಾನ್


ಗರುಡಗಂಬಸ್ವಾಮಿ


ವೆಂಕಟೇಶ್


ಶ್ರೀನಿವಾಸಗೌಡ


ಪ್ರಭಾಕರ್ ಜೈನ್


ಶಿವುಗೌಡ



ಕೆ.ಆರ್.ನಗರ, ಡಿ.22–ಭತ್ತದ ಕಣಜ ಎಂದೇ ಪ್ರಸಿದ್ಧಿ ಪಡೆದಿರುವ ಕೃಷ್ಣರಾಜನಗರ (ಕೆ.ಆರ್.ನಗರ) ವಿಧಾನಸಭಾ ಕ್ಷೇತ್ರದಲ್ಲಿ ಮುಂಬರುವ ಚುನಾವಣೆಯಲ್ಲಿ ಸ್ಪರ್ಧಿಸಲು ಟಿಕೆಟ್ ಗಿಟ್ಟಿಸಿಕೊಳ್ಳುವ ನಿಟ್ಟಿನಲ್ಲಿ ಆಕಾಂಕ್ಷಿಗಳು ತೀವ್ರ ಪೈಪೋಟಿ ನಡೆಸಿದ್ದಾರೆ. ಕೆ.ಆರ್.ನಗರ ಕ್ಷೇತ್ರವು ಮೈಸೂರು ಜಿಲ್ಲೆಯಲ್ಲಿದ್ದರೂ ಕೂಡ ಮಂಡ್ಯ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಟ್ಟಿದೆ.

ಈ ಕ್ಷೇತ್ರದಲ್ಲಿ ಈವರೆಗೆ ನಡೆದಿರುವ 15 ಚುನಾವಣೆಗಳ ಪೈಕಿ 7ರಲ್ಲಿ ಗೆಲುವು ಸಾಧಿಸುವ ಮೂಲಕ ಜನತಾ ಪರಿವಾರ ಮೇಲುಗೈ ಸಾಧಿಸಿದೆ. ಕಳೆದ ನಾಲ್ಕು ಚುನಾವಣೆಗಳಲ್ಲಿ ಸತತವಾಗಿ ಜೆಡಿಎಸ್ ಅಭ್ಯರ್ಥಿಗಳು ಗೆದ್ದು ಬೀಗಿದ್ದಾರೆ. 2004ರಲ್ಲಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಮಂಚನಹಳ್ಳಿ ಮಹದೇವು ಗೆಲುವು ಸಾಧಿಸಿದ್ದರೆ, ನಂತರದ ಮೂರು ಚುನಾವಣೆಗಳಲ್ಲಿ ಜಯಭೇರಿ ಬಾರಿಸುವ ಮೂಲಕ ಸಾ.ರಾ.ಮಹೇಶ್ ಜೆಡಿಎಸ್ ಅಭ್ಯರ್ಥಿಯಾಗಿ ಹ್ಯಾಟ್ರಿಕ್ ಗೆಲುವು ಸಾಧಿಸಿದ್ದಾರೆ.

ಐದು ಬಾರಿ ಕಾಂಗ್ರೆಸ್ ಅಭ್ಯರ್ಥಿಗಳು ಈ ಕ್ಷೇತ್ರದಲ್ಲಿ ಗೆದ್ದಿದ್ದು, ಕ್ಷೇತ್ರದ ಮತದಾರರು ಮೂರು ಬಾರಿ ಪಕ್ಷೇತರರನ್ನು ಆಯ್ಕೆ ಮಾಡಿದ್ದಾರೆ. ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಮತ್ತು ಜನತಾ ಪರಿವಾರ ಮಾತ್ರ ಗೆಲುವಿನ ಸಿಹಿ ಕಂಡಿದ್ದು, ಬಿಜೆಪಿ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಪ್ರತಿ ಬಾರಿ ತ್ರಿಕೋನ ಸ್ಪರ್ಧೆ ನಡೆಯುತ್ತಿದ್ದರೂ ಒಮ್ಮೆಯೂ ಬಿಜೆಪಿಗೆ ಗೆಲುವು ಸಿಕ್ಕಿಲ್ಲ. ಸಾ.ರಾ.ಮಹೇಶ್ ತಮ್ಮ ಮೊದಲ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಸೋಲು ಕಂಡಿದ್ದರು. ನಂತರ ಜೆಡಿಎಸ್‌ನಿಂದ ಸ್ಪರ್ಧಿಸಿದ ಅವರು, ಸತತವಾಗಿ ಗೆಲ್ಲುತ್ತಾ ಬಂದಿದ್ದಾರೆ.

ಈ ಕ್ಷೇತ್ರದಿಂದ ಆಯ್ಕೆಯಾದ ದಿವಂಗತ ಎಸ್.ನಂಜಪ್ಪ, ಅಡಗೂರು ಹೆಚ್.ವಿಶ್ವನಾಥ್ ಮತ್ತು ಸಾ.ರಾ.ಮಹೇಶ್ ಸಚಿವ ಸ್ಥಾನವನ್ನು ಅಲಂಕರಿಸಿದ್ದಾರೆ. ಎಸ್.ನಂಜಪ್ಪ ಅವರು ಜನತಾ ಪರಿವಾರದಿಂದ 3 ಬಾರಿ ಆಯ್ಕೆಯಾಗಿದ್ದರೆ, ಅಡಗೂರು ಹೆಚ್.ವಿಶ್ವನಾಥ್ ಕಾಂಗ್ರೆಸ್ ಪಕ್ಷದಿಂದ 2 ಬಾರಿ ಆಯ್ಕೆಯಾಗಿದ್ದಾರೆ.

ಈ ಹಿಂದೆ ಪಿರಿಯಾಪಟ್ಟಣ ಕ್ಷೇತ್ರಕ್ಕೆ ಒಳಪಟ್ಟಿದ್ದ ಚುಂಚನಕಟ್ಟೆ ಹೋಬಳಿ 2008ರಲ್ಲಿ ಕ್ಷೇತ್ರ ಪುನರ್ವಿಂಗಡಣೆಯಾದಾಗ ಕೆ.ಆರ್.ನಗರ ಕ್ಷೇತ್ರಕ್ಕೆ ಸೇರಿದೆ. ದೇವರಾಜ ಅರಸು ಅವರ ಗರಡಿಯಲ್ಲಿ ಪಳಗಿದ ಅಡಗೂರು ಹೆಚ್.ವಿಶ್ವನಾಥ್, ತಮ್ಮ 29ನೇ ವಯಸ್ಸಿನಲ್ಲೇ ಶಾಸಕರಾಗಿ ಆಯ್ಕೆಯಾಗಿದ್ದು, ಈ ಕ್ಷೇತ್ರದಿಂದ ಆಯ್ಕೆಯಾದ ಅತೀ ಕಿರಿಯ ವಯಸ್ಸಿನ ಶಾಸಕ ಎನಿಸಿಕೊಂಡಿದ್ದರು.

ಹಾಲಿ ಶಾಸಕರಾಗಿರುವ ಸಾ.ರಾ.ಮಹೇಶ್, ತಾವು ಜೆಡಿಎಸ್‌ನಿಂದ ಸ್ಪರ್ಧಿಸಿದ ಮೊದಲ 2 ಚುನಾವಣೆಗಳಲ್ಲಿ ಅನಾಯಾಸವಾಗಿ ಗೆಲುವು ಸಾಧಿಸಿದರಾದರೂ, 3ನೇ ಬಾರಿಯ ಚುನಾವಣೆಯಲ್ಲಿ ಪ್ರಯಾಸದಿಂದ ಗೆಲ್ಲುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು.

ಈ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಶಾಸಕ ಸಾ.ರಾ.ಮಹೇಶ್ ಹೆಸರನ್ನು ಪಕ್ಷದ ವರಿಷ್ಠರು ಈಗಾಗಲೇ ಅಧಿಕೃತವಾಗಿ ಘೋಷಿಸಿದ್ದು, ಕಳೆದ ವರ್ಷದಿಂದಲೇ ಸಾ.ರಾ.ಮಹೇಶ್ ಕ್ಷೇತ್ರ ಪರ್ಯಟನೆಯಲ್ಲಿ ತೊಡಗಿದ್ದಾರೆ. ವಿರೋಧ ಪಕ್ಷದಲ್ಲಿದ್ದರೂ, ಕ್ಷೇತ್ರಕ್ಕೆ 985 ಕೋಟಿ ರೂ. ಅನುದಾನ ತಂದು ಅಭಿವೃದ್ಧಿ ಕಾರ್ಯ ನಡೆಸಲಾಗಿದೆ. ತಾಲೂಕಿನ ವಿವಿಧ ನಾಲೆಗಳನ್ನು ಆಧುನೀಕರಣಗೊಳಿಸಿ ಕೊನೆಯ ಭಾಗದವರೆಗೂ ನೀರು ತಲುಪುವಂತೆ ಮಾಡಲಾಗಿದೆ. 200 ಕೋಟಿ ರೂ. ವೆಚ್ಚದಲ್ಲಿ ಏತ ನೀರಾವರಿ ಯೋಜನೆ ಮೂಲಕ ಕೆರೆ–ಕಟ್ಟೆಗಳಿಗೆ ನೀರು ತುಂಬಿಸುವ ಕಾಮಗಾರಿ ನಡೆಸಲಾಗಿದೆ. ಚುಂಚನಕಟ್ಟೆಯನ್ನು ಪ್ರವಾಸಿ ತಾಣವನ್ನಾಗಿ ಮಾಡಲಾಗಿದ್ದು, 30 ಅಡಿ ಎತ್ತರದ ವೀರಾಂಜನೇಯಸ್ವಾಮಿ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ. ಹಳೆ ಎಡತೊರೆ ಬಳಿ ಕಾವೇರಿ ನದಿಯ ಮಧ್ಯಭಾಗದಲ್ಲಿ ಶಿವನ ವಿಗ್ರಹವನ್ನು ಪ್ರತಿಷ್ಠಾಪಿಸಿ, ಅದನ್ನು ಉತ್ತಮ ಪ್ರವಾಸಿ ತಾಣವನ್ನಾಗಿ ರೂಪಿಸುವ ನಿಟ್ಟಿನಲ್ಲಿ 12 ಕೋಟಿ ರೂ. ವೆಚ್ಚದಲ್ಲಿ ಕಾಮಗಾರಿ ನಡೆಸಲಾಗುತ್ತಿದೆ. ರೈತರ ಜೀವನಾಡಿಯಾಗಿರುವ ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆಯನ್ನು ಪುನರಾರಂಭ ಮಾಡಲಾಗಿದೆ ಎಂದು ತಮ್ಮ ಸಾಧನೆಗಳನ್ನು ಕ್ಷೇತ್ರಾದ್ಯಂತ ಸಾ.ರಾ.ಮಹೇಶ್ ಪ್ರಚುರಪಡಿಸುತ್ತಿದ್ದಾರೆ.

ತಾವು ಸಚಿವರಾಗಿದ್ದಾಗ ಅಂದಿನ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಸಾಲಿಗ್ರಾಮವನ್ನು ತಾಲೂಕು ಕ್ಷೇತ್ರವೆಂದು ಘೋಷಣೆ ಮಾಡಿರುವುದನ್ನೂ ಕೂಡ ಉಲ್ಲೇಖಿಸುತ್ತಿರುವ ಸಾ.ರಾ.ಮಹೇಶ್, ಮುಂದಿನ ಚುನಾವಣೆಯಲ್ಲಿ ತಮ್ಮದೇ ಸರ್ಕಾರ ಅಸ್ತಿತ್ವಕ್ಕೆ ಬರಲಿದ್ದು, ಹೆಚ್.ಡಿ.ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿಯಾಗಲಿದ್ದಾರೆ. ಅವರ ಸಂಪುಟದಲ್ಲಿ ತಾವು ಸಚಿವರಾಗಲಿದ್ದು, ಕ್ಷೇತ್ರವನ್ನು ಮತ್ತಷ್ಟು ಅಭಿವೃದ್ಧಿಪಡಿಸಲಾಗುವುದು ಎಂದು ಮತದಾರರ ಬಳಿ ಸಾ.ರಾ.ಮಹೇಶ್ ಹೇಳುತ್ತಿದ್ದಾರೆ.

ಈ ಕ್ಷೇತ್ರದಿಂದ ಕಾಂಗ್ರೆಸ್ ಐದು ಬಾರಿ ಗೆಲುವು ಸಾಧಿಸಿದೆ. ಅದರಲ್ಲಿ ಎಸ್.ನಂಜಪ್ಪ 3 ಬಾರಿ ಹಾಗೂ ಅಡಗೂರು ಹೆಚ್.ವಿಶ್ವನಾಥ್ 2 ಬಾರಿ ಗೆದ್ದು, ಇವರಿಬ್ಬರೂ ಸಚಿವರಾಗಿದ್ದರು. 2008ರ ಚುನಾವಣೆಯಲ್ಲಿ ಅಡಗೂರು ಹೆಚ್.ವಿಶ್ವನಾಥ್ ಅವರು ಸಾ.ರಾ.ಮಹೇಶ್ ಎದುರು ಪರಾಭವಗೊಂಡರೆ, 2013ರ ಚುನಾವಣೆಯಲ್ಲಿ ದೊಡ್ಡಸ್ವಾಮಿಗೌಡರು ಕಾಂಗ್ರೆಸ್ ಅಭ್ಯರ್ಥಿಯಾಗಿ ಸೋಲನನುಭವಿಸಿದರು. 2018ರ ಚುನಾವಣೆಯಲ್ಲಿ ದೊಡ್ಡಸ್ವಾಮಿಗೌಡರ ಪುತ್ರ ಡಿ.ರವಿಶಂಕರ್ ಅವರು ಸಾ.ರಾ.ಮಹೇಶ್ ಅವರಿಗೆ ತೀವ್ರ ಪೈಪೋಟಿ ನೀಡಿ ಅಲ್ಪ ಮತಗಳ ಅಂತರದಲ್ಲಿ ಸೋಲನನುಭವಿಸಿದ್ದಾರೆ. ಮಾಜಿ ಶಾಸಕ ದಿವಂಗತ ಮಂಚನಹಳ್ಳಿ ಮಹದೇವ್ ಪುತ್ರಿ ಐಶ್ವರ್ಯ ಎಐಸಿಸಿ ವಕ್ತಾರೆಯಾಗಿದ್ದು, ಅವರೂ ಈ ಕ್ಷೇತ್ರದಲ್ಲಿ ಕಾಂಗ್ರೆಸ್ ಟಿಕೆಟ್ ಪಡೆಯುವ ನಿಟ್ಟಿನಲ್ಲಿ ಪ್ರಬಲ ಆಕಾಂಕ್ಷಿ ಯಾಗಿದ್ದಾರೆ. ಆದರೆ ಇತ್ತೀಚೆಗೆ ತಿಪ್ಪೂರು ಗ್ರಾಮದಲ್ಲಿ ನಡೆದ ಭಗೀರಥ ಉಪ್ಪಾರ ಸಮುದಾಯ ಭವನ ಉದ್ಘಾಟನಾ ಸಮಾರಂಭದಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರು, ಡಿ.ರವಿಶಂಕರ್ ಅವರೇ ಅಭ್ಯರ್ಥಿ ಎಂದು ಘೋಷಿಸಿದ ಹಿನ್ನೆಲೆಯಲ್ಲಿ ರವಿಶಂಕರ್ ಕಳೆದ ಅಕ್ಟೋಬರ್ ತಿಂಗಳಿ ನಿಂದಲೇ ಜನಾಶೀರ್ವಾದ ಹೆಸರಿನಲ್ಲಿ ಕ್ಷೇತ್ರದಾದ್ಯಂತ ಸಂಚರಿಸಿ ಪ್ರಚಾರದಲ್ಲಿ ತೊಡಗಿದ್ದಾರೆ. ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ತಾವೂ ಕ್ಷೇತ್ರಕ್ಕೆ ಅನುದಾನ ತಂದು ಅಭಿವೃದ್ಧಿ ಪಡಿಸಿದ್ದೇನೆ ಎಂದು ಅವರು ಹೇಳು ತ್ತಿರುವುದು ಮಾತ್ರವಲ್ಲದೇ, ಹಲವಾರು ಸಮುದಾಯ ಭವನಗಳಿಗೆ ಸಿದ್ದರಾಮಯ್ಯ ಅವರಿಂದ ಅನುದಾನ ಕೊಡಿಸಿರುವುದಾಗಿ ಉಲ್ಲೇಖಿಸುತ್ತಿದ್ದಾರೆ.


ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಅವರು, ಸತತವಾಗಿ ಮೂರು ಬಾರಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ ಹ್ಯಾಟ್ರಿಕ್ ಸೋಲು ಕಂಡಿದ್ದಾರೆ. 1999ರಲ್ಲಿ ಸಾಲಿಗ್ರಾಮ ಗೋವಿಂದರಾಜು ಬಿಜೆಪಿಯಿಂದ ಸ್ಪರ್ಧಿಸಿ 24 ಸಾವಿರ ಮತ ಪಡೆದಿದ್ದರೆ, 2004ರಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಸಾ.ರಾ.ಮಹೇಶ್ 25 ಸಾವಿರ ಮತ ಪಡೆದಿದ್ದರು. ನಂತರದ ಚುನಾವಣೆಗಳಲ್ಲಿ ಹಾಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷರಾಗಿರುವ ಮಿರ್ಲೆ ಶ್ರೀನಿವಾಸಗೌಡ, ಕೆ.ಸಿ. ಪುಟ್ಟಸಿದ್ದಶೆಟ್ಟಿ, ಮೇಲೂರು ಬಸ್ ಕುಮಾರ್ ಹಾಗೂ 2018ರಲ್ಲಿ ಶ್ವೇತಾ ಗೋಪಾಲ್ ಬಿಜೆಪಿಯಿಂದ ಸ್ಪರ್ಧಿಸಿದ್ದಾರೆ.

ಮುಂಬರುವ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಪಡೆಯಲು ಮಿರ್ಲೆ ಶ್ರೀನಿವಾಸಗೌಡ, ಶ್ವೇತಾ ಗೋಪಾಲ್, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಹಂಪಾಪುರ ಪ್ರಭಾಕರ ಜೈನ್, ಕಳೆದ ಚುನಾವಣೆ ವೇಳೆ ಜೆಡಿಎಸ್ ತೊರೆದು ಬಿಜೆಪಿ ಸೇರಿದ್ದ ಹೊಸಹಳ್ಳಿ ವೆಂಕಟೇಶ್, ಇತ್ತೀಚೆಗೆ ಕಾಂಗ್ರೆಸ್ ತೊರೆದು ಬಿಜೆಪಿ ಸೇರಿರುವ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಪ್ತ ಬಾಬು ಹನುಮಾನ್ ಅವರುಗಳು ಬಿಜೆಪಿ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ. ಈ ಕ್ಷೇತ್ರದಿಂದ ಸ್ಪರ್ಧಿಸಲು ಟಿಕೆಟ್‌ಗಾಗಿ ಪ್ರಯತ್ನಿಸುತ್ತಿರುವ ಹೆಚ್ಚಿನ ಆಕಾಂಕ್ಷಿಗಳನ್ನು ಹೊಂದಿರುವ ಪಕ್ಷ ಬಿಜೆಪಿ.

ಇನ್ನು ಸ್ವರಾಜ್ ಇಂಡಿಯಾ ಪಕ್ಷದ ಅಧ್ಯಕ್ಷ ಗರುಡಗಂಭ ಸ್ವಾಮಿ ಹಾಗೂ ಆಮ್ ಆದ್ಮಿ ಪಕ್ಷ ಸೇರಿರುವ ವಕೀಲ ಸಿಂಹ ಶಿವುಗೌಡ ಮುಂದಿನ ಚುನಾವಣೆಯಲ್ಲಿ ಸ್ಪರ್ಧಾ ಕಣದಲ್ಲಿರುವುದು ಬಹುತೇಕ ಖಚಿತವಾಗಿದೆ.

ಕಾಡಾನೆ ದಾಳಿಯಿಂದ ಮೃತಪಟ್ಟವರ ಕುಟುಂಬಕ್ಕೆ 15 ಲಕ್ಷ ರೂ. ಪರಿಹಾರ

●ಆನೆಗಳ ಹಾವಳಿ ತಡೆಗೆ ಗಜ ಕಾರ್ಯಪಡೆ ರಚನೆ ●ಕಂದಾಯ ಸಚಿವ ಆರ್.ಅಶೋಕ್ ಭರವಸೆ



ಬೆಂಗಳೂರು,ಡಿ.22(ಕೆಎಂಶಿ)–ಕಾಡಾನೆ ದಾಳಿಯಿಂದ ಮೃತಪಟ್ಟವರ ಕುಟುಂಬದವರಿಗೆ ರಾಜ್ಯ ಸರ್ಕಾರ ನೀಡುತ್ತಿದ್ದ ರೂ. 7.5 ಲಕ್ಷ ಪರಿಹಾರ ಧನವನ್ನು ರೂ.15 ಲಕ್ಷಕ್ಕೆ ಹೆಚ್ಚಳ ಮಾಡಿದೆ. ಕಾಡಾನೆ ಹಾವಳಿ ಹೆಚ್ಚಿರುವ ಚಿಕ್ಕಮಗಳೂರು, ಹಾಸನ, ಮೈಸೂರು ಹಾಗೂ ಕೊಡಗು ಜಿಲ್ಲೆಗಳಲ್ಲಿ ಗಜ ಕಾರ್ಯಪಡೆ (ಎಲೆ ಫೆಂಟ್ ಟಾಸ್ಕ್‌ಫೋರ್ಸ್) ರಚಿಸಲಾಗಿದೆ ಎಂದು ಕಂದಾಯ ಸಚಿವ ಆರ್.ಅಶೋಕ್ ಹೇಳಿದರು.

ಗುರುವಾರ ವಿಧಾನಪರಿಷತ್ ಕಲಾಪದಲ್ಲಿ ಶಾಸಕ ಪ್ರಾಣೇಶ್.ಎಂ.ಕೆ ಅವರ ಚುಕ್ಕೆ ಗುರುತಿನ ಪ್ರಶ್ನೆಗೆ ಮುಖ್ಯಮಂತ್ರಿಗಳ ಪರವಾಗಿ ಕಂದಾಯ ಸಚಿವರು ಉತ್ತರಿಸಿದರು.

ಕಾಡಾನೆ ಹಾಗೂ ಇತರೆ ವನ್ಯಪ್ರಾಣಿಗಳು ಕಾಡಿನಿಂದ ಹೊರಬಾರದಂತೆ ತಡೆಯಲು ವನ್ಯ ಪ್ರಾಣಿಗಳಿಗಾಗಿ ಅಭ್ಯಾ



ಪ್ರದೇಶಗಳ ಒಳಗೆ ನೀರಿನ ಲಭ್ಯತೆ ಹೆಚ್ಚಿಸಲು ರಕ್ಷಿತ ಅರಣ್ಯಗಳಲ್ಲಿ ಕೆರೆಗಳ ನಿರ್ಮಾಣ ಹಾಗೂ ಇರುವ ಕೆರೆಗಳ ಪುನಶ್ಚೇತನಗೊಳಿಸಲಾಗಿದೆ. ಕಾಡಾನೆಗಳು ಅರಣ್ಯ ಪ್ರದೇಶದಿಂದ ಹೊರಗೆ ಬಾರದಂತೆ ಅರಣ್ಯದಂಚಿನಲ್ಲಿ ಸೌರಶಕ್ತಿ ಬೇಲಿ, ಕಂದಕ ಹಾಗೂ ರೈಲ್ವೆ ಹಳಿಗಳನ್ನು ಉಪಯೋಗಿಸಿ ಬ್ಯಾರಿಕೇಡ್ ನಿರ್ಮಿಸುವ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ಇದುವರೆಗೂ 762 ಕಿ.ಮೀ ಆನೆ ತಡೆ ಕಂದಕ, 1106 ಕಿ.ಮೀ ಸೌರಶಕ್ತಿ ಬೇಲಿ, 100 ಕಿ.ಮೀ ರೈಲ್ವೆ ಹಳಿ ಬ್ಯಾರಿಕೇಡ್ ನಿರ್ಮಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ 150.95 ಕಿ.ಮೀ ಆನೆ ತಡೆ ಕಂದಕ, 285.88 ಕಿ.ಮೀ. ಸೌರಶಕ್ತಿ ಬೇಲಿ ಮತ್ತು 71.768 ಕಿ.ಮೀ. ರೈಲ್ವೆ ಬ್ಯಾರಿಕೇಡ್ ನಿರ್ಮಾಣ ಕಾಮಗಾರಿ ಪ್ರಗತಿಯಲ್ಲಿದೆ. 95 ಹಿಮ್ಮೆಟ್ಟಿಸುವ ಹಾಗೂ 33 ಕ್ಷಿಪ್ರ ಸ್ಪಂದನಾ ತಂಡ ರಚಿಸಿ, ಕಾಡಾನೆಗಳನ್ನು ಕಾಡಿಗೆ ಹಿಮ್ಮೆಟ್ಟಿಸುವ ಕಾರ್ಯ ಕೈಗೊಳ್ಳಲಾಗುತ್ತಿದೆ. ವೈರ್‌ಲೆಸ್ ಕಾಡಾನೆಗಳ ಮಾಹಿತಿ ಸಂಗ್ರಹಿಸಲು 24 ಗಂಟೆ ನಿರ್ವಹಿಸುವ ಕಂಟ್ರೋಲ್ ರೂಮ್ ಸ್ಥಾಪಿಸಲಾಗಿದೆ. ಕಾಡು ಪ್ರಾಣಿಯಿಂದ ಉಂಟಾಗುವ ಶಾಶ್ವತ ಅಂಗವಿಕಲತೆಗೆ ನೀಡುತ್ತಿದ್ದ ಪರಿಹಾರ ಧನ ಮೊತ್ತವನ್ನು ರೂ.5ರಿಂದ ರೂ.10 ಲಕ್ಷಕ್ಕೆ, ಭಾಗಶಃ ಅಂಗವಿಕಲತೆ ಮೊತ್ತವನ್ನು ರೂ.2.50 ಲಕ್ಷದಿಂದ ರೂ.5ಲಕ್ಷಕ್ಕೆ, ಗಾಯಗೊಂಡವರಿಗೆ ನೀಡುತ್ತಿದ್ದ ಪರಿಹಾರ ಮೊತ್ತವನ್ನು ರೂ.30 ಸಾವಿರದಿಂದ ರೂ.60 ಸಾವಿರಕ್ಕೆ, ಆಸ್ತಿ ನಷ್ಟದ ಮೊತ್ತ ವನ್ನು ರೂ.10 ಸಾವಿರದಿಂದ ರೂ.20 ಸಾವಿರಕ್ಕೆ ಹಾಗೂ ಮೃತಪಟ್ಟ ವ್ಯಕ್ತಿಗಳ ಕುಟುಂಬಕ್ಕೆ ಧನಾತ್ಮಕ ಪರಿಹಾರದ ಜೊತೆಗೆ 5 ವರ್ಷದ ಅವಧಿ ನೀಡುತ್ತಿದ್ದ ಮಾಸಾಶನ ಮೊತ್ತ ರೂ.2 ಸಾವಿರವನ್ನು ರೂ.4 ಸಾವಿರಕ್ಕೆ ಹೆಚ್ಚಿಸಲಾಗಿದೆ ಎಂದರು.


ಆಸ್ಕರ್ ಪ್ರಶಸ್ತಿ: ಭಾರತೀಯ 4 ಚಿತ್ರಗಳು ಅಂತಿಮ ಸುತ್ತಿಗೆ

ನವದೆಹಲಿ: ಈ ಬಾರಿಯ ಆಸ್ಕರ್ ಪ್ರಶಸ್ತಿಗೆ ನಾಮನಿರ್ದೇಶನಗೊಂಡಿದ್ದ ಭಾರತೀಯ ಚಿತ್ರಗಳಲ್ಲಿ 4 ಚಿತ್ರಗಳನ್ನು ಪ್ರಶಸ್ತಿ ಸುತ್ತಿಗೆ ಅಂತಿಮಗೊಳಿಸಲಾಗಿದೆ. ಗುಜರಾತಿ ಚಿತ್ರ 'ಛೆಲ್ಲೋ ಶೋ', ಆರ್‌ಆರ್‌ಆರ್ ಚಿತ್ರದ 'ನಾಟು ನಾಟು' ಗೀತೆ ಸೇರಿ 4 ಚಿತ್ರಗಳು ಪ್ರಶಸ್ತಿ ಸುತ್ತಿನಲ್ಲಿ ಸ್ಥಾನ ಪಡೆದಿವೆ. ಅತ್ಯುತ್ತಮ ಅಂತರ ರಾಷ್ಟ್ರೀಯ ಚಿತ್ರ ವಿಭಾಗದಲ್ಲಿ 'ಛೆಲ್ಲೋ ಶೋ' ಆಯ್ಕೆ ಆಗಿದೆ. 'ನಾಟು ನಾಟು' ಗೀತೆಯು ಅತ್ಯುತ್ತಮ ಗೀತೆ (ಮೂಲ ಗೀತೆ) ವಿಭಾಗದಲ್ಲಿ ಸ್ಥಾನ ಪಡೆದಿದೆ. ಸಾಕ್ಷ್ಯಚಿತ್ರ ವಿಭಾಗದಲ್ಲಿ 'ಆಲ್ ದಟ್ ಬ್ರೀಥ್ಸ್' ಮತ್ತು ಕಿರು ಸಾಕ್ಷ್ಯಚಿತ್ರ ವಿಭಾಗದಲ್ಲಿ 'ದಿ ಎಲಿಫ್ಯಾಂಟ್ ವಿಸ್ಪರರ್' ಸ್ಥಾನ ಪಡೆದಿವೆ ಎಂದು ತಿಳಿದುಬಂದಿದೆ.

ಡಿ.25, ಪ್ರೊ.ಲಿಂಗದೇವರು ಹಳೆಮನೆ ಕುರಿತ 'ಹಿತ ಚಿಂತಕ' ಕೃತಿ ಬಿಡುಗಡೆ

ಮೈಸೂರು,ಡಿ.22(ಪಿಎಂ)– ದೇಸೀರಂಗ ಸಾಂಸ್ಕೃತಿಕ ಟ್ರಸ್ಟ್ ವತಿಯಿಂದ ಡಿ.25ರಂದು ಸಮಾಜವಾದಿ ಚಿಂತಕ ದಿ.ಪ್ರೊ.ಲಿಂಗದೇವರು ಹಳೆಮನೆಯವರ ಸಾಮಾಜಿಕ ಮತ್ತು ಸಾಹಿತ್ಯಕ ವಿಚಾರ ಒಳಗೊಂಡಿರುವ 'ಹಿತ ಚಿಂತಕ' ಕೃತಿ ಬಿಡುಗಡೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಕೃತಿ ಸಂಪಾದಕ, ಟ್ರಸ್ಟ್‌ನ ಅಧ್ಯಕ್ಷ ಕೃಷ್ಣ ಜನಮನ ತಿಳಿಸಿದರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಹಳೆಮನೆಯವರು ಸಾಕ್ಷರ, ಪ್ರಗತಿಪರ, ರೈತ ಮತ್ತು ದಲಿತ ಚಳುವಳಿಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಚಳುವಳಿ ಆಶಯವುಳ್ಳ ಹತ್ತಾರು ಬೀದಿ



ನಾಟಕಗಳನ್ನು ರಚಿಸಿ ಸಮಾಜ ಪರಿವರ್ತನೆಗೆ ನಾಂದಿ ಹಾಡಿದವರು. ಅಲ್ಲದೆ, ವೈಚಾರಿಕ, ವಿಮರ್ಶಾತ್ಮಕ ದೃಷ್ಟಿಕೋನದಲ್ಲಿ ಮೈಸೂರು ಒಡೆಯರ್ ನೈಜ ಇತಿಹಾಸ ರಚಿಸಿದ್ದಾರೆ ಎಂದರು. ಹಳೆಮನೆಯವರ ಹೋರಾಟ, ಬದುಕು, ಸಾಹಿತ್ಯ ಸೇವೆ ಮೊದಲಾದ ವಿಷಯಗಳನ್ನು ಗಮನದಲ್ಲಿರಿಸಿಕೊಂಡು ಅವರ ಸ್ಮರಣಾರ್ಥ 'ಹಿತ ಚಿಂತಕ' ಕೃತಿ ರಚನೆಗೊಂಡಿದೆ.


ಅಂದು ಬೆಳಗ್ಗೆ 10.30ಕ್ಕೆ ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಸಮಾಜವಾದಿ ಚಿಂತಕ ಪ.ಮಲ್ಲೇಶ್ ಕೃತಿ ಬಿಡುಗಡೆ ಮಾಡಲಿದ್ದಾರೆ. ಮೈಸೂರು ರಂಗಾಯಣ ಮಾಜಿ ನಿರ್ದೇಶಕ ಸಿ.ಬಸವಲಿಂಗಯ್ಯ ಅಧ್ಯಕ್ಷತೆ ವಹಿಸಲಿದ್ದಾರೆ. ಪುಸ್ತಕ ಕುರಿತು ಹಿರಿಯ ರಂಗಕರ್ಮಿ ಪ್ರೊ.ಹೆಚ್.ಎಸ್.ಉಮೇಶ್ ಮಾತನಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಚಿಂತಕಿ, ಲಿಂಗದೇವರು ಹಳೆಮನೆಯವರ ಪತ್ನಿ ನಂದಾ ಹಳೆಮನೆ, ಪುಸ್ತಕದ ಪ್ರಕಾಶಕ ಯು.ಎಸ್. ಮಹೇಶ್ ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು.

500 ಪುಟಗಳ ಬೃಹತ್ ಕೃತಿ ಇದಾಗಿದ್ದು, 60ಕ್ಕೂ ಹೆಚ್ಚು ಲೇಖನಗಳನ್ನು ಒಳಗೊಂಡಿದೆ. 'ಆಪ್ತರ ನೆನಪುಗಳು', 'ಹಳೆಮನೆಯವರ ನಾಟಕಗಳ ವಿಮರ್ಶೆ', 'ಹಳೆಮನೆ ಯವರ ಇತರ ಕೃತಿಗಳ ಅವಲೋಕನ', 'ರಂಗಭೂಮಿ ಅವಲೋಕನ', 'ವೈಚಾರಿಕ ಲೇಖನಗಳು' ಮತ್ತು ಹಳೆಮನೆಯವರ 'ಅಕ್ಕ ಅಥವಾ ಕಲ್ಲರಳಿ ಹೂವಾಗಿ' ನಾಟಕ ಸೇರಿದಂತೆ ಕೃತಿಯು ಒಟ್ಟು 6 ವಿಭಾಗಗಳನ್ನು ಹೊಂದಿದೆ ಎಂದರು. ಲಿಂಗದೇವರು ಹಳೆಮನೆಯವರ ಪತ್ನಿ ನಂದಾ ಹಳೆಮನೆ, ಟ್ರಸ್ಟ್ ಖಜಾಂಚಿ ಬಿ.ಎಸ್.ದಿನಮಣಿ ಗೋಷ್ಠಿಯಲ್ಲಿದ್ದರು.

ಮೈಸೂರು ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ದೇವನೂರು ಪ್ರತಾಪ್ ಅವರ ಹುಟ್ಟುಹಬ್ಬದ ಸಂಭ್ರಮ


ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದೇವನೂರು ಪ್ರತಾಪ್ ಅವರನ್ನು ಬಿಜೆಪಿ ನಗರಾಧ್ಯಕ್ಷ ಶ್ರೀವತ್ಸ, ಪ್ರಧಾನ ಕಾರ್ಯದರ್ಶಿ ಸೋಮಸುಂದರ್, ಗಿರಿಧರ್, ವಾಣೀಶ್‌ಕುಮಾರ್, ಕಂಡೇಶ್, ಮುಳ್ಳೂರು ರೇಚಣ್ಣ, ಶರತ್, ಪುಟ್ಟಬುದ್ಧಿ ಇನ್ನಿತರರು ಅಭಿನಂದಿಸಿದರು.


ಹುಟ್ಟುಹಬ್ಬದ ಅಂಗವಾಗಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದೇವನೂರು ಪ್ರತಾಪ್ ಅವರನ್ನು ಗುರುವಾರ ಮೈಸೂರು ಜಿಲ್ಲಾ ಬಿಜೆಪಿ ವತಿಯಿಂದ ಸನ್ಮಾನಿಸಲಾಯಿತು. ಜಿಲ್ಲಾಧ್ಯಕ್ಷೆ ಮಂಗಳಾ ಸೋಮಶೇಖರ್, ಮಹದೇವಯ್ಯ, ಸಾಮ್ರಾಟ್, ಮುಳ್ಳೂರು ರೇಚಣ್ಣ, ಸಂಜಯ್, ಗಣೇಶ್, ಮಧು ಇನ್ನಿತರರಿದ್ದರು.


ವರುಣಾ ಕ್ಷೇತ್ರದ ಬಿಜೆಪಿ ಮುಖಂಡರು ಆದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ದೇವನೂರು ಪ್ರತಾಪ್ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಮಾಜಿ ಸಚಿವರಾದ ವಿಜಯಶಂಕರ್, ವಿಭಾಗ ಪ್ರಭಾರಿ ಮೈ.ವಿ.ರವಿಶಂಕರ್, ವರುಣಾ ಅಧ್ಯಕ್ಷ ವಿಜಯಕುಮಾರ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಸದಾನಂದ, ಗುರುಸ್ವಾಮಿ, ಸಿದ್ದವೀರಪ್ಪ, ಗೆಜ್ಜಗಳ್ಳಿ ಮಹೇಶ್, ಮುಳ್ಳೂರು ರೇಚಣ್ಣ, ರಂಗುನಾಯಕ, ಕೃಷ್ಣಮೂರ್ತಿ, ಮಹದೇವ್, ಮತ್ತಿತರರು ಈ ವೇಳೆ ಉಪಸ್ಥಿತರಿದ್ದರು.

ಡಾ.ಮಂಜುನಾಥ್ ನಡೆದಾಡುವ ದೇವ ಧನ್ವಂತರಿ

ಮೈಸೂರು ಪೈಂಟ್ಸ್ ಹಾಗೂ ವಾರ್ನಿಸ್ ಅಧ್ಯಕ್ಷ ಆರ್.ರಘು ಪ್ರಶಂಸೆ

ಮೈಸೂರು, ಡಿ.22–ವೈದ್ಯಕೀಯ ಕ್ಷೇತ್ರದಲ್ಲಿ ಇಡೀ ಭಾರತವೇ ನಿಬ್ಬೆರಗಾಗುವಂತೆ ಸರ್ಕಾರಿ ಅಧೀನ ಆಸ್ಪತ್ರೆಯೊಂದು ಸಾಧನೆ ಮಾಡಿದ್ದರೆ ಅದು ಶ್ರೀ ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ. ಇದರ ರುವಾರಿ ಡಾ.ಸಿ.ಎನ್.ಮಂಜುನಾಥ್ ರವರು ಬಡವರ ಪಾಲಿಗೆ ನಡೆದಾಡುವ ದೇವ ಧನ್ವಂತರಿ ಆಗಿದ್ದಾರೆ ಎಂದು ಮೈಸೂರು ಪೈಂಟ್ಸ್ ಹಾಗೂ ವಾರ್ನಿಸ್ ಅಧ್ಯಕ್ಷ ಆರ್.ರಘು(ಕೌಟಿಲ್ಯ) ಹೇಳಿದರು.

ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಅವರು ಮಾತನಾಡಿದರು. ಡಾ.ಮಂಜುನಾಥ್ ಆರೋಗ್ಯ ಕ್ಷೇತ್ರದಲ್ಲಿ ಮಾಡಿರುವ ಸಮರ್ಪಣಾ ಮನೋಭಾವದ ಸೇವೆಗಾಗಿ ನಾಡೋಜ ಪ್ರಶಸ್ತಿ ಅವರ ಮುಡಿಗೇರಿದೆ. ಕೆಲವು ಪ್ರಶಸ್ತಿ, ಸನ್ಮಾನಗಳಿಗೆ ಘನತೆ ಗೌರವ ಬರುವುದು ಯಾವಾಗ ಎಂದರೆ ಅರ್ಹ ವ್ಯಕ್ತಿ ಅದನ್ನು ಅಲಂಕರಿಸಿದಾಗ ಮಾತ್ರ. ಮಂಜುನಾಥ್‌ರವರಿಗೆ ಈವರೆಗೂ ದೊರೆತಿರುವ ಎಲ್ಲಾ ಪ್ರಶಸ್ತಿ, ಸನ್ಮಾನಗಳೂ ಆ ಹಿರಿಮೆಯನ್ನು ಪಡೆದುಕೊಂಡಿವೆ. ತಮ್ಮ ಕುಟುಂಬದಂತೆ ಭಾವಿಸಿ ಜಯದೇವ ಹೃದ್ರೋಗ ಆಸ್ಪತ್ರೆಯನ್ನು ಬೆಂಗಳೂರು–ಮೈಸೂರಲ್ಲಿ ಎತ್ತರಕ್ಕೆ ಬೆಳೆಸಿದ ಕೀರ್ತಿ, ಕಟ್ಟ ಕಡೆಯ ಬಡವನಿಗೂ ಲಕ್ಷಾಂತರ ವೆಚ್ಚದ ಚಿಕಿತ್ಸೆ ದೊರೆಯುವಂತೆ ಮಾಡಿದ ಪುಣ್ಯದ ಸಾರಥಿ ಡಾ.ಮಂಜುನಾಥ್ ಆಗಿದ್ದಾರೆ ಎಂದು ಹೇಳಿದರು.



ಮೈಸೂರಿಗೆ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ರಾಜ ಮಹಾರಾಜರುಗಳ ಕೊಡುಗೆಯ ಇತಿಹಾಸ ಎಂದಿಗೂ ಮರೆಯಲಾಗದು. ಸ್ವಾತಂತ್ರ್ಯ ನಂತರ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಲ್ವಡಿಯವರ ಆತ್ಮ ತೃಪ್ತಿಯಾಗುವ ನಿಟ್ಟಿನಲ್ಲಿ ಅವರ ಕನಸು ಸಕಾರಗೊಳಿಸುವ ಪಥದಲ್ಲಿ ಜಯದೇವ ಆಸ್ಪತ್ರೆ ಮೈಸೂರಿನಲ್ಲಿ ತಲೆ ಎತ್ತಲು ಡಾ. ಮಂಜುನಾಥ್ ಕಾರಣರಾದರು. ಮಂಜುನಾಥ್‌ರವರ ಮಾರ್ಗದರ್ಶನದಲ್ಲಿ ಮೈಸೂರಿನಲ್ಲಿ ಡಾ.ಸದಾನಂದರವರು ಜಯದೇವ ಹೃದ್ರೋಗ ಆಸ್ಪತ್ರೆಯನ್ನು ಯಶಸ್ವಿಯಾಗಿ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಸರ್ಕಾರ ಕೂಡ ಇದಕ್ಕೆ ಪೂರಕವಾಗಿ ಸಂಸ್ಥೆಗೆ ಬೆಂಬಲ ನೀಡುತ್ತಿದೆ. ಜಯದೇವ ಎಂದರೆ ರೋಗ ಜಯಿಸುವ ದೇವಸ್ಥಾನ ಎಂದು ರಘು ಬಣ್ಣಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಡಾ.ಮಂಜುನಾಥ್, ಮೈಸೂರಿನ ಜಯದೇವ ಆಸ್ಪತ್ರೆ ಒಂದು ಲಕ್ಷ ರೋಗಿಗಳನ್ನು ದಾಖಲಿಸಿಕೊಂಡು ಚಿಕಿತ್ಸೆ ನೀಡಿರುವುದು ಒಂದು ಮಹತ್ವದ ಸಾಧನೆ ಎಂದು ಬಣ್ಣಿಸಿದರು. ಒಂದು ಸಂಸ್ಥೆ ಬೆಳೆಯಲು ಸರ್ಕಾರವೊಂದರಿಂದಲೇ ಸಾಧ್ಯವಿಲ್ಲ. ಸಿಬ್ಬಂದಿ ಹಾಗೂ ಸಮಾಜದ ಎಲ್ಲಾ ಸ್ತರದ ಜನರ ಬೆಂಬಲ ಅತ್ಯವಶ್ಯಕವಾಗಿ ಬೇಕಾಗಿದೆ. ಈ ನಿಟ್ಟಿನಲ್ಲಿ ಜಯದೇವ ಸಂಸ್ಥೆಗೆ ನಿರೀಕ್ಷೆಗೂ ಮೀರಿ ಸಹಕಾರದ ಮಹಾಪೂರ ಹರಿದು ಬರುತ್ತಿದೆ ಎಂದು ಹರ್ಷ ವ್ಯಕ್ತಪಡಿಸಿದರು.

> ಒಂದು ಸಂಸ್ಥೆ ಬೆಳೆಯಲು ಸಿಬ್ಬಂದಿಯ ಸಮರ್ಪಣಾ ಮನೋಭಾವ ಹಾಗೂ ಬದ್ಧತೆ ಮುಖ್ಯ. ಈ ನಿಟ್ಟಿನಲ್ಲಿ ಜಯದೇವ ಹೃದ್ರೋಗ ಸಂಸ್ಥೆ ವೈದ್ಯರು ಹಾಗೂ ಸಿಬ್ಬಂದಿ ವರ್ಗ ಶ್ಲಾಘನೀಯ ವಾದ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಡೀ ಭಾರತದಲ್ಲೇ ಹೆಮ್ಮೆಪಡುವ ವಿಶ್ವದರ್ಜೆಯ ಕಾರ್ಯ ನಿರ್ವಹಿಸುತ್ತಿದ್ದರೆ ಅದು ಜಯದೇವ ಸಂಸ್ಥೆ. **–ಡಾ.ಸಿ.ಎನ್.ಮಂಜುನಾಥ್**

ಮೈಸೂರಿನ ಭಾರತೀಯ ರಿಸರ್ವ್ ಬ್ಯಾಂಕ್‌ನ ನೋಟು ಮುದ್ರಣ ಸಂಸ್ಥೆ ಹಾಗೂ ಮೈಸೂರು ಪೇಂಟ್ಸ್ ಅಂಡ್ ವಾರ್ನಿಸ್ ಸಂಸ್ಥೆ ಜಯದೇವ ಹೃದ್ರೋಗ ಆಸ್ಪತ್ರೆಗೆ ನೀಡಿದ ಉಪಯುಕ್ತ ಪರಿಕರಗಳನ್ನು ಡಾ.ಸಿ.ಎನ್.ಮಂಜುನಾಥ್ ಇದೇ ಸಂದರ್ಭದಲ್ಲಿ ಸ್ವೀಕರಿಸಿದರು.

ಸಂಸ್ಥೆಯ ಜನರಲ್ ಮ್ಯಾನೇಜರ್ ಜಿ.ಎಂ.ರಮೇಶ್, ಎಸ್.ಎನ್. ಬ್ಯಾನರ್ಜಿ, ಜಿ.ರವಿಶಂಕರ್ ನೋಟು ಮುದ್ರಣ ಸಂಸ್ಥೆ ಪರವಾಗಿ ಸಮಾರಂಭದಲ್ಲಿ ಹಾಜರಿದ್ದರು. ಮೈಸೂರು ಪೈಂಟ್ಸ್ ಅಂಡ್ ವಾರ್ನಿಸ್‌ನ ಪರವಾಗಿ ಸಂಸ್ಥೆಯ ವ್ಯವಸ್ಥಾಪಕ ನಿರ್ವಾಹಕ ಜಿ.ಕುಮಾರಸ್ವಾಮಿ, ಜನರಲ್ ಮ್ಯಾನೇಜರ್ ಹರಕುಮಾರ್ ಉಪಸ್ಥಿತರಿದ್ದರು.

ಡಿ.26ರಂದು ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ದಿನದರ್ಶಿಕೆ, ಡೈರಿ ಬಿಡುಗಡೆ

ಮೈಸೂರು, ಡಿ.22(ಪಿಎಂ)– ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ವತಿಯಿಂದ ಡಿ.26ರಂದು 2023ರ ದಿನದರ್ಶಿಕೆ ಮತ್ತು ಡೈರಿ ಬಿಡುಗಡೆ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಮೈಸೂರಿನ ಹೋಟೆಲ್ ಏರ್‌ಲೈನ್ಸ್ ಆವರಣದಲ್ಲಿ (ನ್ಯಾಯಾಲಯದ ಬಳಿ) ಅಂದು ಬೆಳಗ್ಗೆ 11ಕ್ಕೆ ಕಾರ್ಯಕ್ರಮ ನಡೆಯಲಿದೆ. ಬೆಂಗಳೂರು ಭೂ ಕಬಳಿಕೆ ನಿಷೇಧ ವಿಶೇಷ ನ್ಯಾಯಾಲಯದ ಸದಸ್ಯ ಸಿ.ಜಿ.ಹುನಗುಂದ ಅಧ್ಯಕ್ಷತೆ ವಹಿಸಲಿದ್ದು, ಪೊಲೀಸ್ ಆಯುಕ್ತ ರಮೇಶ್ ಬಾನೋತ್ ದಿನದರ್ಶಿಕೆ ಮತ್ತು ಡೈರಿ ಬಿಡುಗಡೆ ಮಾಡಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸೂರು ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ, ಮಾಜಿ ಅಧ್ಯಕ್ಷ ಜಿ.ವಿ.ರಾಮಮೂರ್ತಿ, ಕಾರ್ಯದರ್ಶಿ ಎಸ್.ಉಮೇಶ್, ಹಿರಿಯ ವಕೀಲರಾದ ಎಂ.ಡಿ.ಹರೀಶ್ ಕುಮಾರ್ ಹೆಗ್ಡೆ, ಎಸ್.ಲೋಕೇಶ್ ಪಾಲ್ಗೊಳ್ಳಲಿದ್ದಾರೆ. ಹಿರಿಯ ವಕೀಲ ಹಾಗೂ ಲಾಗೈಡ್ ಗೌರವ ಸಂಪಾದಕ ಹೆಚ್.ಎನ್.ವೆಂಕಟೇಶ್ ಉಪಸ್ಥಿತರಿರಲಿದ್ದಾರೆ. ಇದೇ ವೇಳೆ ನಿವೃತ್ತ ಸರ್ಕಾರಿ ಅಭಿಯೋಜಕ ಆನಂದಕುಮಾರ್, ಪತ್ರಕರ್ತರಾದ ಡಾ.ಕೂಡ್ಲಿ ಗುರುರಾಜ್, ಕೊಳ್ಳೇಗಾಲ ಮಹೇಶ್ ಅವರನ್ನು ಸನ್ಮಾನಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.


ಗುರುವಾರ ಬೆಳಗ್ಗೆ ವಾರ್ಡ್ ನಂ.18ರ ಮಂಜುನಾಥಪುರ ನಿವಾಸಿ ಚಿನ್ನಮ್ಮ ನಿಧನರಾದರು. ಮೈಸೂರು ಪಾಲಿಕೆ ವತಿಯಿಂದ ಪರಿಶಿಷ್ಟ ವರ್ಗದ ಯೋಜನೆಯಡಿ ಶವಸಂಸ್ಕಾರ ಸಹಾಯ ಧನದ ಚೆಕ್ಕನ್ನು ಮೃತರ ಪತಿ ಹನುಮಂತ ನಾಯಕ ಅವರಿಗೆ ನೀಡಲಾಯಿತು. ಈ ವೇಳೆ ಪಾಲಿಕೆ ಸದಸ್ಯ ಬಿ.ವಿ.ರವೀಂದ್ರ, ಮುಖಂಡರಾದ ಕವಿತಾ, ಮಂಜುನಾಥ್, ಭರತ್, ಗೋವಿಂದ, ಸಿದ್ದರಾಜು, ಶಿವಣ್ಣ, ಪಾಲಿಕೆ ಅಧಿಕಾರಿಗಳಾದ ಉಮೇಶ್, ಹೆಲ್ತ್ ಇನ್ಸ್‌ಪೆಕ್ಟರ್ ಹರೀಶ್, ರಜಾಕ್ ಇನ್ನಿತರರು ಹಾಜರಿದ್ದರು.

ಮೂರ್ನಾಡಿನಲ್ಲಿ ರಸ್ತೆ ದುರಸ್ತಿಗೆ ಆಗ್ರಹಿಸಿ

ಬಾಳೆಗಿಡ ನೆಟ್ಟು ಜೆಡಿಎಸ್, ಗ್ರಾಮಸ್ಥರ ಪ್ರತಿಭಟನೆ

ಮಡಿಕೇರಿ, ಡಿ.22– ಸಂಪೂರ್ಣವಾಗಿ ಹದಗೆಟ್ಟು ಸಂಚಾರಕ್ಕೆ ಯೋಗ್ಯವಲ್ಲದ ಮೂರ್ನಾಡು, ಹೊದ್ದೂರು, ಕೊಂಡಂಗೇರಿ, ಕಬಡಕೇರಿ ಸುತ್ತಮುತ್ತಲ ಭಾಗದ ಎಲ್ಲಾ ರಸ್ತೆಗಳನ್ನು ದುರಸ್ತಿಪಡಿಸುವಂತೆ ಆಗ್ರಹಿಸಿ ಜೆಡಿಎಸ್ ಪಕ್ಷದ ವತಿಯಿಂದ ಗ್ರಾಮಸ್ಥರ ಸಹಕಾರದೊಂದಿಗೆ ಮೂರ್ನಾಡಿನಲ್ಲಿ ರಸ್ತೆತಡೆದು ಪ್ರತಿಭಟನೆ ನಡೆಸಲಾಯಿತು.

ಜೆಡಿಎಸ್ ಜಿಲ್ಲಾಧ್ಯಕ್ಷ ಕೆ.ಎಂ.ಗಣೇಶ್ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಮತ್ತು ಮೂರ್ನಾಡು, ಕಬಡಕೇರಿ, ಹೊದ್ದೂರು ಗ್ರಾಮಸ್ಥರು ಮೂರ್ನಾಡು–ನಾಪೋಕ್ಲು ಜಂಕ್ಷನ್ ಬಳಿ ಗುಂಡಿಬಿದ್ದ ರಸ್ತೆಯಲ್ಲಿ ಬಾಳೆಗಿಡ ನೆಟ್ಟು ಪ್ರತಿಭಟನೆ ನಡೆಸಿದರು. ರಸ್ತೆ ದುರಸ್ತಿಗೆ ಮುಂದಾಗದ ಜನಪ್ರತಿನಿಧಿಗಳು, ಅಧಿಕಾರಿಗಳ ವಿರುದ್ಧ ಪ್ರತಿಭಟನಾಕಾರರು ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಮೂರ್ನಾಡು, ಹೊದ್ದೂರು, ಕೊಂಡಂಗೇರಿ, ಕಬಡಕೇರಿ, ಸುತ್ತಮುತ್ತಲ ಭಾಗದ ಎಲ್ಲಾ ರಸ್ತೆಗಳನ್ನು ದುರಸ್ತಿಪಡಿಸುವಂತೆ ಕಳೆದ 3 ವರ್ಷಗಳಿಂದ ಸಂಬಂಧಿಸಿದವರಿಗೆ ಮನವಿ ಸಲ್ಲಿಸುತ್ತಾ ಬಂದಿದ್ದರೂ ರಸ್ತೆ ದುರಸ್ತಿಗೊಳಿಸದೇ ನಿರ್ಲಕ್ಷ್ಯ ಧೋರಣೆ ಅನುಸರಿಸಲಾಗುತ್ತಿದೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭ ಸ್ಥಳಕ್ಕಾಗಮಿಸಿದ ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯಪಾಲಕ ಅಭಿಯಂತರರಾದ ಧ್ರುವರಾಜ್ ಅವರನ್ನು ತರಾಟೆಗೆ ತೆಗೆದುಕೊಂಡ ಪ್ರತಿಭಟನಾಕಾರರು ತೀವ್ರ ಆಕ್ರೋಷ ವ್ಯಕ್ತಪಡಿಸಿದರು. ಸಂಪೂರ್ಣ ಹದಗೆಟ್ಟಿರುವ ರಸ್ತೆಗಳಲ್ಲಿ ವಾಹನ ಮತ್ತು ಜನ ಸಂಚಾರ ಅಸಾಧ್ಯವಾಗಿದ್ದು, ಕೂಡಲೇ ರಸ್ತೆ ದುರಸ್ಥಿಪಡಿಸುವಂತೆ ಪಟ್ಟು ಹಿಡಿದರು.

ಈ ಸಂದರ್ಭ ಮಾತನಾಡಿದ ಪಿಡಬ್ಲ್ಯುಡಿ ಸಹಾಯಕ ಕಾರ್ಯಪಾಲಕ ಅಭಿಯಂತರ ಧ್ರುವರಾಜ್, ಶುಕ್ರವಾರದಿಂದಲೇ ಕೊಂಡಂಗೇರಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿ ಕೈಗೊಳ್ಳಲಾಗುವುದು. ಒಂದು ವಾರದ ಬಳಿಕ ಇತರ ರಸ್ತೆಗಳ ಗುಂಡಿ ಮುಚ್ಚುವುದರೊಂದಿಗೆ ಡಾಂಬರೀಕರಣ ಮಾಡಲಾಗುವುದೆಂದು ಭರವಸೆ ನೀಡಿದರು. ಈ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಕೈಬಿಡಲಾಯಿತು.

ಸ್ಥಳಕ್ಕೆ ಭೇಟಿ ನೀಡಿದ್ದ ಪಿಡಬ್ಲ್ಯೂಡಿ ಸಹಾಯಕ ಇಂಜಿನಿಯರ್‌ಗೆ ತರಾಟೆ



ಈ ಸಂದರ್ಭ ಮಾತನಾಡಿದ ಜಾತ್ಯಾತೀತ ಜನತಾ ದಳದ ಜಿಲ್ಲಾಧ್ಯಕ್ಷ ಕೆ.ಎಂ.ಗಣೇಶ್, ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿ ವ್ಯಾಪ್ತಿಯ ರಸ್ತೆಗಳು ತೀರಾ ಹದಗೆಟ್ಟಿದೆ. ಈ ಹಿನ್ನೆಲೆಯಲ್ಲಿ ಪ್ರತಿ ಗ್ರಾಮಮಟ್ಟದಲ್ಲೂ ಇಂತಹ ಪ್ರತಿಭಟನೆಗಳು ನಡೆಸುವ ಅನಿವಾರ್ಯತೆ ಇದೆ ಎಂದು ಹೇಳಿದರು. ಮೂರ್ನಾಡು, ಹೊದ್ದೂರು, ಕೊಂಡಂಗೇರಿ, ಕಬಡಕೇರಿ ಸುತ್ತಮುತ್ತಲ ಭಾಗದ ಎಲ್ಲಾ ರಸ್ತೆಗಳನ್ನು 1 ವಾರದೊಳಗೆ ದುರಸ್ತಿಪಡಿಸದಿದ್ದಲ್ಲಿ ಮಡಿಕೇರಿಯ ಲೋಕೋಪಯೋಗಿ ಇಲಾಖೆ ಕಚೇರಿಗೆ ಮುತ್ತಿಗೆ ಹಾಕಿ ಬೃಹತ್ ಪ್ರತಿಭಟನೆ ನಡೆಸಲಾಗುವುದೆಂದು ಎಚ್ಚರಿಸಿದರು.

ಪಾಲೇಮಾಡು ಗ್ರಾಮಸ್ಥ ಮೊಣ್ಣಪ್ಪ ಮಾತನಾಡಿ, ರಸ್ತೆಗಳನ್ನು ದುರಸ್ತಿಪಡಿಸುವಂತೆ ಶಾಸಕರು, ಅಧಿಕಾರಿಗಳ ಗಮನ ಸೆಳೆದಿದ್ದರೂ ಯಾವುದೇ ಕ್ರಮಕೈಗೊಂಡಿಲ್ಲವೆಂದು ಅಸಮಾಧಾನ ವ್ಯಕ್ತಪಡಿಸಿದರು. 1 ವಾರದೊಳಗೆ ರಸ್ತೆ ದುರಸ್ತಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳದಿದ್ದಲ್ಲಿ ಮೂರ್ನಾಡು ಪಟ್ಟಣ ಬಂದ್‌ಗೆ ಕರೆ ನೀಡಲಾಗುವುದೆಂದು ಎಚ್ಚರಿಸಿದರು.

ಹೊದ್ದೂರು ಗ್ರಾಮಸ್ಥ ಚೌರೀರ ರಮೇಶ್ ಮಾತನಾಡಿ, ರಸ್ತೆ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳದಿದ್ದಲ್ಲಿ ಗ್ರಾಮಸ್ಥರೆಲ್ಲ ಸೇರಿ ಮುಂಬರುವ ವಿಧಾನಸಭಾ ಚುನಾವಣೆಯನ್ನು ಬಹಿಷ್ಕರಿಸುವುದಾಗಿ ಹೇಳಿದರು.

ಜೆಡಿಎಸ್ ರಾಜ್ಯ ಸಂಘಟನಾ ಕಾರ್ಯದರ್ಶಿ ಮನ್ಸೂರ್ ಅಲಿ, ಹಿರಿಯ ಉಪಾಧ್ಯಕ್ಷ ಯೂಸುಫ್ ಕೊಂಡಂಗೇರಿ, ಸೋಮವಾರಪೇಟೆ ತಾಲೂಕು ಅಧ್ಯಕ್ಷ ನಾಗರಾಜ್, ವಿರಾಜಪೇಟೆ ತಾಲೂಕು ಅಧ್ಯಕ್ಷ ಮಂಜುನಾಥ್, ಜಿಲ್ಲಾ ಉಪಾಧ್ಯಕ್ಷ ಬಲ್ಲಚಂಡ ಗೌತಮ್, ಜಿಲ್ಲಾ ಕಾರ್ಯದರ್ಶಿ ಎನ್.ಸಿ.ಸುನೀಲ್, ಯುವ ಘಟಕದ ಪ್ರಧಾನ ಕಾರ್ಯದರ್ಶಿ ಜಾಶೀರ್, ಮಹಿಳಾ ಘಟಕದ ವಕ್ತಾರೆ ಗುಲಾಬಿ ಜನಾರ್ಧನ್, ಮಡಿಕೇರಿ ನಗರ ಉಪಾಧ್ಯಕ್ಷ ಕುಮಾರ್, ಪಕ್ಷದ ರೈತ ಘಟಕದ ಪ್ರಮುಖ ಪ್ರಥ್ವಿ, ಕಬಡಕೇರಿ ಗ್ರಾಮ ಪಂಚಾಯಿತಿ ಸದಸ್ಯ ಹಮೀದ್ ಸೇರಿದಂತೆ ಸುತ್ತಮುತ್ತಲ ಗ್ರಾಮಸ್ಥರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

3ನೇ ಅಂತರಾಷ್ಟ್ರೀಯ ಪನೋರಮಾ ಚಲನಚಿತ್ರೋತ್ಸವದಲ್ಲಿ 'ನಾಡ ಪೆದ ಆಶಾ'ಗೆ ಅತ್ಯುತ್ತಮ ಪ್ರಾದೇಶಿಕ ಚಿತ್ರ ಪ್ರಶಸ್ತಿ

ನಿರ್ದೇಶಕರು, ಚಿತ್ರತಂಡಕ್ಕೆ ಪ್ರಶಸ್ತಿ ಸಮರ್ಪಿಸಿದ ನಿರ್ಮಾಪಕಿ



ಮಡಿಕೇರಿ, ಡಿ.22– ಇತ್ತೀಚೆಗೆ ಹುಬ್ಬಳ್ಳಿಯ ಕಲಾ ಮಂದಿರದಲ್ಲಿ ನಡೆದ 2ನೇ ಅಂತರಾಷ್ಟ್ರೀಯ ಚಲನ ಚಿತ್ರೋತ್ಸವದಲ್ಲಿ 'ಬೆಸ್ಟ್ ಡೈರೆಕ್ಟರ್ ಅವಾರ್ಡ್' ಪಡೆದಿದ್ದ 'ನಾಡ ಪೆದ ಆಶಾ' ಕೊಡವ ಚಲನಚಿತ್ರ ಇದೀಗ ಮತ್ತೊಂದು ಪ್ರಶಸ್ತಿಯ ಗರಿಯನ್ನು ಮುಡಿಗೇರಿಸಿಕೊಂಡಿದೆ. ಬೆಂಗಳೂರಿನಲ್ಲಿ ನಡೆದ 3ನೇ ಅಂತರ ರಾಷ್ಟ್ರೀಯ ಪನೋರಮಾ ಚಿತ್ರೋತ್ಸವದಲ್ಲಿ 'ಅತ್ಯುತ್ತಮ ಪ್ರಾದೇಶಿಕ ಚಲನಚಿತ್ರ' ಎನ್ನುವ ಪ್ರಶಸ್ತಿ ಪಡೆದು 'ನಾಡ ಪೆದ ಆಶಾ' ಚಿತ್ರ ಬೀಗಿದೆ.

ಕೊಟ್ಟುಕತ್ತೀರ ಪ್ರಕಾಶ್ ಕಾರ್ಯಪ್ಪ ನಿರ್ದೇಶನದ, ವಿಕೆ ಪಿಕ್ಚರ್ ಬ್ಯಾನರಿನಡಿ ಈರಮಂಡ ಹರಿಣಿ ವಿಜಯ್ ಹಾಗೂ ಕೊಟ್ಟುಕತ್ತೀರ ಯಶೋಧ ಪ್ರಕಾಶ್ ನಿರ್ಮಾಣದ ಕೊಡವ ಚಿತ್ರ ಇದಾಗಿದ್ದು, ಹಿರಿಯ ಸಾಹಿತಿ ನಾಗೇಶ್ ಕಾಲೂರು ಅವರ ಕಾದಂಬರಿಯನ್ನು ಆಧರಿಸಿ ಚಿತ್ರಿಸಲಾಗಿದೆ.

ಬೆಂಗಳೂರಿನ ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣದಲ್ಲಿ ಫಿಲ್ಮೋಲಿಕ್ ಫೌಂಡೇಶನ್ ಸಹಯೋಗದಲ್ಲಿ ನಡೆದ 3ನೇ ಅಂತರಾಷ್ಟ್ರೀಯ ಪನೋರಮಾ ಚಿತ್ರೋತ್ಸವದಲ್ಲಿ ಪದ್ಮಶ್ರೀ ಪುರಸ್ಕೃತ ಸಾಹಿತಿ ಡಾ.ದೊಡ್ಡರಂಗೇಗೌಡ, ಖ್ಯಾತ ನಿರ್ಮಾಪಕ ಹಾಗೂ ಛಾಯಾಗ್ರಾಹಕ ಜೆ.ಜೆ.ಕೃಷ್ಣ, ಖ್ಯಾತ ನಟಿಯರಾದ ರೇಖಾ ದಾಸ್, ನೀತು ಶೆಟ್ಟಿ, ನಿಶ್ಚಿತಾ ನಾಯ್ಡು, ಫಿಲಂ ಹೋಲಿಕ್ ಫೌಂಡೇಶನ್ ಅಧ್ಯಕ್ಷ ಹಾಗೂ ಚಿತ್ರೋತ್ಸವದ ನಿರ್ದೇಶಕ ಆದಿತ್ಯ ಅವರುಗಳ ಉಪಸ್ಥಿತಿಯಲ್ಲಿ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಬಾ.ಮಾ. ಹರೀಶ್ ಅವರಿಂದ 'ನಾಡ ಪೆದ ಆಶಾ' ಚಿತ್ರದ ನಿರ್ಮಾಪಕಿ ಈರಮಂಡ ಹರಿಣಿ ವಿಜಯ್ ಅವರು 'ಅತ್ಯುತ್ತಮ ಪ್ರಾದೇಶಿಕ ಚಲನಚಿತ್ರ ಪ್ರಶಸ್ತಿ'ಯನ್ನು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು ಪ್ರಶಸ್ತಿಯನ್ನು ನಿರ್ದೇಶಕರು ಹಾಗೂ ಇಡೀ ಚಿತ್ರತಂಡಕ್ಕೆ ಸಮರ್ಪಿಸುವುದಾಗಿ ತಿಳಿಸಿದರು. ಅಲ್ಲದೆ ಚಿತ್ರದ ಯಶಸ್ಸಿಗಾಗಿ ಶ್ರಮಿಸಿದ ಪ್ರತಿಯೊಬ್ಬರಿಗೂ ಕೃತಜ್ಞತೆ ಸಲ್ಲಿಸುವುದಾಗಿ ಹೇಳಿದರು. ಚಲನಚಿತ್ರೋತ್ಸವಕ್ಕೆ ಬಂದಿದ್ದ 100ಕ್ಕೂ ಅಧಿಕ ಚಿತ್ರಗಳಲ್ಲಿ 8 ಚಿತ್ರಗಳು ಅತ್ಯುತ್ತಮ ಚಿತ್ರ ಪ್ರಶಸ್ತಿಗೆ ಆಯ್ಕೆಗೊಂಡಿದ್ದು, ಇವುಗಳಲ್ಲಿ 'ನಾಡ ಪೆದ ಆಶಾ' ಚಿತ್ರ ಕೂಡ ಒಂದಾಗಿದೆ.

ಬೇಡಿಕೆ ಈಡೇರಿಕೆಗಾಗಿ ರೈತರು, ಕಾರ್ಮಿಕರ ಹೋರಾಟ ಅನಿವಾರ್ಯ

ಅಖಿಲ ಭಾರತ ಸಮ್ಮೇಳನದ ಅಂಗವಾಗಿ ನಡೆದ ವಿಚಾರ ಸಂಕಿರಣದಲ್ಲಿ ಚರ್ಚೆ

ವಿರಾಜಪೇಟೆ, ಡಿ.22– ರೈತರು ಮತ್ತು ಕಾರ್ಮಿಕರು ಸರ್ಕಾರಕ್ಕೆ ತೆರಿಗೆ ಕಟ್ಟುತ್ತಿದ್ದರೂ ಅವರಿಗೆ ಸೌಲಭ್ಯಗಳನ್ನು ಒದಗಿಸುವಲ್ಲಿ ಸರ್ಕಾರ ವಿಫಲಗೊಂಡಿದೆ ಎಂದು ಸಿಐಟಿಯು ರಾಜ್ಯ ಮುಖಂಡರಾದ ಮೈಸೂರಿನ ಬಾಲಾಜಿರಾವ್ ಆಪಾದಿಸಿದ್ದಾರೆ.

ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ಕೊಡಗು ಜಿಲ್ಲಾ ಸಮಿತಿ ವತಿಯಿಂದ ಜ.18 ರಿಂದ 22ರವರೆಗೆ ಬೆಂಗಳೂರಿನಲ್ಲಿ ನಡೆಯುವ 17ನೇ ಅಖಿಲ ಭಾರತ ಸಮ್ಮೇಳನದ ಅಂಗವಾಗಿ ವಿರಾಜಪೇಟೆ ನಗರದಲ್ಲಿರುವ ಉಪಾಧ್ಯಾಯರ ಸ್ಟೋರ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಭಾಗವಹಿಸಿ, 'ನವ ಉದಾರವಾದಿ ನೀತಿಗಳು, ರೈತ–ಕಾರ್ಮಿಕರ ಬದುಕಿನ ಪ್ರಶ್ನೆಗಳು' ಎಂಬ ವಿಷಯದ ಬಗ್ಗೆ ಮಾತನಾಡಿದ ಅವರು, ರೈತರು ಬೆಳೆದ ಬೆಳೆಗೆ ದಲ್ಲಾಳಿಗಳ ಹಾವಳಿಯಿಂದ ನ್ಯಾಯವಾದ ಬೆಲೆ ಸಿಗುತ್ತಿಲ್ಲ. ಅಲ್ಲದೆ ರೈತರಿಗೆ ನೀಡುತ್ತಿರುವ ಬಿತ್ತನೆ ಬೀಜಗಳಿಂದ ಭೂಮಿ ಕೂಡ ಭರುಡಾಗಿದೆ. ಇದಕ್ಕೆಲ್ಲ ನಮ್ಮನ್ನಾಳುವ ಸರ್ಕಾರ ಭಂಡವಾಳ ಶಾಯಿಗಳ ಹಿಡಿತದಲ್ಲಿರುವುದರಿಂದ ರೈತರು–ಕಾರ್ಮಿಕರು ಸೇರಿ ಅವ್ಯವಸ್ಥೆಗಳ ವಿರುದ್ಧ ಹೋರಾಟ ನಡೆಸುವ ಅನಿವಾರ್ಯತೆ ಇದೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಜಾತ್ಯಾತೀತ ಜನತಾ ದಳದ ರಾಜ್ಯ ವಕ್ತಾರರಾದ ಮೇರಿಯಂಡ ಸಂಕೇತ್ ಪೂವಯ್ಯ ಮಾತನಾಡಿ, ಸರ್ಕಾರ ಕಾರ್ಮಿಕರ ಮೇಲೆ ನಿರಂತರ ಗಧಾ ಪ್ರಯೋಗ ಮಾಡುತ್ತ ಬಂದಿದೆ. ಕೇಂದ್ರ ಮತ್ತು ರಾಜ್ಯದಲ್ಲಿ ಎಲ್ಲಾ ಪಕ್ಷಗಳಿಗೂ ಅವಕಾಶ ದೊರಕಿದ್ದರೂ ಜನರ ಸಮಸ್ಯೆಗಳನ್ನು ಬಗೆಹರಿಸಲು ವಿಫಲವಾಗಿದೆ ಎಂದರು. ರೈತರು ಶ್ರಮ ಜೀವಿಗಳು. ಬೆಳೆ ನಷ್ಟದಿಂದ ಅನೇಕರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದರೂ ಸರ್ಕಾರ ಗಮನಹರಿಸುತ್ತಿಲ್ಲ. ಅವರ ಸಮಸ್ಯೆಗಳನ್ನು ಬಗೆಹರಿಸುವಂತಾಗಬೇಕು ಎಂದ ಅವರು ಕಾರ್ಮಿಕರು ಶ್ರಮ ಜೀವಿಗಳು. ಅವರಿಗೆ ರಕ್ಷಣೆ ಕೊಡುವಂತಾಗಬೇಕು. ವಲಸೆ ಕಾರ್ಮಿಕರ ಬಗ್ಗೆ ಎಲ್ಲರೂ ಸಹಕಾರ ನೀಡುವ ಮೂಲಕ ಉತ್ತಮ ಸಮಾಜ ಕಟ್ಟುವಂತ ಚಿಂತನೆಗಳು ಅಗತ್ಯವಾಗಿದೆ ಎಂದರು.



ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ಮಾತನಾಡಿ, ಈ ದೇಶದ ಕಟ್ಟಕಡೆಯ ಜನರಿಗೂ ನ್ಯಾಯ ಸಿಗುವಂತಾಗಲು ಹೋರಾಟದ ಮೂಲಕ ಸರ್ಕಾರದ ಕಣ್ಣು ತೆರೆಸುವಂತಾಗಬೇಕು. ಇಂದಿನ ದಿನದಲ್ಲಿ ಜನಸಾಮಾನ್ಯರು ಉಪಯೋಗಿಸುವಂತ ದಿನನಿತ್ಯ ಬಳಕೆಯ ಎಲ್ಲಾ ವಸ್ತುಗಳ ಬೆಲೆ ಗಗನಕ್ಕೇರಿದೆ. ರೈತರು ಮತ್ತು ಕಾರ್ಮಿಕರ ಬಗ್ಗೆ ಸರ್ಕಾರ ಚಿಂತಿಸುತ್ತಿಲ್ಲ. ಸಾಮಾಜಿಕ ನ್ಯಾಯ ಒದಗಿಸಬೇಕೆಂದು ರೈತರು, ಕಾರ್ಮಿಕರು ಸೇರಿ ಮುಂದಿನ ದಿನದಲ್ಲಿ ಹೋರಾಟದ ಅನಿವಾರ್ಯತೆ ಇದೆ ಎಂದರು.

ರೈತ ಸಂಘದ ಜಿಲ್ಲಾ ಅಧ್ಯಕ್ಷ ಮನು ಸೋಮಯ್ಯ ಮಾತನಾಡಿ, ಜನರ ಕಷ್ಟಕ್ಕೆ ನಾವು ಧ್ವನಿಯಾಗಬೇಕು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ರೈತರ ಬೇಡಿಕೆಗಳ ಬಗ್ಗೆ ಗಮನ ಹರಿಸುತ್ತಿಲ್ಲ. ರೈತರು–ಕಾರ್ಮಿಕರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಮುಂದಿನ ದಿನದಲ್ಲಿ ಐಕ್ಯ ಹೋರಾಟ ನಡೆಸಬೇಕಾಗಿದೆ ಚುನಾವಣೆ ಸಂದರ್ಭ ಮತದಾರರು ನೋಟಿಗಾಗಿ ಮತ ಚಲಾಯಿಸಬಾರದು, ಪ್ರಜ್ಞಾವಂತರಾಗಬೇಕು. ಉತ್ತಮ ವ್ಯಕ್ತಿಯನ್ನು ಆಯ್ಕೆ ಮಾಡುವಂತಾಗಬೇಕು ಎಂದರು.

ವಿರಾಜಪೇಟೆ ವಕೀಲರ ಸಂಘದ ಅಧ್ಯಕ್ಷ ಐ.ಆರ್.ಪ್ರಮೋದ್ ಅವರು ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಕೊಡಗಿನಲ್ಲಿ ವನ್ಯ ಮೃಗಗಳ ಹಾವಳಿಯಿಂದ ಕೃಷಿಕರಿಗೆ ಭತ್ತ ಹಾಗೂ ಇತರ ಕೃಷಿಗಳನ್ನು ಬೆಳೆಯಲು ಸಾಧ್ಯವಾಗುತ್ತಿಲ್ಲ. ಕಾಡು ಪ್ರಾಣಿಗಳ ಹಾವಳಿಯಿಂದ ಅನೇಕರು ಪ್ರಾಣವನ್ನೇ ಕಳೆದುಕೊಂಡಿದ್ದಾರೆ. ರೈತರ ಬೆಳೆಗೆ ಉತ್ತಮ ಬೆಲೆ ಸಿಗುವಂತಾಗಬೇಕು. ಇಲ್ಲವಾದಲ್ಲಿ ರೈತರು–ಕಾರ್ಮಿಕರ ಹೋರಾಟ ಮುಂದುವರಿಯಲಿದೆ ಎಂದರು.

ಅಖಿಲ ಭಾರತ ಸಮ್ಮೇಳನದ ಅಂಗವಾಗಿ ವೇದಿಕೆಯಲ್ಲಿ ಲೋಗೋ ಬಿಡುಗಡೆಗೊಳಿಸಲಾಯಿತು. ಮೊದಲಿಗೆ ಸಿಐಟಿಯು ಜಿಲ್ಲಾ ಅಧ್ಯಕ್ಷ ಪಿ.ಆರ್.ಭರತ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಧಾನ ಕಾರ್ಯದರ್ಶಿ ಎಸಿಸಾಬು ಸ್ವಾಗತಿಸಿದರೆ, ಸಹಕಾರ್ಯದರ್ಶಿ ಕೆ.ಎಸ್.ರತೀಶ್ ವಂದಿಸಿದರು. ವಿಚಾರ ಸಂಕಿರಣದಲ್ಲಿ ಮುಖಂಡರಾದ ಎನ್.ಡಿ. ಕುಟ್ಟಪ್ಪ, ಹೆಚ್.ಪಿ. ರಮೇಶ್, ವಿಮಾ ನೌಕರರು, ಅಂಗನವಾಡಿ, ಅಕ್ಷರ ದಾಸೋಹದ ಕಾರ್ಯಕರ್ತರು, ಕಟ್ಟಡ ಕಾರ್ಮಿಕರು, ಪಂಚಾಯಿತಿ ನೌಕರರು, ಅಮಾಲಿ ಕಾರ್ಮಿಕರು, ತೋಟ ಕಾರ್ಮಿಕರು ಮುಂತಾದವರು ಭಾಗವಹಿಸಿದ್ದರು.

ಕೋವಿಡ್–19 ಲಸಿಕೆ ಸದುಪಯೋಗಕ್ಕೆ ಮನವಿ

ಮಡಿಕೇರಿ, ಡಿ.22– ಭಾರತ ಸರ್ಕಾರವು 18 ವರ್ಷ ಮೇಲ್ಪಟ್ಟ ಸಾರ್ವಜನಿಕರಿಗೆ ಉಚಿತವಾಗಿ ಮುಂಜಾಗ್ರತಾ ಕೋವ್ಯಾಕ್ಸಿನ್ ಲಸಿಕೆ ಹಾಗೂ 15 ವರ್ಷ ಮೇಲ್ಪಟ್ಟವರಿಗೆ ಎರಡನೇ ವರಸೆಯ ಕೋವ್ಯಾಕ್ಸಿನ್ ಲಸಿಕೆಯನ್ನು ನೀಡಲಾಗುತ್ತಿದೆ. ಕೊಡಗು ಜಿಲ್ಲೆಯಲ್ಲಿಯೂ ಕೂಡ ಎಲ್ಲಾ ಆರೋಗ್ಯ ಕೇಂದ್ರಗಳ ಲಸಿಕಾ ವಿಭಾಗದಲ್ಲಿ ಲಸಿಕೆಯನ್ನು ನೀಡಲು ಕ್ರಮ ಕೈಗೊಳ್ಳಲಾಗಿದೆ. ಜಿಲ್ಲೆಯಲ್ಲಿ ಎರಡನೇ ವರಸೆಗೆ ಬಾಕಿ ಇರುವ 15 ವರ್ಷ ಮೇಲ್ಪಟ್ಟ ಒಟ್ಟು 858 ಫಲಾನುಭವಿಗಳು ಹಾಗೂ ಎರಡನೇ ವರಸೆಯ ಕೋವ್ಯಾಕ್ಸಿನ್ ಲಸಿಕೆಯನ್ನು ಪಡೆದು 6 ತಿಂಗಳು ಪೂರೈಸಿರುವ 18 ವರ್ಷ ಮೇಲ್ಪಟ್ಟ ಒಟ್ಟು 42,214 ಫಲಾನುಭವಿಗಳು ಮುಂಜಾಗ್ರತಾ ಕೋವಿಡ್ ಲಸಿಕಾಕರಣಕ್ಕೆ ಬಾಕಿ ಇದ್ದು, ಎಲ್ಲರೂ ತಮ್ಮ ಸಮೀಪದ ಆರೋಗ್ಯ ಕೇಂದ್ರದಲ್ಲಿ ಪ್ರತಿ ದಿನ ನಡೆಯುವ ಲಸಿಕಾ ಶಿಬಿರದಲ್ಲಿ ಕೋವ್ಯಾಕ್ಸಿನ್ ಲಸಿಕೆಯನ್ನು ಹಾಕಿಸಿ ಸದುಪಯೋಗ ಪಡೆದುಕೊಳ್ಳಲು ಕೊಡಗು ಜಿಲ್ಲಾಡಳಿತ ಮತ್ತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಂಟಿ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಹನೂರು ಬಳಿ ಮರಕ್ಕೆ ಡಿಕ್ಕಿ ಹೊಡೆದು ಉರುಳಿದ ಕಾರು

ಹುಟ್ಟುಹಬ್ಬದ ದಿನವೇ ಮಗು ಸೇರಿದಂತೆ ಇಬ್ಬರ ಸಾವು

ಮಲೆ ಮಹದೇಶ್ವರ ಬೆಟ್ಟದಿಂದ ಹಿಂತಿರುತ್ತಿದ್ದಾಗ ದುರಂತ

ಹನೂರು, ಡಿ.22– ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಮಾದಪ್ಪನಿಗೆ ಪೂಜೆ ಸಲ್ಲಿಸಿ ಹಿಂತಿರುಗುತ್ತಿದ್ದ ವೇಳೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಹುಟ್ಟುಹಬ್ಬ ಆಚರಿಸಿಕೊಳ್ಳಬೇಕಾಗಿದ್ದ ಮಗು ಮತ್ತು ಅಜ್ಜಿ ಸೇರಿದಂತೆ ಇಬ್ಬರು ಸಾವನ್ನಪ್ಪಿ ಐದು ಮಂದಿ ಗಾಯಗೊಂಡಿರುವ ಘಟನೆ ಸಮೀಪದ ಮಂಗಲ ಗ್ರಾಮದ ಬಳಿ ಜರುಗಿದೆ.



ಮೈಸೂರು ತಾಲೂಕು ಮಾರ್ಬಳ್ಳಿ ಗ್ರಾಮದ ತನ್ಮಯ್ (3) ಹಾಗೂ ಅಜ್ಜಿ ಸಣ್ಣತಾಯಮ್ಮ (60) ಅವರುಗಳು ಸಾವನ್ನಪ್ಪಿದ್ದು, ಗಾಯಾಳುಗಳಾದ ಮಂಜುಳ, ಸಾಕಮ್ಮ, ಕಿರಣ್, ಚಂದನ್ ಸೇರಿದಂತೆ ಐದು ಮಂದಿಯನ್ನು ಕಾಮನಗೆರೆ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಇಂದು (ಗುರುವಾರ) ತನ್ಮಯ್ ಹುಟ್ಟುಹಬ್ಬ, ಈ ಹಿನ್ನೆಲೆಯಲ್ಲಿ ಮನೆಯವರೆಲ್ಲ ಮಲೆ ಮಹದೇಶ್ವರಸ್ವಾಮಿ ಬೆಟ್ಟಕ್ಕೆ ತೆರಳಿ ಪೂಜೆ ಸಲ್ಲಿಸಿ ಕಾರಿನಲ್ಲಿ ಹಿಂತಿರುಗುತ್ತಿದ್ದಾಗ, ಚಾಲಕನ ನಿಯಂತ್ರಣ ತಪ್ಪಿದ ಕಾರು ರಸ್ತೆ ಬದಿಯ ಮರಕ್ಕೆ ಡಿಕ್ಕಿ ಹೊಡೆದು ಉರುಳಿ ಬಿದ್ದಿದೆ. ಇದರಿಂದ ಕಾರು ಜಖಂಗೊಂಡು, ಎಲ್ಲರೂ ಗಾಯಗೊಂಡರು. ಮಗು ಸ್ಥಳದಲ್ಲೇ ಸಾವನ್ನಪ್ಪಿದರೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಅಜ್ಜಿ ಸಣ್ಣತಾಯಮ್ಮ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದರು. ಹನೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ಒನಕೆಯಿಂದ ಹೊಡೆದು ವ್ಯಕ್ತಿ ಕೊಲೆ

ಪತ್ನಿ, ಮಗ ಪ್ರವಾಸಕ್ಕೆ ತೆರಳಿದ್ದ ವೇಳೆ ಘಟನೆ

ಕೊಳ್ಳೇಗಾಲ, ಡಿ.22– ವ್ಯಕ್ತಿಯೋರ್ವನ ತಲೆಗೆ ಒನಕೆಯಿಂದ ಹೊಡೆದು ಕೊಲೆ ಮಾಡಿರುವ ಘಟನೆ ತಾಲೂಕಿನ ಮಧುವನಹಳ್ಳಿ ಗ್ರಾಮದ ಜಿ.ವಿ ಗೌಡ ನಗರದಲ್ಲಿ ಸಂಭವಿಸಿದೆ.

ಗ್ರಾಮದ ನಿವಾಸಿ ಮಹದೇವಸ್ವಾಮಿ (46) ಕೊಲೆಯಾದವರು. ಈತನಿಗೆ ಪತ್ನಿ, ಇಬ್ಬರು ಮಕ್ಕಳಿದ್ದಾರೆ. ಪತ್ನಿ ಹಾಗೂ ಮಗ ಪ್ರವಾಸಕ್ಕೆ ತೆರಳಿದ್ದರು. ಈ ವೇಳೆ ಮನೆಯಲ್ಲಿ ಯಾರು ಇರಲಿಲ್ಲ. ಇದನ್ನು ಸಂದರ್ಭವಾಗಿಸಿಕೊಂಡ ದುಷ್ಕರ್ಮಿಗಳು ಮಹದೇವಸ್ವಾಮಿ ತಲೆಗೆ ಒನಕೆಯಿಂದ ಬಲವಾಗಿ ಹೊಡೆದು ಕೊಲೆ ಮಾಡಿದ್ದಾರೆ ಎನ್ನಲಾಗಿದೆ. ಸ್ಥಳಕ್ಕೆ ಶ್ವಾನದಳ, ಬೆರಳಚ್ಚು ತಜ್ಞರು ಭೇಟಿ ನೀಡಿದ್ದಾರೆ. ಡಿವೈಎಸ್ಪಿ ಸೋಮೇಗೌಡ, ವೃತ್ತ ನಿರೀಕ್ಷ ಶಿವರಾಜ್ ಮುಧೋಳ್ ಹಾಗೂ ಸಬ್‌ಇನ್ಸ್‌ಪೆಕ್ಟರ್ ಮಂಜುನಾಥ್ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ. ಮೃತ ದೇಹವನ್ನು ಚಾಮರಾಜನಗರ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ.

ಎಸ್ಪಿ ಹಾಗೂ ಎಎಸ್ಪಿಯವರು ಸಹ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಪತ್ನಿ ಹಾಗೂ ಪುತ್ರ ಪ್ರವಾಸದಲ್ಲಿರುವ ವೇಳೆ ಕೊಲೆಯಾಗಿರುವುದು ಸಂಶಯಕ್ಕೆಡೆ ಮಾಡಿಕೊಟ್ಟಿದ್ದು, ಈ ಸಂಬಂಧ ಪುತ್ರಿ ಸ್ನೇಹ ಪೊಲೀಸರಿಗೆ ದೂರು ನೀಡಿದ್ದು, ಪ್ರಕರಣ ದಾಖಲಾಗಿದೆ.

ನಾಲ್ಕು ಲಕ್ಷ ಮೌಲ್ಯದ ತೇಗದ ನಾಟಾ ವಶ

ಚಾಮರಾಜನಗರ, ಡಿ.22– ಅಕ್ರಮವಾಗಿ ಸಾಗಿಸುತ್ತಿದ್ದ ನಾಲ್ಕು ಲಕ್ಷ ರೂ. ಮೌಲ್ಯದ 47 ತೇಗದ ಮರದ ನಾಟಾಗಳನ್ನು ಅರಣ್ಯ ಇಲಾಖೆ ಅಧಿಕಾರಿಗಳು ವಶಪಡಿಸಿಕೊಂಡು ಇಬ್ಬರನ್ನು ಬಂಧಿಸಿರುವ ಘಟನೆ ತಾಲೂಕಿನ ಉಡಿಗಾಲ ಗ್ರಾಮದಲ್ಲಿ ನಡೆದಿದೆ.

ಮೈಸೂರಿನ ಬೆಳವಾಡಿಯ ಗವಿ(31), ಹೂಟಗಳ್ಳಿಯ ಬಸವರಾಜು(52) ಬಂಧಿತ ಆರೋಪಿಗಳು. ಇವರು ಈಚರ್ ವಾಹನದಲ್ಲಿ 47 ತುಂಡುಗಳ ತೇಗದ ಮರದ ನಾಟಾಗಳನ್ನು ಸಾಗಾಣೆ ಮಾಡುತ್ತಿದ್ದಾಗ ಖಚಿತ ಮಾಹಿತಿ ಮೇರೆಗೆ ಸಿಐಡಿ ಅರಣ್ಯ ಸಂಚಾರಿ ದಳದ ಎಡಿಜಿಪಿ ಶರಶ್ಚಂದ್ರ, ಎಸ್.ಪಿ. ವಿಶ್ವನಾಥ್ ಅವರ ಮಾರ್ಗದರ್ಶನದಲ್ಲಿ ದಾಳಿ ನಡೆಸಿದ ಅರಣ್ಯ ಇಲಾಖೆ ಅಧಿಕಾರಿಗಳು ತಾಲೂಕಿನ ಉಡಿಗಾಲ ಗ್ರಾಮದ ಚಾಮರಾಜನಗರ– ಗುಂಡ್ಲುಪೇಟೆ ಮುಖ್ಯ ರಸ್ತೆಯ ಗಣಪತಿ ದೇವಸ್ಥಾನದ ಬಳಿ ವಾಹನ ತಡೆದು ಮರದ ನಾಟಾಗಳನ್ನು ವಶಪಡಿಸಿಕೊಂಡಿದ್ದಾರೆ. ಕಾರ್ಯಾಚರಣೆಯಲ್ಲಿ ಸಿಐಡಿ ಅರಣ್ಯ ಸಂಚಾರಿ ದಳದ ಪಿಎಸ್‌ಐ ಗಿರೀಶ್, ಮುಖ್ಯ ಪೇದೆಗಳಾದ ಶಿವಪ್ರಸಾದ್, ಹೆಚ್.ಡಿ. ಸ್ವಾಮಿ, ವೀರಭದ್ರಪ್ಪ, ಮಾದೇಶ್ ಕುಮಾರ್, ನವೀನ, ಗೋವಿಂದ ನಾಯ್ಕ ಭಾಗವಹಿಸಿದ್ದರು.

ಚಾಮರಾಜನಗರದಲ್ಲಿ ಉದ್ಯೋಗ ಮೇಳದಲ್ಲಿ ನೂರಾರು ಮಂದಿ ಭಾಗಿ

107 ಮಂದಿಗೆ ಉದ್ಯೋಗ, 120 ಮಂದಿ ಮುಂದಿನ ಹಂತಕ್ಕೆ ಆಯ್ಕೆ



ಚಾಮರಾಜನಗರ, ಡಿ.22– ಕುಟುಂಬ ಭದ್ರತೆ, ಜೀವನ ನಿರ್ವಹಣೆಗೆ ಅತ್ಯಗತ್ಯವಾಗಿರುವುದರಿಂದ ಪ್ರತಿಯೊಬ್ಬರು ಉದ್ಯೋಗ ಮೇಳಗಳನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಕರೆ ನೀಡಿದರು.

ನಗರದ ಜೆ.ಎಚ್. ಪಟೇಲ್ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಇವರ ಸಹಯೋಗದಲ್ಲಿ ನಡೆದ ಜಿಲ್ಲಾ ಮಟ್ಟದ ಉದ್ಯೋಗ ಮೇಳ ಕಾರ್ಯಕ್ರಮ ಉದ್ಘಾಟಿಸಿ, ಅವರು ಮಾತನಾಡಿದರು. ಉದ್ಯೋಗ ಮೇಳದಲ್ಲಿ ನೂರಾರು ಮಂದಿ ಭಾಗವಹಿಸಿದ್ದರು. ಕೆಲವರಿಗೆ ಉದ್ಯೋಗ ದೊರೆತರೆ ಇನ್ನು ಕೆಲವರು ಮುಂದಿನ ಹಂತಕ್ಕೆ ಆಯ್ಕೆಯಾದರು.

ಇಡೀ ಕುಟುಂಬ ನಿರ್ವಹಣೆಗೆ ಉದ್ಯೋಗ ಅವಶ್ಯವಾಗಿದೆ. ಇಂದಿನ ಸ್ಪರ್ಧಾತ್ಮಕ ಸನ್ನಿವೇಶದಲ್ಲಿ ಜೀವನ ನಿರ್ವಹಣೆಗೆ ಸರ್ಕಾರಿ ಅಥವಾ ಖಾಸಗಿ ಕ್ಷೇತ್ರ ಯಾವುದಾದರೂ ಸರಿಯೇ ನಿರುದ್ಯೋಗಿಗಳು ಕೆಲಸ ನಿರ್ವಹಿಸಲು ಸಿದ್ದರಾಗಿರಬೇಕು. ವಿದ್ಯೆಯ ಜೊತೆಗೆ ತಮ್ಮಲ್ಲಿರುವ ಪ್ರತಿಭೆ, ನೈಪುಣ್ಯತೆ, ಕೌಶಲ್ಯವನ್ನು ಉದ್ಯೋಗದಾತ ಕಂಪನಿಗಳ ಸಮ್ಮುಖದಲ್ಲಿ ಪ್ರಸ್ತುತಪಡಿಸಬೇಕು. ಈ ನಿಟ್ಟಿನಲ್ಲಿ ನಿರುದ್ಯೋಗಿ ಯುವಕ, ಯುವತಿಯರು ಭೌತಿಕವಾಗಿ ಮಾತ್ರವಲ್ಲ ಮಾನಸಿಕವಾಗಿ ಸದೃಢರಾಗಿರಬೇಕು ಎಂದು ಜಿಲ್ಲಾಧಿಕಾರಿಯವರು ಕಿವಿಮಾತು ಹೇಳಿದರು.

ಜಿಲ್ಲೆಯಲ್ಲಿ ಕಳೆದ ಬಾರಿ ನಡೆದ ಉದ್ಯೋಗ ಮೇಳದಲ್ಲಿ ನೊಂದಾಯಿತರಾಗಿದ್ದವರ ಪೈಕಿ 95 ಯುವಜನರಿಗೆ ಕೆಲಸ ದೊರೆತಿದೆ. ಈ ಬಾರಿಯೂ ಸಹ ಸಾಕಷ್ಟು ನಿರುದ್ಯೋಗಿಗಳು ಉದ್ಯೋಗ ಅರಸಿ ಮೇಳಕ್ಕೆ ಹಾಜರಾಗಿದ್ದಾರೆ. ಸಂಬಂಧಪಟ್ಟ ಇಲಾಖೆಗಳು ಸಂದರ್ಶನಕ್ಕೂ ಮೊದಲು ಕಾರ್ಯಾಗಾರಗಳನ್ನು ಆಯೋಜಿಸಿ ತರಬೇತಿ ನೀಡಿ ನಿರುದ್ಯೋಗಿಗಳು ಹೆಚ್ಚಿನ ಕೌಶಲ್ಯತೆ ಹೊಂದುವಂತೆ ಪರಿಪೂರ್ಣಗೊಳಿಸುವ ಕಾರ್ಯ ಮಾಡಬೇಕಿದೆ ಎಂದರು.

ಜಿಲ್ಲಾ ಕೈಗಾರಿಕಾ ಕೇಂದ್ರದ ಉಪನಿರ್ದೇಶಕ ರಾಜೇಂದ್ರಪ್ರಸಾದ್ ಮಾತನಾಡಿ, ಈ ಹಿಂದೆ ಉದ್ಯೋಗಮೇಳಗಳಿಗೆ ಜಿಲ್ಲೆಯ ನಿರುದ್ಯೋಗಿಗಳನ್ನು ಮೈಸೂರು, ಬೆಂಗಳೂರು, ಇತರೆ ಸ್ಥಳಗಳಿಗೆ ಕಳುಹಿಸಲಾಗುತ್ತಿತ್ತು. ಪ್ರಸ್ತುತ ಜಿಲ್ಲೆಯಲ್ಲಿಯೇ ಉದ್ಯೋಗಮೇಳಗಳು ನಡೆಯುತ್ತಿವೆ. ಜಿಲ್ಲೆಯಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಹೆಚ್ಚು ಒತ್ತು ನೀಡಲಾಗುತ್ತಿದ್ದು, ಮುಂದಿನ ದಿನಗಳಲ್ಲಿ ಜಿಲ್ಲೆಯ ನಿರುದ್ಯೋಗಿಗಳಿಗೆ ಹೆಚ್ಚಿನ ಅನುಕೂಲವಾಗಲಿದೆ ಎಂದರು. ಹೆಚ್ಚುವರಿ ಜಿಲ್ಲಾಧಿಕಾರಿ ಎಸ್. ಕಾತ್ಯಾಯಿನಿದೇವಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಮಹಮ್ಮದ್ ಅಕ್ಬರ್, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಎಂ.ವಿ. ಸುಧಾ, ಜಿಲ್ಲಾ ಕಾರ್ಮಿಕ ಅಧಿಕಾರಿ ಎಂ. ಮಹದೇವಸ್ವಾಮಿ, ಕೈಮಗ್ಗ, ಜವಳಿ ಇಲಾಖೆಯ ಸಹಾಯಕ ನಿರ್ದೇಶಕರಾದ ಯೋಗೀಶ್, ಇತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ನಂಜನಗೂಡು, ಮೈಸೂರು ಹಾಗೂ ಬೆಂಗಳೂರಿನ ಖಾಸಗಿ ಕಂಪನಿಗಳಲ್ಲಿ ಮಾರುಕಟ್ಟೆ ಸೇವೆಗಳು, ಹಣಕಾಸು, ಇನ್ಸೂರೆನ್ಸ್, ಕೈಗಾರಿಕಾ, ಬ್ಯಾಂಕಿಂಗ್ ಮತ್ತು ಆಸ್ಪತ್ರೆ ಸೇವೆಗಳು ಹಾಗೂ ಇತರೆ ಎಲ್ಲಾ ರೀತಿಯ ಸೇವೆ ನೀಡುವ 32 ಕಂಪನಿಗಳು ಉದ್ಯೋಗ ಮೇಳದಲ್ಲಿ ಭಾಗವಹಿಸಿದ್ದವು. ಉದ್ಯೋಗ ಮೇಳದಲ್ಲಿ ನೊಂದಣಿಯಾದ ಒಟ್ಟು 556 ಯುವಕ, ಯುವತಿಯರ ಪೈಕಿ ಉದ್ಯೋಗಕ್ಕೆ ಆಯ್ಕೆ ಗೊಂಡ 107 ಮಂದಿಗೆ ಪ್ರಮಾಣ ಪತ್ರ ವಿತರಿಸಲಾಯಿತು. 120 ಮಂದಿಯನ್ನು ಮುಂದಿನ ಹಂತಕ್ಕೆ ಆಯ್ಕೆ ಮಾಡಲಾಯಿತು.

ಇಂದು ನಗರದಲ್ಲಿ ರಾಷ್ಟ್ರೀಯ ರೈತರ ದಿನಾಚರಣೆ: ಜಾಥಾ, ಕಾರ್ಯಗಾರ ಆಯೋಜನೆ

ಚಾಮರಾಜನಗರ, ಡಿ.22– ಕೃಷಿ ಇಲಾಖೆ ವತಿಯಿಂದ ಭಾರತದ ಐದನೇ ಪ್ರಧಾನಮಂತ್ರಿ ಚೌಧರಿ ಚರಣ್ ಸಿಂಗ್‌ರವರ ಜನ್ಮದಿನದ ಅಂಗವಾಗಿ ಡಿ.23ರಂದು ನಗರದಲ್ಲಿ ರಾಷ್ಟ್ರೀಯ ರೈತರ ದಿನಾಚರಣೆ ಕಾರ್ಯಕ್ರಮ ಆಯೋಜಿಸಲಾಗಿದೆ.

ಬೆಳಿಗ್ಗೆ 9.45 ಗಂಟೆಗೆ ಜಿಲ್ಲಾಡಳಿತ ಭವನದ ಮುಂಭಾಗ ಗ್ರಾಹಕರಿಗೆ ಅರಿವು ಮೂಡಿಸುವ ಸಲುವಾಗಿ ರೈತರ ಸಹಯೋಗದೊಂದಿಗೆ ಹಮ್ಮಿಕೊಂಡಿರುವ ಸಿರಿಧಾನ್ಯ ಜಾಥಾಗೆ ಚಾಲನೆ ದೊರೆಯಲಿದೆ. ಬೆಳಿಗ್ಗೆ 11 ಗಂಟೆಗೆ ನಗರದ ವಾಲ್ಮೀಕಿ ಭವನದಲ್ಲಿ ಕಾರ್ಯಕ್ರಮ ನಡೆಯಲಿದೆ. ಮೌಲ್ಯವರ್ಧನೆಯ ಮೂಲಕ ಕೃಷಿ ಅಭಿವೃದ್ಧಿಯನ್ನು ವೇಗಗೊಳಿಸುವುದು, ಸಿರಿಧಾನ್ಯ ಮತ್ತು ನೈಸರ್ಗಿಕ ಕೃಷಿ ಕುರಿತ ಕಾರ್ಯಗಾರವನ್ನು ಆಯೋಜಿಸಲಾಗಿದೆ.

ರೈತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಸದುಪಯೋಗ ಪಡೆದುಕೊಳ್ಳುವಂತೆ ಜಂಟಿ ಕೃಷಿ ನಿರ್ದೇಶಕರಾದ ಮಧುಸೂಧನ್ ಅವರು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಹೆಚ್ಚು ಹಸು, ಮೇಕೆ ಸಾಕಬೇಡಿ

ಗೋಪಿನಾಥಂ ಸುತ್ತಮುತ್ತ ಅರಣ್ಯ ಇಲಾಖೆಯಿಂದ ಸಾರ್ವಜನಿಕ ನೋಟಿಸ್

ಚಾಮರಾಜನಗರ, ಡಿ.22– ಹೈನುಗಾರಿಕೆಯಿಂದಲೇ ಜೀವನ ಕಟ್ಟಿಕೊಂಡು ಬದುಕು ಸುಂದರವಾಗಿಸಿಕೊಳ್ಳಿ ಎಂದು ಸರ್ಕಾರ ಪ್ರೋತ್ಸಾಹಿಸಿದರೇ, ಅರಣ್ಯ ಇಲಾಖೆ ಮಾತ್ರ ಹೆಚ್ಚು ಹಸು – ಮೇಕೆ ಸಾಕಬೇಡಿ ಎಂದು ಸಾರ್ವಜನಿಕ ನೋಟೀಸ್ ಅಂಟಿಸಿರುವ ಘಟನೆ ಹನೂರು ತಾಲೂಕಿನ ಗೋಪಿನಾಥಂ ಗ್ರಾಮದಲ್ಲಿ ನಡೆದಿದೆ.

ಕಾವೇರಿ ವನ್ಯಜೀವಿಧಾಮ ವ್ಯಾಪ್ತಿಯ ಗೋಪಿನಾಥಂ ಸೇರಿದಂತೆ ಸುತ್ತಮುತ್ತಲಿನ ಗ್ರಾಮಸ್ಥರಿಗೆ ಅರಣ್ಯ ಇಲಾಖೆ ಎಡವಟ್ಟಿನ ಸಲಹೆಯೊಂದನ್ನು ಕೊಟ್ಟಿದ್ದು, ಅಗತ್ಯವಿರುವಷ್ಟು ಮಾತ್ರ ಹಸು–ಮೇಕೆ ಸಾಕಿ. ಹೆಚ್ಚಿನವುಗಳನ್ನು ಬೇರೆಡೆಗೆ ಸಾಗಿಸಬೇಕು. ಜಾನುವಾರುಗಳನ್ನು ಕಾಡಿಗೆ ಬಿಡುವುದರಿಂದ ಅರಣ್ಯ ನಾಶವಾಗುತ್ತಿದೆ ಎಂದು ಹೇಳಿರುವುದಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾಗುತ್ತಿದೆ.

ಎರಡು ದಿನಗಳ ಕಾಲ ಟಿಆರ್ ತಂಡದವರು ಗೋಪಿನಾಥಂ ವಲಯಕ್ಕೆ ಭೇಟಿ ನೀಡಿದ್ದ ವೇಳೆ ಹೆಚ್ಚಿನ ದನಕರುಗಳು ಇದ್ದಿದ್ದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಸಾಗುವಳಿಗೆ ಬೇಕಾದಷ್ಟು ಹಸು–ಮೇಕೆ ಇಟ್ಟುಕೊಂಡು ಉಳಿದವುಗಳನ್ನು ಬೇರೆಡೆಗೆ ಸಾಗಿಸಬೇಕು. ಅರಣ್ಯದೊಳಕ್ಕೆ ದನ – ಮೇಕೆ ಬಿಟ್ಟರೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಲಾಗಿದೆ.

ಹಸು, ಮೇಕೆಯಿಂದ ಅರಣ್ಯ ನಾಶವಾಗುವುದಂತೆ!



ಖಂಡನೆ–ಆಕ್ರೋಶ: ಅರಣ್ಯ ಇಲಾಖೆ ಕೊಟ್ಟಿರುವ ನೋಟೀಸ್‌ಗೆ ರೈತ ಸಂಘದ ಮುಖಂಡ ಹೊನ್ನೂರು ಪ್ರಕಾಶ್ ಆಕ್ರೋಶ ಹೊರಹಾಕಿದ್ದಾರೆ. ಅರಣ್ಯ ಇಲಾಖೆಯವರು ಕೇವಲ ಮರಗಳನ್ನೇ ತಿಂದು ಬದುಕುತ್ತೇವೆ, ಅನ್ನ ಬೇಡ ಎಂದಲ್ಲಿ ಇನ್ನುಮುಂದೆ ನಾವು ಹಸು ಸಾಕುವುದಿಲ್ಲ. ಗೋರಕ್ಷಣೆ ಎಂದು ಸರ್ಕಾರ ಕಾಯ್ದೆ ಮಾಡಿದರೇ ಅರಣ್ಯ ಇಲಾಖೆ ಹಸುಗಳನ್ನೆ ಸಾಕಬೇಡಿ ಎನ್ನುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

ಕಾಡಂಚಿನ ಜನರು ಜಾನುವಾರುಗಳನ್ನು ಮೇಯಿಸಲು ಅವಕಾಶ ಇದೆ ಎಂದು ಸುಪ್ರೀಂ ಕೋರ್ಟ್ ಹೇಳಿದ್ದರೂ ಅರಣ್ಯ ಇಲಾಖೆ ಈ ನೋಟೀಸ್ ನೀಡಿದೆ. ಇನ್ನೊಂದು ವಾರದಲ್ಲಿ ನೋಟೀಸ್ ಅನ್ನು ಹಿಂಪಡೆಯದಿದ್ದರೆ ಉಗ್ರ ಹೋರಾಟ ಮಾಡುತ್ತೇವೆ ಎಂದು ಎಚ್ಚರಿಸಿದ್ದಾರೆ. ಈ ವಿವಾದಾತ್ಮಕ ನೋಟೀಸ್‌ನಿಂದ ಸ್ಥಳೀಯರು ಆಕ್ರೋಶ – ಆತಂಕ ಹೊರಹಾಕಿದ್ದು, ಅರಣ್ಯ ಇಲಾಖೆ ಹೊಸ ನೀತಿ ಸ್ಥಳೀಯರನ್ನು ಕೆರಳುವಂತೆ ಮಾಡಿದೆ.

ಚಾಮರಾಜೇಶ್ವರ ದೇವಸ್ಥಾನದ ಹುಂಡಿಯಲ್ಲಿ 7.61 ಲಕ್ಷ ರೂ. ಸಂಗ್ರಹ

ತನಗೆ ಹುಡುಗಿ ಕರುಣಿಸು ಎಂದು ಯುವಕನೋರ್ವ ಬರೆದ ಪತ್ರ ಪತ್ತೆ



ಚಾಮರಾಜನಗರ, ಡಿ.22– ಸರಿಸುಮಾರು ಒಂದೂವರೆ ವರ್ಷಗಳ ಬಳಿಕ ಚಾಮರಾಜನಗರದ ಚಾಮರಾಜೇಶ್ವರ ದೇವಾಲಯ ಹುಂಡಿ ಎಣಿಕೆ ಕಾರ್ಯ ಗುರುವಾರ ನಡೆದಿದ್ದು 7.61 ಲಕ್ಷ ರೂ. ಹಣ ಸಂಗ್ರಹವಾಗಿದೆ.

ಕುಂಭಾಭಿಷೇಕ, ರಥೋತ್ಸವವಾದ ಬಳಿಕ ದೇವಸ್ಥಾನಕ್ಕೆ ಹೆಚ್ಚು ಭಕ್ತರ ಬಂದ ಹಿನ್ನೆಲೆಯಲ್ಲಿ ಚಾಮರಾಜನಗರ ತಹಸಿಲ್ದಾರ್ ನೇತೃತ್ವದಲ್ಲಿ ಅರ್ಚಕರಾದ ರಾಮಕೃಷ್ಣ ಭಾರದ್ವಜ್, ದೇವಸ್ಥಾನದ ಇಓ ರಾಜಶೇಖರ ಬಂಡಿ, ದಫೇದಾರ್ ಮಹೇಶ್, ಜಿಲ್ಲಾ ಉಪ್ಪಾರ ಯುವಕರ ಸಂಘ ಅಧ್ಯಕ್ಷ ಜಯಕುಮಾರ್, ಬಂಗಾರಸ್ವಾಮಿ, ಬ್ಯಾಂಕ್‌ನ ಅಧಿಕಾರಿಗಳು ಎಣಿಕೆ ಕಾರ್ಯದಲ್ಲಿ ಪಾಲ್ಗೊಂಡಿದ್ದರು. ಹುಂಡಿ ಎಣಿಕೆ ವೇಳೆ ಪತ್ರವೊಂದು ದೊರೆತಿದ್ದು, ಯುವಕನೋರ್ವ ತನಗೆ ಹುಡುಗಿ ಕರುಣಿಸು ಪ್ರೀತಿಯ ದೇವರೇ ಎಂದು ಶಿವಲಿಂಗ ಚಿತ್ರವೊಂದು ಬರೆದಿರುವುದು ಕಂಡುಬಂದಿದೆ.

ಇಂದು ಸಂತೇಮರಹಳ್ಳಿ ಭಾಗದ ವಿವಿಧೆಡೆ ವಿದ್ಯುತ್ ವ್ಯತ್ಯಯ

ಚಾಮರಾಜನಗರ, ಡಿ.22– ಕರ್ನಾಟಕ ವಿದ್ಯುತ್ ಪ್ರಸರಣಾ ನಿಗಮವು ಸಂತೇಮರಹಳ್ಳಿ ಉಪವಿಭಾಗ ವ್ಯಾಪ್ತಿಗೆ ಬರುವ ಸಂತೇಮರಹಳ್ಳಿ ಉಪಕೇಂದ್ರದಲ್ಲಿ ತುರ್ತು ಕಾಮಗಾರಿಯನ್ನು ಡಿ.23ರಂದು ಹಮ್ಮಿಕೊಂಡಿರುವುದರಿಂದ ಯಡಿಯೂರು, ಸಂತೇಮರಹಳ್ಳಿ, ಸಂತೇಮರಹಳ್ಳಿ ಮೋಳೆ, ಹೊಸಮೋಳೆ, ಕೆಂಪನಪುರ, ಚುಂಗಡಿಪುರ, ಮಹಂತಾಳಪುರ, ಹುಲ್ಲೇಪುರ, ನಡಕಲಮೋಳೆ, ಬಸವಟ್ಟಿ, ತೆಳ್ಳನೂರು, ಕಾವುದವಾಡಿ, ಕಮರವಾಡಿ, ದೇಮಹಳ್ಳಿ, ಬಾಣಹಳ್ಳಿ, ಹೆಬ್ಬಳ್ಳಿ, ಕೊನ್ನುಂಡಿ, ಅಂಕನಶೆಟ್ಟಿ ಮೋಳೆ, ಹೆಗ್ಗವಾಡಿ, ಮೂಡಲಅಗ್ರಹಾರ, ವಿವೇಕಾನಂದ ಕಾಲೋನಿ, ಹೆಗ್ಗವಾಡಿಪುರ, ದೇಶವಳ್ಳಿ, ಕುದೇರು, ದೇಮಹಳ್ಳಿಮೋಳೆ, ಯಲಕ್ಕೂರು, ತೆಂಕಲ ಮೋಳೆ, ಬಡಗಲಮೋಳೆ, ಕರಡಿಮೋಳೆ ಗ್ರಾಮಗಳ ವ್ಯಾಪ್ತಿಯಲ್ಲಿ ಅಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಮೈಸೂರು ಮಿತ್ರ

ಶುಕ್ರವಾರ 23 ಡಿಸೆಂಬರ್ 2022

ಮೂರನೇ ಪುಟದಿಂದ

ಆಸೆ ತೋರಿಸಿ ವಂಚಿಸುವವರಿದ್ದಾರೆ

ಲೈಂಗಿಕ ದೌರ್ಜನ್ಯ ಎಸಗುವವರ ಬಗ್ಗೆ ಕಟ್ಟೆಚ್ಚರದಿಂದ ಇರಲು ಹೇಳಿಕೊಡುವ ಅನಿವಾರ್ಯತೆ ಇದೆ ಎಂದು ಅಭಿಪ್ರಾಯಪಟ್ಟರು. ಹದಿಹರೆಯದ ವಯಸ್ಸಿನಲ್ಲಿ ಹೆಣ್ಣು ಮಕ್ಕಳನ್ನು ಮಿಸ್‌ಗೈಡ್ ಮಾಡಲೆಂದೇ ಕೆಲವರು ಹೊಂಚು ಹಾಕಿರುತ್ತಾರೆ. ಪ್ರೀತಿ ಮಾಡುವುದಾಗಿ, ಫ್ರೆಂಡ್‌ಶಿಪ್‌ಗಾಗಿ ಹಾಗೂ ಉದ್ಯೋಗ ಕೊಡಿಸುವುದಾಗಿ ಸೇರಿದಂತೆ ವಿವಿಧ ಕಥೆ ಹೇಳಿ ಪುಸಲಾಯಿಸಿ, ದೌರ್ಜನ್ಯ ಎಸಗುವ ದುಷ್ಟ ಮನಸ್ಥಿತಿಗಳು ಸಮಾಜದಲ್ಲಿರುತ್ತವೆ ಎಂದು ಎಚ್ಚರಿಕೆ ನೀಡಿದರು.

ನಾನು ಪೊಲೀಸ್ ಇಲಾಖೆಗೆ ಸೇರಿದ ಹೊಸದರಲ್ಲಿ ಚಿಂತಾಮಣಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ 14 ವರ್ಷದ ಬಾಲಕಿಯೊಬ್ಬಳನ್ನು ಅಪಹರಣ ಮಾಡಿರುವ ಬಗ್ಗೆ ದೂರು ದಾಖಲಾಗಿತ್ತು. ಆ ಪ್ರಕರಣವನ್ನು ಬೆನ್ನತ್ತಿ ಹೋದಾಗ ಆ ಬಾಲಕಿಯನ್ನು ಪುಸಲಾಯಿಸಿ, ಮಿಸ್ ಗೈಡ್ ಮಾಡಿ ಕರೆದೊಯ್ದು ದೆಹಲಿಯಲ್ಲಿರಿಸಲಾಗಿತ್ತು ನಾನು ಸಿಬ್ಬಂದಿಗಳೊಂದಿಗೆ ದೆಹಲಿಗೆ ತೆರಳಿ ಬಾಲಕಿ ಇದ್ದ ಸ್ಥಳ ಗುರುತಿಸಿ ದಾಳಿ ಮಾಡಿದಾಗ ಆ ಸ್ಥಳದಲ್ಲಿ ಚಿಂತಾಮಣಿಯ ಬಾಲಕಿ ಸೇರಿದಂತೆ ಕರ್ನಾಟಕದ ಇನ್ನಿತರೆ ಐವರು ಅಪ್ರಾಪ್ತ ಬಾಲಕಿಯರು ಸೇರಿದಂತೆ 8–10 ಬಾಲಕಿಯರನ್ನು ಕೂಡಿ ಹಾಕಿದ್ದು ಬೆಳಕಿಗೆ ಬಂದಿತ್ತು. ರಕ್ಷಿಸಲ್ಪಟ್ಟ ಬಾಲಕಿಯರನ್ನು ವಿಚಾರಿಸಿದಾಗ ಕೆಲವರನ್ನು ಪ್ರಿಯಕರ ಮನೆಯಿಂದ ಕರೆತಂದು ಮಾರಾಟ ಮಾಡಿದ್ದು ಬೆಳಕಿಗೆ ಬಂತು. ಇನ್ನುಳಿದವರು ಬಡ ಕುಟುಂಬದ ಮಕ್ಕಳಾಗಿದ್ದು ತಿಂಗಳಿಗೆ 40 ಸಾವಿರ ಸಂಬಳ ಕೊಡುವ ಕೆಲಸ ಕೊಡಿಸುವುದಾಗಿ ಕರೆತಂದು ಮಾರಾಟ ಮಾಡಿದ್ದು ತಿಳಿಯಿತು. ಹಾಗಾಗಿ ಹೆಣ್ಣು ಮಕ್ಕಳು ವಿವಿಧ ಕಥೆ ಹೇಳಿ ಪುಸಲಾಯಿಸುವವರ ಬಗ್ಗೆ ಎಚ್ಚರಿಕೆಯಿಂದ ಇರುವುದು ಒಳಿತು ಎಂದರು. ಮಹಿಳೆಯರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿರುವುದು ಆತಂಕಕಾರಿ ಬೆಳವಣಿಗೆ. ಕೆಲಸ ಮಾಡುವ ಸ್ಥಳದಲ್ಲೇ ಶೋಷಣೆ ನಡೆಯುತ್ತಿದೆ. ಆದರೆ ಕಳೆದ 20 ವರ್ಷದ ನಂತರ ಮಹಿಳೆಯರ ಸ್ಥಿತಿಗತಿ ಬದಲಾಗಿದೆ. ಹೆಣ್ಣು ಮಕ್ಕಳು ಶಿಕ್ಷಣ ಪಡೆದುಕೊಳ್ಳುತ್ತಿರುವುದರಿಂದ ಮಹಿಳೆಯರ ಸ್ಥಿತಿ ಬದಲಾಗಿದೆ. ನಗರ ಪ್ರದೇಶದಲ್ಲಿ ಸುಧಾರಣೆ ಕಂಡಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಇನ್ನು ಮಹಿಳೆಯರ ಸ್ಥಿತಿಗತಿಯಲ್ಲಿ ಸುಧಾರಣೆ ಆಗಬೇಕು. ನಾಗರಿಕ ಬೆಳವಣಿಗೆಯಾದಂತೆ ಮಹಿಳೆಯರ ಮೇಲೆ ದೌರ್ಜನ್ಯ ನಡೆಯುತ್ತಿರುವುದು ತಲೆ ತಗ್ಗಿಸುವ ಸಂಗತಿ. ಆದರೆ ಹೆಣ್ಣುಮಕ್ಕಳು ಚೆನ್ನಾಗಿ ಓದಬೇಕು. ಉನ್ನತ ಶಿಕ್ಷಣ ಪಡೆದುಕೊಳ್ಳಬೇಕು. ಆರ್ಥಿಕವಾಗಿ ಸ್ವತಂತ್ರವಾಗಿ ಜೀವನ ಸಾಗಿಸಿದರೆ ದೌರ್ಜನ್ಯ ಕಡಿಮೆಯಾಗುತ್ತದೆ. ಬೇರೆಯವರು ಗೌರವ ಕೊಡುತ್ತಾರೆ. ಅಪರಾಧ ತಡೆ ಮಾಸಾಚರಣೆಯಲ್ಲಿ ವಿವಿಧ ಅಪರಾಧಗಳ ಬಗ್ಗೆ ಅರಿವು ಮೂಡಿಸಲಾಗುತ್ತದೆ. ನಾನಾ ಅಪರಾಧದ ಬಗ್ಗೆ ವಿಡಿಯೋ ಮಾಡಿ ಪ್ರಸಾರ ಮಾಡುವ ಮೂಲಕ ಎಚ್ಚರದಿಂದ ಇರುವಂತೆ ಮನವರಿಕೆ ಮಾಡಿಕೊಡಲಾಗುತ್ತದೆ. ಹೊಸ ರೀತಿ ಅಪರಾಧ, ಸೈಬರ್ ಅಪರಾಧ, ಹಣ ವಂಚನೆ, ಲೈಂಗಿಕ ದೌರ್ಜನ್ಯದ ಬಗ್ಗೆ ವಿಶೇಷ ಕಾರ್ಯಕ್ರಮ ನಡೆಸುವ ಮೂಲಕ ಅಪರಾಧ ತಡೆಗೆ ಸಾರ್ವಜನಿಕರ ಸಹಕಾರ ಕೋರಲಾಗುತ್ತಿದೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ವಿಷಯ ಕುರಿತಂತೆ ಸಂಪನ್ಮೂಲ ವ್ಯಕ್ತಿಗಳಾದ [illegible] ಉಪನ್ಯಾಸ ಮಾಡಿದರು. ಈ ಸಂದರ್ಭದಲ್ಲಿ ಡಿಸಿಪಿಗಳಾದ ಎಂ.ಮುತ್ತುರಾಜ್, ಗೀತ ಪ್ರಸನ್ನ, ದೇವರಾಜ ಉಪ ವಿಭಾಗದ ಎಸಿಪಿ ಎಂ.ಎನ್.ಶಶಿಧರ್ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.

ಬೂಸ್ಟರ್ ಡೋಸ್ ರಾಮಬಾಣ

ಹೋಟೇಲ್, ಮಾಲ್, ಥಿಯೇಟರ್ ಸೇರಿದಂತೆ ಒಳಾಂಗಣ ಪ್ರದೇಶದಲ್ಲಿ ಮಾಸ್ಕ್ ಧರಿಸುವುದು ಕಡ್ಡಾಯ ಎಂದರು. ಆರೋಗ್ಯ ದೃಷ್ಟಿಯಿಂದ ಜನತೆ ಮುಂಜಾಗ್ರತಾ ಕ್ರಮ ಕೈಗೊಂಡು ಸರ್ಕಾರದ ಜೊತೆ ಕೈಜೋಡಿಸಬೇಕೆಂದು ಮನವಿ ಮಾಡಿಕೊಂಡರು. 3ನೇ ಡೋಸ್ ಪಡೆಯಲು ಜನತೆ ನಿರಾಸಕ್ತಿ ತೋರುತ್ತಿದ್ದಾರೆ. ಇದುವರೆಗೂ ಶೇಕಡ 20 ರಿಂದ 25ರಷ್ಟು ಮಂದಿ ಮಾತ್ರ ಈ ಲಸಿಕೆ ಪಡೆದುಕೊಂಡಿದ್ದಾರೆ. ಜೀವ ರಕ್ಷಣೆಗಾಗಿ ಬೂಸ್ಟರ್ ಡೋಸ್ ಪಡೆಯದವರು ತಕ್ಷಣ ಪಡೆದುಕೊಳ್ಳಬೇಕು. ಇದರಿಂದ ಬಿಎಫ್–7 ಉಪತಳಿಯ ವೈರಾಣುವನ್ನು ತಡೆಯಲು ಸಾಧ್ಯ ಎಂದರು. ಬರುವ ಸೋಮವಾರದಿಂದ ರಾಜ್ಯಾದ್ಯಂತ ಬೂಸ್ಟರ್ ಡೋಸ್ ನೀಡಲು ಸಾರ್ವಜನಿಕ ಕೇಂದ್ರಗಳನ್ನು ತೆರೆಯಲಾಗುವುದು. ಇಂತಹ ಕೇಂದ್ರಗಳಲ್ಲಿ ಜನತೆ ಲಸಿಕೆ ಪಡೆದು ಕೊಳ್ಳುವಂತೆ ಮನವಿ ಮಾಡಿದರು. ಬೂಸ್ಟರ್ ಡೋಸ್ ಪಡೆಯುವುದರಿಂದ ಯಾವುದೇ ರೀತಿಯ ಅಡ್ಡ ಪರಿಣಾಮವಿಲ್ಲ ಎಂದು ಸ್ಪಷ್ಟಪಡಿಸಿದ ಅವರು, ಒಂದು ಮತ್ತು ಎರಡನೇ ಡೋಸ್ ಲಸಿಕೆ ಪಡೆದವರು 3ನೇ ಡೋಸ್ ಪಡೆಯಲು ಆತಂಕ ಏತಕ್ಕೆ ಮೊದಲು ಆಗದ ಅಡ್ಡ ಪರಿಣಾಮ ಈಗ ಹೇಗೆ ಆಗುತ್ತೆ ಎಂದು ಪ್ರಶ್ನಿಸಿದರು. ಗಾಳಿ ಸುದ್ದಿಗೆ ಕಿವಿಗೊಡದೇ ಜೀವ ರಕ್ಷಣೆಗೆ ಬೂಸ್ಟರ್ ಡೋಸ್ ಕಡ್ಡಾಯವಾಗಿ ಪಡೆದುಕೊಳ್ಳಬೇಕು. ಮುನ್ನೆಚ್ಚರಿಕೆಯಾಗಿ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಕೋವಿಡ್–19 ಸೋಂಕಿತರಿಗೆ ಪ್ರತ್ಯೇಕ ಹಾಸಿಗೆಗಳನ್ನು ನಿಗದಿಪಡಿಸಲಾಗುವುದು. ಅಷ್ಟೇ ಅಲ್ಲ ಆಮ್ಲಜನಕ ಘಟಕ ಮತ್ತು ಔಷಧಿಗಳನ್ನು ಮುಂಜಾಗ್ರತೆಯಾಗಿ ಮಾಡಲಾಗುವುದು ಎಂದು ಸಚಿವರು ತಿಳಿಸಿದರು. ಕೋವಿಡ್ ಕಡಿಮೆಯಾಗಿದೆ ಎಂದು ನಿರಾಳವಾಗಿದ್ದೆವು. ಆದರೆ ಈಗ ವಿದೇಶಗಳಲ್ಲಿ ಸೋಂಕು ಹೆಚ್ಚಳವಾಗಿದೆ. ಇದನ್ನು ಗಮನದಲ್ಲಿಟ್ಟುಕೊಂಡು ವಿಚಾರವನ್ನು ಗಂಭೀರವಾಗಿ ತೆಗೆದುಕೊಂಡಿದ್ದೇವೆ ಎಂದರು.

ಐದು ಸಾಕಾನೆ ಶಿಫ್ಟ್

ಮಾನವ–ವನ್ಯಜೀವಿ ಸಂಘರ್ಷವನ್ನು ಹತೋಟಿಗೆ ತರಲು ಪಳಗಿದ ಆನೆಗಳು ಅಗತ್ಯವಿದ್ದುದರಿಂದ ಆ ರಾಜ್ಯ ಸರ್ಕಾರವು ಪಳಗಿದ ಆನೆಗಳನ್ನು ನೀಡುವಂತೆ ಕರ್ನಾಟಕಕ್ಕೆ ಮನವಿ ಸಲ್ಲಿಸಿತ್ತು. ಅಲ್ಲದೇ ಕರ್ನಾಟಕದಲ್ಲಿ ಸಾಕಾನೆಗಳ ಸಂಖ್ಯೆ ಹೆಚ್ಚಾಗಿದ್ದು, ಇತ್ತೀಚಿನ ಸುಪ್ರೀಂಕೋರ್ಟ್ ಆದೇಶದಂತೆ ಶಿಬಿರವೊಂದರಲ್ಲಿ 15ಕ್ಕಿಂತ ಹೆಚ್ಚು ಆನೆಗಳನ್ನು ಇರಿಸುವಂತಿಲ್ಲ. ಹೀಗಾಗಿ ಕರ್ನಾಟಕ ಸರ್ಕಾರವು ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಆನೆಗಳು ಮತ್ತು ಹುಲಿ ಹಾಗೂ ಕಾಡಾನೆ ಸೆರೆಗೆ ಬಳಸುವ ಆನೆಗಳನ್ನು ಹೊರತುಪಡಿಸಿ, ಉಳಿದ ಸಾಕಾನೆಗಳನ್ನು ಮಧ್ಯಪ್ರದೇಶಕ್ಕೆ ರವಾನಿಸಲು ಒಪ್ಪಿದ ನಂತರ ಎರಡೂ ರಾಜ್ಯಗಳ ವೈಲ್ಡ್ ಲೈಫ್ ಪಿಸಿಸಿಎಫ್‌ಗಳು ಕರ್ನಾಟಕದ ಕೊಡಗು, ಬಂಡೀಪುರ ಮತ್ತು ಶಿವಮೊಗ್ಗದ ಸಕ್ಕರೆ ಬಯಲು ಶಿಬಿರಗಳಿಗೆ ಭೇಟಿ ನೀಡಿ, 14 ಆನೆಗಳನ್ನು ಆಯ್ಕೆ ಮಾಡಿದ್ದರು. ಅಧಿಕೃತ ಪತ್ರ ವ್ಯವಹಾರಗಳ ನಂತರ ಕರ್ನಾಟಕದಿಂದ ಮಧ್ಯಪ್ರದೇಶಕ್ಕೆ ಸಾಕಾನೆಗಳ ಸ್ಥಳಾಂತರ ಪ್ರಕ್ರಿಯೆ ಹಂತ ಹಂತವಾಗಿ ನಡೆಯಲಾರಂಭಿಸಿತು.

ಬಂಡೀಪುರದ ಐನೂರು ಮಾರಿಗುಡಿ ವಲಯದಲ್ಲಿರುವ ರಾಮಾಪುರ ಸಾಕಾನೆ ಶಿಬಿರದಿಂದ ಸ್ಥಳಾಂತರಿಸಲು ಗಣೇಶ, ಕೃಷ್ಣ, ಗಜ, ಮಹರ್ಷಿ ಮತ್ತು ಪೂಜಾ ಆನೆಗಳು ಆಯ್ಕೆಯಾಗಿದ್ದವು. ಆದರೆ ಕಳೆದ ಸೆ.22ರಂದು ಗಣೇಶ ಅನಾರೋಗ್ಯದಿಂದ ಮೃತಪಟ್ಟ ಹಿನ್ನೆಲೆಯಲ್ಲಿ ಉಳಿದ 4 ಆನೆಗಳನ್ನು ಕಳೆದ ನವೆಂಬರ್ ತಿಂಗಳಿನಲ್ಲಿ ಮಧ್ಯಪ್ರದೇಶಕ್ಕೆ ಕಳುಹಿಸಲಾಗಿದ್ದು, ಈ ಎಲ್ಲಾ ಆನೆಗಳು ನವೆಂಬರ್ 29ರಂದು ಸುರಕ್ಷಿತವಾಗಿ ಮಧ್ಯ ಪ್ರದೇಶ ತಲುಪಿ, ಆರೋಗ್ಯದಿಂದಿರುವುದನ್ನು ಅಧಿಕಾರಿಗಳು ಖಚಿತಪಡಿಸಿಕೊಂಡಿದ್ದರು.

ನಂತರ ಕೊಡಗಿನ ಮತ್ತಿಗೋಡು ಸಾಕಾನೆ ಶಿಬಿರದಿಂದ ಎರಡು ಆನೆಗಳನ್ನು ಕಳುಹಿಸಲಾಗಿತ್ತು. ಇಂದು ಐದು ಆನೆಗಳನ್ನು ಮಧ್ಯಪ್ರದೇಶಕ್ಕೆ ಕಳುಹಿಸಲಾಗಿದೆ. ಮಧ್ಯಪ್ರದೇಶಕ್ಕೆ ಸ್ಥಳಾಂತರಿಸಿದ 14 ಆನೆಗಳ ಪೈಕಿ 12 ಗಂಡು ಮತ್ತು 2 ಹೆಣ್ಣಾನೆಗಳಿವೆ.

ಮಂಗಳೂರಿಂದ ಬೆಂಗಳೂರಿಗೆ ಪಾದಯಾತ್ರೆ

ಕಿ.ಮೀ.ವರೆಗೆ ಮಾರ್ಗದುದ್ದಕ್ಕೂ ಸಮುದಾಯದವರು ಭಾಗವಹಿಸಲಿದ್ದಾರೆ. ಮಂಗಳೂರಿನ ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಿಂದ ಪಾದಯಾತ್ರೆ ಪ್ರಾರಂಭಗೊಳ್ಳಲಿದೆ. ಪಾದಯಾತ್ರೆ ಉದ್ಘಾಟನೆಯಲ್ಲಿ 25 ಮಂದಿ ಹಿಂದುಳಿದ ವರ್ಗದ ಮಠಾಧಿಪತಿಗಳು ಭಾಗವಹಿಸಲಿದ್ದಾರೆ ಎಂದರು. ಫೆ.14ರಂದು ಪಾದಯಾತ್ರೆಯು ಬೆಂಗಳೂರಿನ ಫ್ರೀಡಂ ಪಾರ್ಕ್ ತಲುಪಲಿದೆ. ಅದಾಗ್ಯೂ ಬೇಡಿಕೆಗಳು ಈಡೇರದಿದ್ದರೆ ಬಳಿಕ ಅಲ್ಲಿ ಅಮರಣಾಂತ ಉಪವಾಸ ಸತ್ಯಾಗ್ರಹ ನಡೆಸಲಾಗುವುದು. ಈ ಹಿಂದೆ ಶೇ.80ರಷ್ಟು ಮದ್ಯ ವಹಿವಾಟಿನಲ್ಲಿ ತೊಡಗಿಕೊಂಡಿದ್ದ ನಮ್ಮ ಸಮುದಾಯ ಇಂದು ಕೇವಲ ಶೇ.30ರಷ್ಟಕ್ಕೆ ಇಳಿಕೆಯಾಗಿದೆ. ಇಡೀ ರಾಜ್ಯದಲ್ಲಿ ನಮ್ಮ ಸಮುದಾಯ 70 ಲಕ್ಷ ಜನಸಂಖ್ಯೆ ಹೊಂದಿದ್ದು, ಮೈಸೂರು ಜಿಲ್ಲೆಯಲ್ಲಿ 40 ಸಾವಿರ ಜನಸಂಖ್ಯೆ ಇದೆ ಎಂದರು.

ಬ್ರಹ್ಮಶ್ರೀ ನಾರಾಯಣ ಗುರುಗಳ ಹೆಸರಿನಲ್ಲಿ ಸಮುದಾಯದ ಅಭಿವೃದ್ಧಿ ನಿಗಮ ಸ್ಥಾಪಿಸಿ, 500 ಕೋಟಿ ರೂ. ಮೀಸಲಿಡಬೇಕು. ರಾಜ್ಯದಲ್ಲಿ ಮಂಗಳೂರು, ಉಡುಪಿ ಹೊರತುಪಡಿಸಿ, ಬೇರೆಲ್ಲಿಯೂ ಸೇಂದಿ ಇಳಿಸಲು ಅನುಮತಿ ಇಲ್ಲ. ಆದರೆ ದಕ್ಷಿಣ ಭಾರತದ 6 ರಾಜ್ಯದಲ್ಲಿ ಎಲ್ಲಿಯೂ ಸೇಂದಿ ಇಳಿಸಲು ನಿಷೇಧವಿಲ್ಲ. ಸೇಂದಿ ಅಮಲು ಪದಾರ್ಥವಲ್ಲ. ಇದೊಂದು ಸ್ವದೇಶಿ ಉತ್ಪನ್ನ. ಹಾಗಾಗಿ ರಾಜ್ಯಾದ್ಯಂತ ಸಮುದಾಯದ ಕುಲಕಸುಬು ಆದ ಸೇಂದಿ ಇಳಿಸಿ ಮಾರಾಟ ಮಾಡಲು ಅನುಮತಿ ನೀಡಬೇಕು ಎಂದು ಒತ್ತಾಯಿಸಿದರು. ಮಂಗಳೂರು, ಉಡುಪಿ, ಶಿವಮೊಗ್ಗ, ಕಾರವಾರ ಜಿಲ್ಲೆಗಳಲ್ಲಿ ಸಮಾಜಕ್ಕೆ ಹೆಚ್ಚಿನ ರಾಜಕೀಯ ಪ್ರಾತಿನಿಧ್ಯ ನೀಡಬೇಕು. ರಾಜ್ಯ ರಾಜಧಾನಿಯಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ ಪ್ರತಿಮೆ ಸ್ಥಾಪಿಸಬೇಕು. ಸಮುದಾಯದ ಮುಖಂಡರಾದ ರಾಣಿಪ್ರಭಾ, ಕೆ.ಎಸ್.ಮುರಳಿ, ಮುರಳೀಧರನ್, ಟಿ.ನಾರಾಯಣ್, ತಮ್ಮಣ್ಣಗೌಡ ಗೋಷ್ಠಿಯಲ್ಲಿದ್ದರು.

ವಿಧಾನಸಭೆಯಲ್ಲಿ ಸರ್ವಾನುಮತದ ಅಂಗೀಕಾರ

ಸರ್ಕಾರ ತನ್ನ ಬದ್ಧತೆಯನ್ನು ಪ್ರದರ್ಶಿಸಿದೆ. ಇತ್ತೀಚೆಗೆ ಈ ವಿಷಯದ ಬಗ್ಗೆ ಮಹಾರಾಷ್ಟ್ರದ ನಾಯಕರು ಕೊಡುತ್ತಿರುವ ಎಲ್ಲ ಹೇಳಿಕೆಗಳು ಅತ್ಯಂತ ಖಂಡನೀಯ ಎಂದರು.

ಕರ್ನಾಟಕದ ನೆಲ, ಜಲ, ಭಾಷೆ ಹಾಗೂ ಕನ್ನಡಿಗರ ಹಿತಾಸಕ್ತಿಯ ವಿಷಯದಲ್ಲಿ ಯಾವುದೇ ರಾಜೀ ಮಾಡಿಕೊಳ್ಳುವ ಪ್ರಶ್ನೆಯೇ ಇಲ್ಲ. ಈ ವಿಷಯದಲ್ಲಿ ಕರ್ನಾಟಕದ ಜನರ ಮತ್ತು ಸದಸ್ಯರೆಲ್ಲರ ಭಾವನೆಯು ಒಂದೇ ಆಗಿದ್ದು, ಇದಕ್ಕೆ ಧಕ್ಕೆಯಾದಾಗ ಎಲ್ಲರೂ ಒಗ್ಗಟ್ಟಿನಿಂದ ರಾಜ್ಯದ ಹಿತಾಸಕ್ತಿ ಹಾಗೂ ರಕ್ಷಣೆಗೆ ಸಂವಿಧಾನಾತ್ಮಕ ಹಾಗೂ ಕಾನೂನಾತ್ಮಕ ಕ್ರಮ ಕೈಗೊಳ್ಳಲು ಬದ್ಧರಿದ್ದೇವೆ. ಮಹಾರಾಷ್ಟ್ರದ ಜನತೆ ಅನಾವಶ್ಯಕವಾಗಿ ಸೃಷ್ಟಿಸಿರುವ ಗಡಿ ವಿವಾದವನ್ನು ಖಂಡಿಸಿ, ರಾಜ್ಯದ ಹಿತರಕ್ಷಣೆಗೆ ಕಟಿಬದ್ಧರಾಗಿರುವುದಾಗಿ ನಿರ್ಣಯ ಕೈಗೊಳ್ಳಲಾಗಿದೆ. ಖಂಡನಾ ನಿರ್ಣಯವನ್ನು ಸಭಾಧ್ಯಕ್ಷರು ಮತಕ್ಕೆ ಹಾಕಿದರು. ನಂತರ ಸದನ ಸರ್ವಾನುಮತದಿಂದ ಅದನ್ನು ಅಂಗೀಕರಿಸಿತು.

ಮೈಸೂರು ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಬಜೆಟ್‌ನಲ್ಲಿ ಸಾವಿರ ಕೋಟಿ ರೂ. ಅನುದಾನಕ್ಕೆ ಮುಖ್ಯಮಂತ್ರಿಗೆ ಮನವಿ

● ಎರಡ್ಮೂರು ದಿನದಲ್ಲಿ ಬೆಳಗಾವಿಗೆ ನಿಯೋಗ ತೆರಳಿ ಮನವಿ ಸಲ್ಲಿಸಲು ಮೇಯರ್ ಶಿವಕುಮಾರ್ ನಿರ್ಧಾರ ● ಮೈಸೂರಲ್ಲಿ 213ರಲ್ಲಿ 133 ಕಟ್ಟಡಗಳ ತುರ್ತು ದುರಸ್ತಿ ಅಗತ್ಯವಿದೆ





ಮೈಸೂರು,ಡಿ.22(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಿನ ಮುಕುಟದಂತಿರುವ ಪಾರಂಪರಿಕ ಕಟ್ಟಡಗಳ ಸಂರಕ್ಷಣೆಗೆ ಬಜೆಟ್‌ನಲ್ಲಿ ಒಂದು ಸಾವಿರ ಕೋಟಿ ರೂ. ಅನುದಾನ ನೀಡುವಂತೆ ಇನ್ನೆರಡು ದಿನದಲ್ಲಿ ನಿಯೋಗದೊಂದಿಗೆ ಬೆಳಗಾವಿಗೆ ತೆರಳಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸುವುದಾಗಿ ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.

ಮೈಸೂರಲ್ಲಿ ಗುರುವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಮೈಸೂರಲ್ಲಿ 213 ಪಾರಂಪರಿಕ ಕಟ್ಟಡಗಳಿದ್ದು, ಅವುಗಳನ್ನು ಸಂರಕ್ಷಣೆ ಮಾಡಬೇಕಾದ ಅನಿವಾರ್ಯತೆ ಇದೆ. ನಗರದಲ್ಲಿರುವ ಪಾರಂಪರಿಕ ಕಟ್ಟಡಗಳಲ್ಲಿ ಬಹುತೇಕ ಕಟ್ಟಡಗಳು ದುಸ್ಥಿತಿಗೆ ತಲುಪಿವೆ. ಅದರಲ್ಲೂ 133 ಕಟ್ಟಡಗಳನ್ನು ತುರ್ತು ದುರಸ್ತಿ ಮಾಡಲೇಬೇಕಾದ ದುಸ್ಥಿತಿಗೆ ತಲುಪಿವೆ. ಅದಕ್ಕಾಗಿ ತ್ವರಿತಕ್ರಮ ಕೈಗೊಳ್ಳಬೇಕಾಗಿದೆ ಎಂದರು.

ದುಸ್ಥಿತಿಯಲ್ಲಿರುವ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಸಂಬಂಧ ಈಗಾಗಲೇ ಇತಿಹಾಸ ತಜ್ಞರು, ಪಾರಂಪರಿಕ ಇಲಾಖೆ ಅಧಿಕಾರಿಗಳು, ಸಾರ್ವಜನಿಕರ ಸಭೆ ನಡೆಸಿದ್ದೇನೆ. ಕಟ್ಟಡಗಳ ಸಂರಕ್ಷಣೆಗೆ ಸಂಬಂಧಿಸಿದಂತೆ ಪೂರ್ಣ ವರದಿ ಸಿದ್ಧಪಡಿಸಲಾಗಿದೆ. ಮೈಸೂರಿಗೆ ಪಾರಂಪರಿಕ ನಗರ ಎಂಬ ಕೀರ್ತಿ ಬರಲು ಪಾರಂಪರಿಕ ಕಟ್ಟಡಗಳೇ ಕಾರಣ. ಹಾಗಾಗಿ ಅವುಗಳ ರಕ್ಷಣೆಗೆ ಕ್ರಮ ಕೈಗೊಳ್ಳಬೇಕಾಗಿದೆ. ಇದಕ್ಕಾಗಿ ಈ ಹಿಂದೆಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಲು ನಿರ್ಧರಿಸಲಾಗಿತ್ತು. ಆದರೆ, ಜನಸಂಕಲ್ಪ ಯಾತ್ರೆ ಹಿನ್ನೆಲೆಯಲ್ಲಿ ಸಿಎಂ ಅವರನ್ನು ವಿಧಾನಸೌಧದಲ್ಲಿ ಭೇಟಿ ಮಾಡಲು ಸಾಧ್ಯವಾಗಲಿಲ್ಲ. ಬೆಳಗಾವಿ ಅಧಿವೇಶನದ ವೇಳೆ ಸಿಎಂ ಭೇಟಿಗೆ ಕಾಲಾವಕಾಶ ಕೊಡಿಸುವಂತೆ ಜಿಲ್ಲಾ ಉಸ್ತುವಾರಿ ಎಸ್.ಟಿ.ಸೋಮಶೇಖರ್ ಅವರಲ್ಲಿ ಮನವಿ ಮಾಡಲಾಗಿತ್ತು. ಬೆಳಗಾವಿಯಲ್ಲಿ ಸಿಎಂ ಭೇಟಿ ಮಾಡಿಸುವುದಾಗಿ ಭರವಸೆ ನೀಡಿದ್ದಾರೆ. ಇದರಿಂದ ಮುಂದಿನ 2–3 ದಿನಗಳಲ್ಲಿ ಸಿಎಂ ಭೇಟಿಗೆ ಅವಕಾಶ ದೊರೆಯಲಿದೆ. ಸಿದ್ಧಪಡಿಸಿರುವ ವರದಿಯನ್ನು ಸಲ್ಲಿಸಿ ಮೈಸೂರಿನ ಪಾರಂಪರಿಕ ಕಟ್ಟಡಗಳ ವಸ್ತುಸ್ಥಿತಿಯನ್ನು ವಿವರಿಸುತ್ತೇವೆ ಎಂದು ತಿಳಿಸಿದರು.

ಪ್ರಸ್ತುತ ಶಿಥಿಲಗೊಂಡಿರುವ ಪಾರಂಪರಿಕ ಕಟ್ಟಡಗಳ ದುರಸ್ತಿಗೆ ಮೊದಲ ಹಂತದಲ್ಲಿ 300 ಕೋಟಿ ರೂ. ನೀಡುವಂತೆ ಮನವಿ ಸಲ್ಲಿಸುತ್ತೇವೆ. 2023–24ರ ಬಜೆಟ್‌ನಲ್ಲಿ ಒಂದು ಸಾವಿರ ಕೋಟಿ ರೂ. ನೀಡುವಂತೆ ಕೋರುತ್ತೇವೆ. ಮೊದಲ ಹಂತದಲ್ಲಿ ಅನುದಾನ ನೀಡಿದರೆ, ಕಟ್ಟಡಗಳ ದುರಸ್ತಿ ಕಾಮಗಾರಿ ಆರಂಭಿಸಲಾಗುತ್ತದೆ ಎಂದರಲ್ಲದೆ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಅವರು ವಿಧಾನಪರಿಷತ್ ಸಭೆಯಲ್ಲಿ ಪಾರಂಪರಿಕ ಕಟ್ಟಡಗಳ ದುರಸ್ತಿಗೆ ಸಂಬಂಧಿಸಿದಂತೆ ಪ್ರಶ್ನೆ ಕೇಳಿದ್ದಾರೆ. ಪ್ರವಾಸೋದ್ಯಮ ಸಚಿವರು ಉತ್ತರ ನೀಡಿದ್ದಾರೆ. ಕಟ್ಟಡಗಳ ದುಸ್ಥಿತಿ ಬಗ್ಗೆ ಪ್ರವಾಸೋದ್ಯಮ ಇಲಾಖೆಗೆ ಮಾಹಿತಿ ಇದೆ. ಆದರೂ ಸಚಿವರು ವರದಿ ತರಿಸಿಕೊಳ್ಳುವುದಾಗಿ ಹೇಳಿದ್ದಾರೆ. ಅವರಿಗೂ ವರದಿ ನೀಡುತ್ತೇವೆ ಎಂದು ಎಂದರು.

ಪಿಂಕ್ ಶೌಚಾಲಯ: ಮೈಸೂರಿಗೆ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದೆ. ಆದರೆ ಸಾರ್ವಜನಿಕ ಸ್ಥಳಗಳಲ್ಲಿ ಶೌಚಾಲಯಗಳಿಲ್ಲದೇ ಪ್ರವಾಸಿಗರು ತೊಂದರೆ ಅನುಭವಿಸುತ್ತಿರುವ ಬಗ್ಗೆ ದೂರುಗಳು ಕೇಳಿ ಬಂದಿವೆ. ಅಗತ್ಯವಿರುವ ಕಡೆ ಶೌಚಾಲಯ ನಿರ್ಮಾಣಕ್ಕೆ ವರದಿ ನೀಡುವಂತೆ ಸೂಚನೆ ನೀಡಲಾಗಿದೆ. ಡಿ.ದೇವರಾಜ ಅರಸು ರಸ್ತೆಯಲ್ಲಿರುವ ಮಳಿಗೆಗಳಲ್ಲಿ ಕೆಲಸ ಮಾಡುವ ಮಹಿಳಾ ನೌಕರರಿಗೆ ಶೌಚಾಲಯದ ವ್ಯವಸ್ಥೆ ಇಲ್ಲದಿರುವ, ನಿರ್ವಹಣೆ ಕೊರತೆಯಿಂದ ಇ ಶೌಚಾಲಯ ತೆರವು ಮಾಡಲಾಗಿದೆ. ಹಾಗಾಗಿ ಅರಸು ರಸ್ತೆಯಲ್ಲಿ ಪಿಂಕ್ ಶೌಚಾಲಯ ನಿರ್ಮಿಸಲು ಉದ್ದೇಶಿಸಲಾಗಿದೆ ಎಂದು ಹೇಳಿದರು.

ಸಾರ್ವಜನಿಕರ ಉಪಯೋಗಕ್ಕಾಗಿ ನಗರದ ವಿವಿಧೆಡೆ ಶೌಚಾಲಯದ ಕೊರತೆ, ಪ್ರಸ್ತುತ ಇರುವ ಶೌಚಾಲಯಗಳಲ್ಲಿ ಶುಚಿತ್ವ ಇಲ್ಲದಿರುವ ಬಗ್ಗೆ ದೂರು ಕೇಳಿ ಬಂದಿದೆ. ಅವುಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತದೆ. ಆದಷ್ಟು ಬೇಗ ಶೌಚಾಲಯ ಸಮಸ್ಯೆಯನ್ನು ನಿವಾರಿಸಲಾಗುವುದು ಎಂದು ಭರವಸೆ ನೀಡಿದರು.

ದೊಡ್ಡ ಗಡಿಯಾರ ದುರಸ್ತಿಗೆ 44 ಲಕ್ಷ

ಮೈಸೂರು,ಡಿ.22(ಎಂಟಿವೈ)– ಮೈಸೂರಿನ ದೊಡ್ಡಗಡಿಯಾರದ ದುರಸ್ತಿಗೆ ಮಹಾನಗರ ಪಾಲಿಕೆ ವತಿಯಿಂದ ಪಾರಂಪರಿಕ ಇಲಾಖೆಗೆ 44 ಲಕ್ಷ ರೂ. ಹಣ ನೀಡಲಾಗಿದ್ದು, ಶೀಘ್ರದಲ್ಲೇ ದುರಸ್ತಿ ಕಾಮಗಾರಿ ಆರಂಭಿಸಲಾಗುತ್ತದೆ ಎಂದು ಮೇಯರ್ ಶಿವಕುಮಾರ್ ತಿಳಿಸಿದ್ದಾರೆ.



ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ರಜತ ಮಹೋತ್ಸವದ ನೆನಪಿನಲ್ಲಿ ನಿರ್ಮಿಸಿದ್ದು, ಈಗ ದುಸ್ಥಿತಿಗೆ ತಲುಪಿರುವ ದೊಡ್ಡ ಗಡಿಯಾರ ದುರಸ್ತಿಗೆ ಕ್ರಮ ಕೈಗೊಳ್ಳಲಾಗಿದೆ. ಪಾರಂಪರಿಕ ಇಲಾಖೆಯ ಮೇಲುಸ್ತುವಾರಿಯಲ್ಲೇ ಕಾಮಗಾರಿ ನಡೆಯಲಿದೆ. ನೈಜ ಸ್ವರೂಪಕ್ಕೆ ಧಕ್ಕೆಯಾಗದಂತೆ ಶೀಘ್ರದಲ್ಲಿ ಕಾಮಗಾರಿ ಆರಂಭಗೊಳ್ಳಲಿದೆ ಎಂದರು.

ಪುರಭವನದ ಒಂದು ಭಾಗ ಯಾವುದೇ ಸಂದರ್ಭದಲ್ಲಿ ಬೀಳುವ ಹಂತದಲ್ಲಿದೆ. ಪುರಭವನಕ್ಕೆ ಸಂಬಂಧಿಸಿದ ವ್ಯಾಜ್ಯವೊಂದು ನ್ಯಾಯಾಲಯದಲ್ಲಿ ಇರುವುದರಿಂದ ಕಾಮಗಾರಿ ಆರಂಭಕ್ಕೆ ಹಿನ್ನಡೆಯಾಗಿದೆ. ಪಾಲಿಕೆ ವಕೀಲರ ಮೂಲಕ ನ್ಯಾಯಾಲಯಕ್ಕೆ ಅಗತ್ಯ ಮಾಹಿತಿ ಸಲ್ಲಿಸಿ, ಶೀಘ್ರ ದುರಸ್ತಿ ಕಾರ್ಯಕ್ಕೆ ಕ್ರಮಕೈಗೊಳ್ಳುವುದಾಗಿ ತಿಳಿಸಿದರು.

ಉದ್ಯೋಗ ಮೇಳದಲ್ಲಿ ಹಲವರಿಗೆ ಸ್ಥಳದಲ್ಲಿಯೇ ಉದ್ಯೋಗ ದೊರೆತ ಸಂತಸ



ಮೈಸೂರು, ಡಿ.22(ಆರ್‌ಕೆಬಿ)– ರೋಟರಿ ಮೈಸೂರು ಉತ್ತರ, ಎನ್‌ಎಸ್ ಸೇವಾ ಟ್ರಸ್ಟ್, ಮತ್ತು ಕರುನಾಡ ರಕ್ಷಣಾ ವೇದಿಕೆ ಜಂಟಿ ಆಶ್ರಯದಲ್ಲಿ ಗುರುವಾರ ಮೈಸೂರಿನ ನಟರಾಜ ಸಭಾಭವನದಲ್ಲಿ ಬೃಹತ್ ಉದ್ಯೋಗ ಮೇಳ ನಡೆಯಿತು. ಮೇಳದಲ್ಲಿ ನೂರಾರು ಮಂದಿ ಉದ್ಯೋಗಾಕಾಂಕ್ಷಿ ಯುವಕ–ಯುವತಿಯರು ಭಾಗವಹಿಸಿದ್ದರು.

ಐಟಿಐ ಗ್ಲೋಬಲ್ ಉಚಿತ ಕೌಶಲ್ಯ ತರಬೇತಿ, ಪ್ಯಾಲೇಸ್ ಟೊಯೋಟಾ, ಪ್ರಥಮ್ ಎಜುಕೇಶನ್ ಸೊಸೈಟಿ, ಎಡಿಎಂಎಸ್ ಇ–ಬೈಕ್ಸ್, ಫ್ರೆಂಡ್ ಪಾರ್ಟ್ನರ್, ಐಐಎಫ್‌ಎಲ್ ಸಮಸ್ತ ಫೈನಾನ್ಸ್ ಲಿಮಿಟೆಡ್, ಹೆಲ್ತ್‌ಕೇರ್ ಪ್ರೈವೇಟ್ ಲಿಮಿಟೆಡ್ ಕೌಶಲ್ಯಾಭಿವೃದ್ಧಿ ಕೇಂದ್ರ ಸೇರಿದಂತೆ ಹಲವು ಕಂಪನಿಗಳು ಮೇಳದಲ್ಲಿ ಭಾಗವಹಿಸಿದ್ದವು.

ರೋಟರಿ ಮಾಜಿ ಗೌರ್ನರ್ ರವೀಂದ್ರ ಭಟ್ ಮೇಳಕ್ಕೆ ದೀಪ ಬೆಳಗಿಸಿ ಚಾಲನೆ ನೀಡಿ ಮಾತನಾಡಿ, ಉದ್ಯೋಗ ಮೇಳಗಳು ಹೆಚ್ಚು ನಡೆಯಬೇಕು. ಉದ್ಯೋಗ ಅರಸಿ ಇಂತಹ ಉದ್ಯೋಗ ಮೇಳಗಳಲ್ಲಿ ಭಾಗವಹಿಸುವ ಆಕಾಂಕ್ಷಿಗಳು ಹೆಚ್ಚಿನ ಸಂಬಳದ ನಿರೀಕ್ಷೆ ಇಟ್ಟುಕೊಳ್ಳದೇ ಯಾವ ಕೆಲಸ ಸಿಕ್ಕಿದರೂ ಸರಿ, ಮೊದಲು ಯಾವುದಾದರೂ ಕೆಲಸವಾಗಿ ಸೇರಿಕೊಂಡು, ನಂತರ ಮುಂದಿನ ಕೆಲಸಕ್ಕೆ ಪ್ರಯತ್ನ ಮಾಡಬೇಕು. ಇದರಿಂದ ಕೆಲಸ ಇಲ್ಲ ಎಂಬ ಬೇಸರ ಹೋಗುವ ಜೊತೆಗೆ, ಮುಂದೆ ಅನುಭವದ ಆಧಾರದ ಮೇಲೆ ಉತ್ತಮ ಕೆಲಸ ಪಡೆಯಲು ಅವಕಾಶವಾಗುತ್ತದೆ ಎಂದು ಕಿವಿಮಾತು ಹೇಳಿದರು.

ಮೇಳದಲ್ಲಿ 8ನೇ ತರಗತಿಯಿಂದ ಪದವಿವರೆಗಿನ ನಿರುದ್ಯೋಗಿಗಳು ಭಾಗವಹಿಸಿ, ಜಿಲ್ಲೆ ಮತ್ತು ಹೊರ ಜಿಲ್ಲೆಗಳ ನೂರಾರು ಉದ್ಯೋಗ ಆಕಾಂಕ್ಷಿಗಳು ತಮ್ಮ ಪ್ರೊಫೈಲ್‌ಗಳೊಂದಿಗೆ ಭಾಗವಹಿಸಿ, ತಮಗೆ ಬೇಕಾದ ಉದ್ಯೋಗ ಕಂಪನಿಗಳೊಂದಿಗೆ ಸಂವಾದ ನಡೆಸಿದರು. ಈ ವೇಳೆ ಹಲವರಿಗೆ ಸ್ಥಳದಲ್ಲಿಯೇ ಉದ್ಯೋಗ ದೊರೆತ ಸಂತಸ ಮನೆ ಮಾಡಿತ್ತು.

ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ ಎಂ.ಪ್ರದೀಪ್‌ಕುಮಾರ್, ರೋಟರಿ ಉತ್ತರ ಅಧ್ಯಕ್ಷ ಎಸ್.ಹೆಚ್.ಜಗದೀಶ್, ಹೋಟೆಲ್ ಉದ್ಯಮಿ ಅನಿಲ್, ಡಾ.ಬಸವರಾಜು, ಸಮಾಜ ಸೇವಕಿ ಶಶಿಕಲಾ ಇನ್ನಿತರರು ಉಪಸ್ಥಿತರಿದ್ದರು.

ಇಂದು ಕುರುಬರ ಸಂಘದ ಪೂರ್ವಭಾವಿ ಸಭೆ



ಮೈಸೂರು, ಡಿ.22– ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ವಿಚಾರವಾಗಿ ರಾಜ್ಯ ಸರ್ಕಾರವನ್ನು ಒತ್ತಾಯಿಸಲು ಡಿ.27ರಂದು ಬೆಳಗಾವಿಯ ಸುವರ್ಣ ಸೌಧ ಮುಂಭಾಗ ಪ್ರತಿಭಟನೆ ನಡೆಸುವ ಬಗ್ಗೆ ಚರ್ಚಿಸಲು ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಕನಕ ಭವನದಲ್ಲಿ ನಾಳೆ (ಡಿ.23) ಬೆಳಗ್ಗೆ 11 ಗಂಟೆಗೆ ಪೂರ್ವಭಾವಿ ಸಭೆ ಕರೆಯಲಾಗಿದೆ ಎಂದು ಕರ್ನಾಟಕ ರಾಜ್ಯ ಕುರುಬರ ಸಂಘದ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ತಿಳಿಸಿದ್ದಾರೆ.

ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವ ಸಲುವಾಗಿ ಕರ್ನಾಟಕ ಸರ್ಕಾರದಿಂದ ಕುಲಶಾಸ್ತ್ರ ಅಧ್ಯಯನ ವರದಿಯನ್ನು ಪರಿಶಿಷ್ಟ ಮತ್ತು ಬುಡಕಟ್ಟು ಇಲಾಖೆಯ ನಿರ್ದೇಶಕರಿಂದ ಪಡೆಯಬೇಕು. ಸದರಿ ವರದಿಯನ್ನು ಸಚಿವ ಸಂಪುಟದಲ್ಲಿಟ್ಟು ಚರ್ಚಿಸಿ, ಅನುಮೋದನೆ ನೀಡಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸುವ ಸಲುವಾಗಿ ಸುವರ್ಣ ಸೌಧದ ಮುಂದೆ ಪ್ರತಿಭಟನೆ ನಡೆಸಲಾಗುತ್ತದೆ ಎಂದಿರುವ ಅವರು, ಕರ್ನಾಟಕ ಪ್ರದೇಶ ಕುರುಬರ ಸಂಘದ ಪದಾಧಿಕಾರಿಗಳು, ನಿರ್ದೇಶಕರು, ಸಮಾಜದ ಮುಖಂಡರು, ಜನಪ್ರತಿನಿಧಿಗಳು ಹಾಗೂ ಸಮಾಜದ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಈ ಪೂರ್ವಭಾವಿ ಸಭೆಗೆ ಆಗಮಿಸಿ, ಸಲಹೆ ಸೂಚನೆ ನೀಡುವಂತೆ ಮನವಿ ಮಾಡಿದ್ದಾರೆ.

ಡಿ.28ರಂದು ಕನ್ನಡೋತ್ಸವ ಭಾವಗೀತೆ ಗಾಯನ ಕಾರ್ಯಕ್ರಮ



ಮೈಸೂರು,ಡಿ.22(ಪಿಎಂ)– ಮಹಾರತ್ನ ಟ್ರಸ್ಟ್ ವತಿಯಿಂದ ಡಿ.28ರಂದು 'ಕನ್ನಡೋತ್ಸವ' ಶೀರ್ಷಿಕೆಯಡಿ ಕನ್ನಡ ಸುಗಮ ಸಂಗೀತ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಟ್ರಸ್ಟ್ ಅಧ್ಯಕ್ಷ ಮೈಸೂರು ಎಂ.ಮಹಾಲಿಂಗು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5ಕ್ಕೆ ಜಗನ್ಮೋಹನ ಅರಮನೆಯಲ್ಲಿ ಕಾರ್ಯಕ್ರಮ ನಡೆಯಲಿದ್ದು, ಖ್ಯಾತ ಗಾಯಕರಾದ ಸಿ.ಅಶ್ವಥ್ ಮತ್ತು ಮೈಸೂರು ಅನಂತಸ್ವಾಮಿ ಅವರ ರಾಗಸಂಯೋಜನೆಯುಳ್ಳ ಭಾವಗೀತೆಗಳನ್ನು ಸಾದರಪಡಿಸಲಾಗುವುದು. ಪ್ರವೇಶ ಉಚಿತವಿದೆ ಎಂದರು.

ಇದೇ ಸಂದರ್ಭದಲ್ಲಿ ಸಾಹಿತ್ಯ ಕ್ಷೇತ್ರದಲ್ಲಿನ ಸೇವೆಗಾಗಿ ಪ್ರೊ.ಸುರೇಶ್ ಮತ್ತು ಪ್ರೊ.ಮೈಸೂರು ಕೃಷ್ಣಮೂರ್ತಿ ಅವರಿಗೆ 'ಕನ್ನಡ ಸಾಹಿತ್ಯ ರತ್ನ' ಪುರಸ್ಕಾರ ನೀಡಲಾಗುವುದು. ಜೊತೆಗೆ ಟ್ರಸ್ಟ್‌ನಿಂದ ನಡೆದ ಗಾಯನ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ನಗದು ಬಹುಮಾನ ವಿತರಿಸಲಾಗುವುದು ಎಂದರು. ಟ್ರಸ್ಟ್‌ನ ಪದಾಧಿಕಾರಿಗಳಾದ ರಾಜೇಶ್ ಪಡಿಯಾರ್, ರೂಪ, ಕೌಶಲ್ಯ, ನಾಗಶ್ರೀ ಗೋಷ್ಠಿಯಲ್ಲಿದ್ದರು.

ಡಿ.25ರಂದು ಡಾ.ವಿಷ್ಣುವರ್ಧನ್ ಸೇವೆ ಸ್ಮರಿಸಲು ಪಾದಯಾತ್ರೆ



ಮೈಸೂರು,ಡಿ.22(ಪಿಎಂ)– ಸಾಹಸ ಸಿಂಹ ಡಾ.ವಿಷ್ಣುವರ್ಧನ್ ಅವರ ಆದರ್ಶಗಳನ್ನು ಹಚ್ಚ ಹಸಿರಾಗಿಡುವ ಮೂಲಕ ಸಮಾಜಕ್ಕೆ ಅವರಂತೆ ಬದುಕಬೇಕೆಂಬ ಪ್ರೇರಣೆ ನೀಡಲು ಡಾ.ವಿಷ್ಣು ಸೇನಾ ಸಮಿತಿ ವತಿಯಿಂದ 'ಆದರ್ಶ ನಡಿಗೆ' ಶೀರ್ಷಿಕೆಯಡಿ ಡಿ.25ರಂದು ಮೈಸೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ ಎಂದು ಸಮಿತಿ ಪ್ರಧಾನ ಕಾರ್ಯದರ್ಶಿ ಎಂ.ಶಿವಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ವಿಷ್ಣುವರ್ಧನ್ ಅವರ ಸೇವೆ ಸ್ಮರಿಸುವ ಜೊತೆಗೆ ಮತ್ತೊಬ್ಬರಿಗೂ ಅವರ ಸೇವಾ ಮನೋಭಾವ ಸ್ಫೂರ್ತಿಯಾಗಲಿ ಎಂಬ ಉದ್ದೇಶದಿಂದ ಈ ಪಾದಯಾತ್ರೆ ಹಮ್ಮಿಕೊಳ್ಳಲಾಗಿದೆ. ಪ್ರತಿವರ್ಷ ಈ ಪಾದಯಾತ್ರೆಯನ್ನು ನಿರಂತರವಾಗಿ ನಡೆಸಲು ಉದ್ದೇಶಿಸಿದ್ದು, ಇದು ಮೊದಲ ಪಾದಯಾತ್ರೆ ಎಂದರು.

ಅಂದು ಬೆಳಗ್ಗೆ 9ಕ್ಕೆ ಮೈಸೂರಿನ ಕೋರ್ಟ್ ಎದುರಿನ ಗಾಂಧಿ ಪುತ್ಥಳಿಗೆ ಮಾಲಾರ್ಪಣೆ ಮಾಡುವ ಮೂಲಕ ಪಾದಯಾತ್ರೆಗೆ ಚಾಲನೆ ನೀಡಲಾಗುವುದು. ಡಿ.30ರಂದು ಬೆಂಗಳೂರಿನ ಅಭಿನವ್ ಸ್ಟುಡಿಯೋ ಬಳಿ ಪಾದಯಾತ್ರೆ ಮುಕ್ತಾಯಗೊಳ್ಳಲಿದೆ. 150 ಕಿ.ಮೀ.ನ ಈ ನಡಿಗೆಯಲ್ಲಿ 150 ಮಂದಿ ಪಾಲ್ಗೊಳ್ಳಲಿದ್ದಾರೆ. ಉದ್ಯಮಿ ಬಲರಾಮ್ ಅವರ ನೇತೃತ್ವದಲ್ಲಿ ಪಾದಯಾತ್ರೆ ನಡೆಯಲಿದೆ ಎಂದು ಹೇಳಿದರು. ಸಮಿತಿ ಅಧ್ಯಕ್ಷ ಲೋಹಿತ್‌ಗೌಡ, ಉಪಾಧ್ಯಕ್ಷರಾದ ಬಿ.ಕುಮಾರ, ಜಿ.ಎಸ್.ರಮೇಶ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ನಾಳೆ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಲೋತ್ಸವ

ಮೈಸೂರು,ಡಿ.22– ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ ಡಿ.24 ರಂದು ಬೆಳಗ್ಗೆ 9.30ಕ್ಕೆ ಮಹಾರಾಜ ಪದವಿ ಪೂರ್ವ ಕಾಲೇಜು,(ಪ್ರೌಢಶಾಲಾ ವಿಭಾಗ) ಜೆ.ಎಲ್.ಬಿ ರಸ್ತೆ, ಇಲ್ಲಿ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಕಲೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಕ್ರಮವಾಗಿ ಅಂಗವೈಕಲ್ಯ ಗುರುತಿನ ಚೀಟಿ ನೀಡುವವರ ವಿರುದ್ಧ ಕ್ರಿಮಿನಲ್ ಕೇಸ್

ಮೈಸೂರು ಜಿಲ್ಲಾ ಮಟ್ಟದ ವಿಕಲಚೇತನರ ಕುಂದುಕೊರತೆ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಎಚ್ಚರಿಕೆ



ಮೈಸೂರು, ಡಿ.22(ಆರ್‌ಕೆಬಿ)– ಜಿಲ್ಲೆಯಲ್ಲಿ ವಿಶಿಷ್ಟ ಅಂಗವೈಕಲ್ಯ ಗುರುತಿನ ಚೀಟಿಯನ್ನು (ಯುಡಿಐಡಿ) ಅಕ್ರಮವಾಗಿ ನೀಡುವ ವೈದ್ಯರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಎಂದು ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಮೈಸೂರು ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಗುರುವಾರ ನಡೆದ ಜಿಲ್ಲಾ ಮಟ್ಟದ ವಿಕಲಚೇತನರ ಕುಂದುಕೊರತೆ ಸಭೆಯಲ್ಲಿ ವಿಕಲಚೇತನರ ಸಮಸ್ಯೆ ಆಲಿಸಿ, ಈ ಎಚ್ಚರಿಕೆ ನೀಡಿದರು.

ಅರ್ಹರಲ್ಲದವರೂ ವಿಶಿಷ್ಟ ಅಂಗವೈಕಲ್ಯ ಗುರುತಿನ ಚೀಟಿ ಪಡೆದು ಸರ್ಕಾರದ ಸೌಲಭ್ಯಗಳೊಂದಿಗೆ ಮಾಸಾಶನ ಪಡೆಯುತ್ತಿದ್ದಾರೆ. ಮೈಸೂರು ಕೆ.ಆರ್.ಆಸ್ಪತ್ರೆಯಲ್ಲಿ ಈ ದಂಧೆ ನಡೆಯುತ್ತಿರುವ ಬಗ್ಗೆ ಆರೋಪಿಸಿ, ಸಭೆಯಲ್ಲಿ ಹಲವು ಎನ್‌ಜಿಓ ಸಂಸ್ಥೆಗಳ ಪ್ರಮುಖರು ಜಿಲ್ಲಾಧಿಕಾರಿಗಳ ಗಮನಕ್ಕೆ ತಂದರು.

ಹಲವರು ಶೇ.75 ರಷ್ಟು ಶ್ರವಣದೋಷವಿರುವುದಾಗಿ ಯುಡಿಐಡಿ ಪ್ರಮಾಣಪತ್ರ ಹೊಂದಿದ್ದಾರೆ. ಜಿಲ್ಲೆಯಲ್ಲಿ ನಕಲಿ ವಿಕಲಚೇತನರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಎಲ್ಲ ಅಂಗಗಳು ಸರಿಯಾಗಿದ್ದರೂ ಯುಡಿಐಡಿ ನೀಡಲಾಗುತ್ತಿದೆ ಎಂದು ಅನೇಕ ವಿಕಲಚೇತನರು ದೂರಿದರು.

ಇದಕ್ಕೆ ಕಳವಳ ವ್ಯಕ್ತಪಡಿಸಿದ ಜಿಲ್ಲಾಧಿಕಾರಿ ಕೆ.ವಿ.ರಾಜೇಂದ್ರ ವಿಕಲಚೇತನ ಪ್ರಮಾಣ ಪತ್ರ ಪಡೆದಿರುವ ವಿಕಲಚೇತನರನ್ನು ಸಾಮೂಹಿಕವಾಗಿ ತಪಾಸಣೆ ನಡೆಸುವುದರೊಂದಿಗೆ ಇತ್ತೀಚೆಗೆ ಕೆ.ಆರ್. ಆಸ್ಪತ್ರೆಯಲ್ಲಿ ನೀಡಿರುವ ವಿಕಲಚೇತನ ಪ್ರಮಾಣ ಪತ್ರವನ್ನು ಸಾಮೂಹಿಕವಾಗಿ ಪರಿಶೀಲಿಸಿ ವರದಿ ನೀಡುವಂತೆ ಹಿರಿಯ ನಾಗರಿಕ ಮತ್ತು ವಿಕಲಚೇತನರ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು. ಅಕ್ರಮವಾಗಿ ವಿಕಲಚೇತನ ಪ್ರಮಾಣ ಪತ್ರ ನೀಡಿರುವುದು ಕಂಡು ಬಂದಲ್ಲಿ ಅಂತಹ ವೈದ್ಯರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದು ಎಂದರು. ಅಕ್ರಮವಾಗಿ ವಿಕಲಚೇತನರ ಪ್ರಮಾಣ ಪತ್ರ ನೀಡುವಲ್ಲಿ ವೈದ್ಯರ ಪಾತ್ರ ಇದೆ ಎಂದು ಕೆಲ ವಿಕಲಚೇತನರು ಮಾಡಿದ ಆರೋಪವನ್ನು ಪರಿಗಣಿಸಿದ ಜಿಲ್ಲಾಧಿಕಾರಿ, ಮೈಸೂರು ಜಿಲ್ಲೆಯಲ್ಲಿ ವಿಕಲಚೇತನರ ಪ್ರಮಾಣ ಪತ್ರ ನೀಡುವ ವೈದ್ಯರ ಸಭೆ ಕರೆಯುವಂತೆ ಸೂಚನೆ ನೀಡಿದರು.

ವಿಕಲಚೇತನರ ಕುಂದುಕೊರತೆಗಳನ್ನು ಪರಿಹರಿಸಲು ಆಯಾ ತಾಲೂಕು ಮಟ್ಟದ ಅಧಿಕಾರಿಗಳು ಸಿಡಿಪಿಓಗಳು, ಮೇಲ್ವಿಚಾರಕರು ವಿಕಲಚೇತನರ ಕುಂದುಕೊರತೆ ಸಭೆ ನಡೆಸಿ ಅಲ್ಲಿಯೇ ಪರಿಹರಿಸಿದರೆ, ಇದರಿಂದ ಅವರು ಜಿಲ್ಲಾ ಕೇಂದ್ರಕ್ಕೆ ಅಲೆಯುವುದು ತಪ್ಪುತ್ತದೆ. ಜ.10ರೊಳಗೆ ಸಭೆ ನಡೆಸಿ ಜಿಲ್ಲಾಡಳಿತಕ್ಕೆ ವರದಿ ಸಲ್ಲಿಸುವಂತೆ ತಾಕೀತು ಮಾಡಿದರು.

ವಿಕಲಚೇತನರ ವಿಷಯದಲ್ಲಿ ಮಾನವೀಯತೆಯಿಂದ ಕೆಲಸ ಮಾಡಿ ಅವರ ಹಕ್ಕುಗಳನ್ನು ಗೌರವಿಸಿ, ಎರಡು ತಿಂಗಳಿಗೊಮ್ಮೆಯಾದರೂ ಕಡ್ಡಾಯವಾಗಿ ಸಭೆ ನಡೆಸಬೇಕು. ಶೇ.5ರಷ್ಟು ಅನುದಾನ ಬಳಕೆ ಆಗುತ್ತಿದೆಯೇ, ಅರ್ಹರಿಗೆ ತಲುಪುತ್ತಿದೆಯೇ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು ಎಂದು ಸೂಚಿಸಿದರು.

ನಾವು ನೀಡಿದ ಯಾವುದೇ ಅರ್ಜಿಗಳಿಗೆ ಸಂಬಂಧಿಸಿದಂತೆ ನಗರಪಾಲಿಕೆಯ ವಲಯ ಅಧಿಕಾರಿಗಳು ಮುಖ್ಯ ಕಚೇರಿಗೆ ಕಳಿಸಲು ವಿಳಂಬ ಮಾಡುತ್ತಿರುವ ಬಗ್ಗೆ ಹಲವರು ದೂರಿದರು. ಪ್ರಶ್ನಿಸಿದರೆ ಯಾರಿಗಾದರೂ ಹೇಳಿಕೊಳ್ಳಿ ಎಂಬ ಉದ್ಧಟತನದ ಉತ್ತರ ವಲಯ ಕಚೇರಿ ಸಿಬ್ಬಂದಿ ನೀಡುತ್ತಾರೆ ಎಂದು ಜಿಲ್ಲಾಧಿಕಾರಿಗಳ ಗಮನ ಸೆಳೆದರು.

ಇದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ, ಯಾವ ಕಚೇರಿಯಲ್ಲಿ ಯಾವ ಸಿಬ್ಬಂದಿ ಉದ್ಧಟತನದಿಂದ ವರ್ತಿಸುತ್ತಿದ್ದಾರೋ ಅಂಥವರ ಬಗ್ಗೆ ಲಿಖಿತ ದೂರು ನೀಡಿದರೆ, ಅದನ್ನು ಪರಿಶೀಲಿಸಿ, ಅವರ ಮೇಲೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಭರವಸೆ ನೀಡಿದರು.

ಶೇ.40ಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ಅಂಗವಿಕಲತೆ ಹೊಂದಿದ್ದರೆ, ಮತದಾರರ ಪಟ್ಟಿಯಲ್ಲಿ ನಮೂದಿಸಬೇಕು. ಆಗ, ಆಯೋಗದಿಂದ ಮತದಾನಕ್ಕಾಗಿ ಮನೆಗೆ ವಾಹನ ಕಳುಹಿಸುವ ಸೌಲಭ್ಯ ಪಡೆಯಬಹುದು. ತೃತೀಯ ಲಿಂಗಿಗಳು ಮತದಾರರ ಪಟ್ಟಿಯಲ್ಲಿ ನೋಂದಣಿ ಮಾಡಿಸಿಕೊಳ್ಳುವಂತೆ ತಿಳಿಸಿದರು.

ಸಭೆಯಲ್ಲಿ ಜಿಪಂ ಸಿಇಓ ಡಾ.ಬಿ.ಆರ್.ಪೂರ್ಣಿಮಾ, ನಗರಪಾಲಿಕೆ ಹೆಚ್ಚುವರಿ ಆಯುಕ್ತೆ ರೂಪಾ, ಹಿರಿಯ ನಾಗರಿಕರ ಮತ್ತು ವಿಕಲಚೇತನರ ಇಲಾಖೆಯ ಜಿಲ್ಲಾ ಅಧಿಕಾರಿ ಮಾಲಿನಿ ಉಪಸ್ಥಿತರಿದ್ದರು.

> ವಿಕಲಚೇತನ ಪ್ರಮಾಣ ಪತ್ರ ಪಡೆದ ಫಲಾನುಭವಿಗಳಿಗೆ ಸೌಲಭ್ಯವನ್ನು ತಡೆ ಹಿಡಿಯುವ ಅಧಿಕಾರ ಅಧಿಕಾರಿಗಳಿಗೆ ಇಲ್ಲ. ಯಾರು ಕೂಡ ಸೌಲಭ್ಯವನ್ನು ತಡೆ ಹಿಡಿಯಬಾರದು, ಅನುಮಾನ ಬಂದರೆ ಸಂಬಂಧಪಟ್ಟ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಬೇಕು. - ಡಾ.ಕೆ.ವಿ.ರಾಜೇಂದ್ರ, ಜಿಲ್ಲಾಧಿಕಾರಿ

> ಪೆಟ್ಟಿ ಅಂಗಡಿಗೆ ಲೈಸೆನ್ಸ್ ಕೊಡುವ ನಗರ ಪಾಲಿಕೆ ಅಧಿಕಾರಿಗಳೇ ನಾವು ಅಂಗಡಿ ಇಟ್ಟಿರುವ ಜಾಗದಿಂದ ಅಂಗಡಿ ತೆರವುಗೊಳಿಸುವಂತೆ ತೊಂದರೆ ನೀಡುತ್ತಿದ್ದಾರೆ. ಹೀಗಾದರೆ ವಿಕಲಚೇತನರ ಗತಿ ಏನು? - ವೆಂಕೋಬರಾವ್

ಪಂಚಮಸಾಲಿ ಸಮುದಾಯ 2ಎಗೆ ಸೇರಿಸುವ ಪ್ರಸ್ತಾಪ ತಿರಸ್ಕರಿಸಲು ಆಗ್ರಹಿಸಿ

ಅತೀ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಪ್ರತಿಭಟನೆ



ಮೈಸೂರು,ಡಿ.22(ಎಂಟಿವೈ)– ಪಂಚಮಸಾಲಿ ಸಮುದಾಯವನ್ನು 2ಎ ಗೆ ಸೇರಿಸುವ ಪ್ರಸ್ತಾವನೆಯನ್ನು ತಿರಸ್ಕರಿಸುವಂತೆ ಒತ್ತಾಯಿಸಿ ಅತೀ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಹಾಗೂ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ನ್ಯಾಯಾಲಯ ಮುಂಭಾಗವಿರುವ ಮಹಾತ್ಮ ಗಾಂಧಿ ಪುತ್ಥಳಿ ಬಳಿ ಪ್ರತಿಭಟನೆ ನಡೆಸಿದ ಹಿಂದುಳಿದ ವರ್ಗಗಳ ಜಾಗೃತ ವೇದಿಕೆಯ ಕಾರ್ಯಕರ್ತರು, ಪಂಚಮಸಾಲಿ ಸಮುದಾಯ ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಬಲಿಷ್ಠ ಸಮುದಾಯವಾಗಿದೆ. ಈ ಸಮುದಾಯವನ್ನು ಪ್ರವರ್ಗ 2ಎಗೆ ಸೇರಿಸಬೇಕೆಂದು ಒತ್ತಾಯಿಸಲಾಗುತ್ತಿದೆ. ಆದರೆ ಎಲ್ಲಾ ಕ್ಷೇತ್ರಗಳಲ್ಲೂ ಬಲಿಷ್ಠವಾಗಿರುವ ಸಮಾಜಗಳನ್ನು 2ಎ ವರ್ಗಕ್ಕೆ ಸರ್ಕಾರ ಸೇರಿಸಬಾರದು. ಈ ಪ್ರಸ್ತಾವನೆಯನ್ನು ಸರ್ಕಾರ ತಿರಸ್ಕರಿಸಬೇಕೆಂದು ಆಗ್ರಹಿಸಿದರು.

ಬಲಿಷ್ಠ ಸಮುದಾಯಗಳನ್ನು ಪ್ರವರ್ಗ 2ಎಗೆ ಸೇರಿಸಿದರೆ ನೂರಾರು ಹಿಂದುಳಿದ ಅತೀ ಹಿಂದುಳಿದ ಜಾತಿ ಜನಾಂಗಗಳು ಶೋಷಿತ ಕಾಯಕ ಸಮಾಜಗಳು ಅವಕಾಶ ವಂಚಿತವಾಗುತ್ತವೆ. ಶತ ಶತಮಾನಗಳಿಂದ ಶೋಷಣೆಗೆ ಒಳಪಟ್ಟು ಮೀಸಲಾತಿಯಿಂದ ಉದ್ಯೋಗ ಮತ್ತು ಶಿಕ್ಷಣದಲ್ಲಿ ಅವಕಾಶ ಸಿಗುತ್ತಿದೆ. ಬಲಿಷ್ಠ ವರ್ಗಗಳನ್ನು ಈ ಮೀಸಲಾತಿಯಡಿ ತಂದರೆ ಸಣ್ಣಪುಟ್ಟ ಅವಕಾಶಗಳು ಕೈ ತಪ್ಪಿ ಸಾಮಾಜಿಕ ಅಸಮಾನತೆ ಉಂಟಾಗುತ್ತದೆ. ಸಂವಿಧಾನದ ಆಶಯಕ್ಕೆ ಧಕ್ಕೆಯಾಗುತ್ತದೆ. ಹೀಗಾಗಿ ಇದೆಲ್ಲವನ್ನು ಸರ್ಕಾರ ಕೂಲಂಕಷವಾಗಿ ಪರಿಶೀಲಿಸಿ ಸ್ಪಷ್ಟ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಅತಿ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಜಿಲ್ಲಾಧ್ಯಕ್ಷ ನಾಗಭೂಷಣ್, ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ಎನ್.ಆರ್.ನಾಗೇಶ್, ಜಿಲ್ಲಾ ಮಡಿವಾಳ ಸಂಘದ ಅಧ್ಯಕ್ಷ ರವಿನಂದನ್, ಜಿಲ್ಲಾ ಉಪ್ಪಾರ ಸಂಘದ ಅಧ್ಯಕ್ಷ ಯೋಗೇಶ್ ಉಪ್ಪಾರ, ಜಿಲ್ಲಾ ಕುಂಬಾರ ಸಂಘದ ಅಧ್ಯಕ್ಷ ಪ್ರಕಾಶ್, ಜಿಲ್ಲಾ ಪ್ರದೇಶ ಕುರುಬರ ಸಂಘದ ಅಧ್ಯಕ್ಷ ಶಿವಪ್ಪ ಕೋಟೆ, ಮುಖಂಡರಾದ ಲೋಕೇಶ್‌ಕುಮಾರ್, ಮಹೇಂದ್ರ ಕಾಗಿನೆಲೆ, ಎಲ್.ಕೆ.ರವಿ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

2ನೇ ಟೆಸ್ಟ್: ಮೊದಲ ದಿನ ಭಾರತಕ್ಕೆ ಮೇಲುಗೈ

ಢಾಕಾ, ಡಿ.22– ಉಮೇಶ್ ಯಾದವ್ ಹಾಗೂ ರವಿಚಂದ್ರನ್ ಅಶ್ವಿನ್ ಅವರ ಕರಾರುವಾಕ್ ಬೌಲಿಂಗ್ ಪ್ರದರ್ಶನದ ನೆರವಿನಿಂದ ಬಾಂಗ್ಲಾದೇಶ ವಿರುದ್ಧ ನಡೆಯುತ್ತಿರುವ 2ನೇ ಟೆಸ್ಟ್ ಪಂದ್ಯದಲ್ಲಿ ಭಾರತ ಮೇಲುಗೈ ಸಾಧಿಸಿದೆ.



ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಬಾಂಗ್ಲಾದೇಶ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ 227 ರನ್‌ಗಳಿಗೆ ಆಲೌಟಾಯಿತು. ಬಾಂಗ್ಲಾ ಪರ ಮೊಮಿನುಲ್ ಹಕ್ 84 ರನ್ ಗಳಿಸಿ ತಂಡಕ್ಕೆ ನೆರವಾಗಿದ್ದು ಬಿಟ್ಟರೇ ಉಳಿದವರಿಂದ ಬೃಹತ್ ಮೊತ್ತ ದಾಖಲಾಗಲಿಲ್ಲ. ಉಳಿದಂತೆ ನಜ್ಮುಲ್ ಹೊಸೈನ್ ಶಾಂತೋ 24, ಜಾಕೀರ್ ಹಸನ್ 15, ಶಕೀಬ್ ಅಲ್ ಹಸನ್ 16, ಮುಶ್ಫಿಕರ್ ರಹೀಮ್ 26, ಲಿಟ್ಟನ್ ದಾಸ್ 25, ನೂರಲ್ ಹಸನ್ 6 ರನ್ ಗಳಿಸಿದರು. ಭಾರತದ ಪರ ಅಶ್ವಿನ್, ಉಮೇಶ್ ಯಾದವ್ ತಲಾ 4, ಜಯದೇವ್ ಉನಾದ್ಗಟ್ 2 ವಿಕೆಟ್ ಕಬಳಿಸಿದರು.

ನಂತರ ತನ್ನ ಮೊದಲ ಇನ್ನಿಂಗ್ಸ್ ಆರಂಭಿಸಿರುವ ಭಾರತ ಮೊದಲ ದಿನದಂತ್ಯಕ್ಕೆ ವಿಕೆಟ್ ನಷ್ಟವಿಲ್ಲದೇ 19 ರನ್ ಗಳಿಸಿದೆ. ಭಾರತದ ಪರ ಶುಭ್‌ಮನ್ ಗಿಲ್ 14, ನಾಯಕ ಕೆ.ಎಲ್.ರಾಹುಲ್ 3 ರನ್ ಗಳಿಸಿ 2ನೇ ದಿನಕ್ಕೆ ಬ್ಯಾಟಿಂಗ್ ಕಾಯ್ದುಕೊಂಡಿದ್ದಾರೆ.

ನಾಳೆ ರಾಷ್ಟ್ರೀಯ ಗ್ರಾಹಕರ ದಿನಾಚರಣೆ

ಕಲಬೆರಕೆ, ತೂಕದಲ್ಲಿ ವಂಚನೆ ಬಗ್ಗೆ ಜನ ಜಾಗೃತಿ





ಮೈಸೂರು, ಡಿ.22(ಆರ್‌ಕೆ)– ಡಿಸೆಂಬರ್ 24ರಂದು ರಾಷ್ಟ್ರೀಯ ಗ್ರಾಹಕರ ದಿನಾಚರಣೆ ಹಿನ್ನೆಲೆಯಲ್ಲಿ ಮೈಸೂರು ಗ್ರಾಹಕರ ಪರಿಷತ್ (MGP), ಕಾನೂನು ಮಾಪನ ಶಾಸ್ತ್ರ ಇಲಾಖೆ, ಮೈಮುಲ್, ಚೆಸ್ಕಾಂ ಹಾಗೂ ಸೆಂಟ್ ಫಿಲೋಮಿನಾ ಕಾಲೇಜು ವಿದ್ಯಾರ್ಥಿಗಳು ಇಂದು ಮೈಸೂರಿನ ಹೃದಯ ಭಾಗದ ಚಿಕ್ಕ ಗಡಿಯಾರದ ಬಳಿ ಸಾರ್ವಜನಿಕರಿಗೆ ಕಲಬೆರಕೆ, ಗ್ರಾಹಕರ ಜವಾಬ್ದಾರಿ, ಹಕ್ಕುಗಳ ಬಗ್ಗೆ ಜಾಗೃತಿ ಮೂಡಿಸಿದರು.

ವಿದ್ಯುತ್, ವಾಹನ ಬಳಕೆದಾರರು, ಆಹಾರ ಪದಾರ್ಥ ಖರೀದಿಸುವವರು, ಇತರ ಜೀವನೋಪಾಯ ವಸ್ತು ಖರೀದಿಸುವವರು ಅವುಗಳ ಗುಣಮಟ್ಟ, ಅವಧಿ, ತೂಕ ಮತ್ತು ಅಳತೆಯಲ್ಲಿ ಮೋಸ, ವಂಚನೆ, ಕಲಬೆರಕೆ ಬಗ್ಗೆ ಜಾಗೃತರಾಗಬೇಕು. ಯಾವುದೇ ವಸ್ತು ಖರೀದಿಸುವಾಗ ಎಚ್ಚರಿಕೆ ವಹಿಸಬೇಕು ಎಂದು ಅಧಿಕಾರಿಗಳು ಸಾರ್ವಜನಿಕರಿಗೆ ಅರಿವು ಮೂಡಿಸಿದರು.

ಚೆಸ್ಕಾಂ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಎನ್.ಆರ್. ಉಪವಿಭಾಗದ ಎಕ್ಸಿಕ್ಯೂಟಿವ್ ಇಂಜಿನಿಯರ್ ಪೂರ್ಣಾನಂದ ಅವರ ನೇತೃತ್ವದಲ್ಲಿ ಅಧಿಕಾರಿಗಳು ವಿದ್ಯುತ್, ಗ್ರಾಹಕರ ಜವಾಬ್ದಾರಿ, ಹಕ್ಕುಗಳು, ವಿದ್ಯುತ್ ಅಡಚಣೆ, ಅಸಾಧಾರಣ ಬಿಲ್, ಗುಣಮಟ್ಟದ ವಿದ್ಯುತ್ ಪೂರೈಕೆಯಾಗದಿರುವುದು, ವಿದ್ಯುತ್ ಮಾರ್ಗ, ಮಾಪಕ ಸ್ಥಾವರಗಳಲ್ಲಿ ದೋಷ ಕಂಡು ಬಂದಲ್ಲಿ 1912 ಸಹಾಯವಾಣಿ ಮೂಲಕ ದೂರು ನೀಡಬೇಕು. ವೋಲ್ಟೇಜ್‌ನಲ್ಲಿ ಏರಿಳಿತ, ಲೋಡ್ ಶೆಡ್ಡಿಂಗ್, ವಿದ್ಯುತ್ ಅವಘಡ, ವಾಲಿದ ಕಂಬ, ವಿದ್ಯುತ್ ಕಳವು, ಸೋರಿಕೆಯಂತಹ ತೊಂದರೆಗಳಾದಾಗ ದೂರು ನೀಡುವ ವಿಧಾನಗಳ ಕುರಿತಂತೆ ಚೆಸ್ಕಾಂ ಅಧಿಕಾರಿಗಳು ಗ್ರಾಹಕರಿಗೆ ತಿಳುವಳಿಕೆ ಮೂಡಿಸಿದರಲ್ಲದೆ, ಗ್ರಾಹಕರ ಮಾಹಿತಿ ಕೈಪಿಡಿಯನ್ನು ಇದೇ ವೇಳೆ ವಿತರಿಸಿದರು.

ಕಾನೂನು ಮಾಪನ ಶಾಸ್ತ್ರ ಇಲಾಖೆ: ಕಾನೂನು ಮಾಪನಶಾಸ್ತ್ರ ಇಲಾಖೆ ಇನ್ಸ್‌ಪೆಕ್ಟರ್‌ಗಳಾದ ನಿತ್ಯಾನಂದ, ಸುಮಾರಾಣಿ ಅವರ ನೇತೃತ್ವದ ಅಧಿಕಾರಿಗಳು, ತೂಕ ಮತ್ತು ಅಳತೆಯಲ್ಲಿ ಮೋಸ ಮಾಡುವುದು, ಪೆಟ್ರೋಲ್ ಬಂಕ್‌ಗಳಲ್ಲಿ ಗ್ರಾಹಕರು ವಾಹನಗಳಿಗೆ ಇಂಧನ ತುಂಬಿಸಿಕೊಳ್ಳುವಾಗ ಗಮನಿಸಬೇಕಾದ ಅಂಶಗಳು, ತೂಕ ಮತ್ತು ಅಳತೆ ಸಾಧನಗಳಿಗೆ ಇಲಾಖೆಯ ಮುದ್ರೆ ಇದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು ಎಂದು ತಿಳುವಳಿಕೆ ಮೂಡಿಸಿದರು.

ತೂಕದ ಬಟ್ಟುಗಳು, ತಕ್ಕಡಿ, ಎರಡೂ ತಕ್ಕಡಿಗಳು ಖಾಲಿ ಇರುವಾಗ ಸಮನಾಗಿರುವುದನ್ನು ದೃಢಪಡಿಸಿಕೊಳ್ಳಬೇಕು. ಎಲೆಕ್ಟ್ರಾನಿಕ್ ತೂಕದ ಯಂತ್ರದ ಡಿಸ್‌ಪ್ಲೇಯಲ್ಲಿ 'O' ತೋರಿಸುವುದನ್ನು ಗಮನಿಸಬೇಕು. ವೇ ಬ್ರಿಡ್ಜ್, ಸೀಮೆಎಣ್ಣೆ ಅಳತೆ ಮಾಪನಗಳು ನಿಖರವಾಗಿ ಕೆಲಸ ಮಾಡುತ್ತಿವೆಯೇ ಎಂಬುದನ್ನು ಪರೀಕ್ಷಿಸಿಕೊಳ್ಳಬೇಕೆಂದು ಅಧಿಕಾರಿಗಳು ತಿಳುವಳಿಕೆ ಮೂಡಿಸಿ ಗ್ರಾಹಕರಿಗೆ ಮಾಹಿತಿಯನ್ನೊಳಗೊಂಡ ಭಿತ್ತಿ ಪತ್ರಗಳನ್ನು ಹಂಚಿದರು.

ಸೆಂಟ್ ಫಿಲೋಮಿನಾ ಕಾಲೇಜಿನ ಕೆಮಿಸ್ಟ್ರಿ (ಎಂಎಸ್ಸಿ) ವಿದ್ಯಾರ್ಥಿಗಳು ಆಹಾರ ಕಲಬೆರಕೆ ಪತ್ತೆ ಮಾಡುವ ಬಗ್ಗೆ ಸಾರ್ವಜನಿಕರಿಗೆ ಸ್ಥಳದಲ್ಲೇ ಪ್ರಾತ್ಯಕ್ಷಿಕೆ ಮೂಲಕ ತೋರಿಸಿ ಗಮನ ಸೆಳೆದರು. ಆಹಾರ ಸುರಕ್ಷತೆ ಹಾಗೂ ಗುಣಮಟ್ಟ ಪ್ರಾಧಿಕಾರ, ಆಹಾರ ಮತ್ತು ನಾಗರಿಕ ಪೂರೈಕೆ ಇಲಾಖೆ ಅಧಿಕಾರಿಗಳು ಆಹಾರ ಪದಾರ್ಥಗಳನ್ನು ಕಲಬೆರಕೆ ಮಾಡಿ ಮಾರಾಟ ಮಾಡುವುದರಿಂದ ಉಂಟಾಗುವ ದುಷ್ಪರಿಣಾಮಗಳ ಬಗ್ಗೆ ಇದೇ ವೇಳೆ ಜನರಿಗೆ ತಿಳುವಳಿಕೆ ನೀಡಿದರು.

ಮೈಮುಲ್‌ನಿಂದ ತಯಾರಿಸುವ ನಂದಿನಿ ಹಾಲಿನ ಉತ್ಪನ್ನ, ಸಿಹಿ ತಿಂಡಿಗಳ ಪ್ರದರ್ಶನ ಮತ್ತು ಮಾರಾಟ ಮಾಡಲಾಯಿತು. ಮೈಸೂರು ಗ್ರಾಹಕರ ಪರಿಷತ್ತಿನಿಂದ ಗ್ರಾಹಕರ ಹಕ್ಕುಗಳು, ಕೈಗೊಳ್ಳಬೇಕಾದ ಮುಂಜಾಗ್ರತೆ, ಜವಾಬ್ದಾರಿಗಳ ಕುರಿತು ಮಾಹಿತಿ ನೀಡಲಾಯಿತಲ್ಲದೆ, ಆಹಾರ ಪದಾರ್ಥ ಖರೀದಿಸುವಾಗ ಅನುಸರಿಸಬೇಕಾದ ಎಚ್ಚರಿಕಾ ಕ್ರಮದ ಬಗ್ಗೆ ಭಿತ್ತಿಪತ್ರಗಳನ್ನು ವಿತರಿಸಲಾಯಿತು.

ಎಂಜಿಪಿ ಕಾರ್ಯಾಧ್ಯಕ್ಷೆ ಎಸ್.ಶೋಭನಾ, ಕಾರ್ಯದರ್ಶಿ ಶ್ರೀಧರ್, ಕಾರ್ಯಕಾರಿ ಸಮಿತಿ ಸದಸ್ಯರಾದ ಡಾ. ಭಾಮಿ ವಿ.ಶೆಣೈ, ರೇಣು ಅಗರ್‌ವಾಲ್, ರಾಘವೇಂದ್ರ, ರವಿಪ್ರಕಾಶ್, ಶಂಕರ್, ಶೈಲಜೇಶ್, ಯಮುನಾ, ವಿಶ್ವನಾಥ್, ಮನು ಹಾಗೂ ಇತರರು ಜಾಗೃತಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ನೈರುತ್ಯ ರೈಲ್ವೆ ಮೈಸೂರು ವಿಭಾಗದ ನೌಕರರ ಪ್ರತಿಭಾವಂತ ಮಕ್ಕಳಿಗೆ ವಿದ್ಯಾರ್ಥಿ ವೇತನ, ಪ್ರೋತ್ಸಾಹ ಧನ ವಿತರಣೆ

ರಾಷ್ಟ್ರ, ಅಂತಾರಾಷ್ಟ್ರೀಯ ಕ್ರೀಡಾ ಸಾಧಕರಿಗೆ ಸನ್ಮಾನ



ಮೈಸೂರು, ಡಿ.22(ಆರ್‌ಕೆಬಿ)– ನೈರುತ್ಯ ರೈಲ್ವೆ ಮೈಸೂರು ವಿಭಾಗದ ನೌಕರರ ಪ್ರತಿಭಾವಂತ ಮಕ್ಕಳಿಗೆ ವಿದ್ಯಾರ್ಥಿ ವೇತನ, ಪ್ರೋತ್ಸಾಹ ಧನ ವಿತರಣೆ ಹಾಗೂ ರಾಷ್ಟ್ರ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಕ್ರೀಡಾ ಕ್ಷೇತ್ರದಲ್ಲಿ ಹೆಸರು ಮಾಡಿದ ವಿವಿಧ ಅಂತಾರಾಷ್ಟ್ರೀಯ ಕ್ರೀಡಾಕೂಟಗಳಲ್ಲಿ ಭಾರತವನ್ನು ಪ್ರತಿನಿಧಿಸಿದ ನೌಕರರನ್ನು ಅವರ ಸಾಧನೆ ಮೆಚ್ಚಿ ನೈರುತ್ಯ ರೈಲ್ವೆ ಮೈಸೂರು ವಿಭಾಗದ ಮಹಿಳಾ ಕಲ್ಯಾಣ ಸಮಿತಿ ವತಿಯಿಂದ ಸನ್ಮಾನಿಸಲಾಯಿತು.

ಮೈಸೂರಿನ ಯಾದವಗಿರಿ ಚಾಮುಂಡಿ ಆಫೀಸರ್ಸ್ ಕ್ಲಬ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ರಾಹುಲ್ ಅಗರ್‌ವಾಲ್ ಅವರು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮತ್ತು ಪ್ರಶಸ್ತಿ ಪ್ರದಾನ ಮಾಡಿದರು. 2020–21ನೇ ಶೈಕ್ಷಣಿಕ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿಯಲ್ಲಿ ಶೇ. 90 ಕ್ಕಿಂತ ಹೆಚ್ಚು ಹಾಗೂ ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿದ ನೈರುತ್ಯ ರೈಲ್ವೆ ವಿಭಾಗದ ರೈಲ್ವೆ ನೌಕರರ 35 ಮಂದಿ ಪ್ರತಿಭಾವಂತ ಮಕ್ಕಳಿಗೆ ವಿದ್ಯಾರ್ಥಿ ವೇತನ ಪತ್ರ ಮತ್ತು ನಗದು ಬಹುಮಾನಗಳ ಜೊತೆಗೆ ಪ್ರತಿಭಾ ಪುರಸ್ಕಾರಗಳನ್ನು ನೀಡಿ ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಕ್ರೀಡಾಪಟುಗಳನ್ನು ಸನ್ಮಾನಿಸಲಾಯಿತು. ಅಂತಾರಾಷ್ಟ್ರೀಯ ಬಾಸ್ಕೆಟ್ ಬಾಲ್ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದ ರಾಷ್ಟ್ರೀಯ ತಂಡದ ನಾಯಕ ಬಾಂಧವ್ಯ ಮತ್ತು ರಾಷ್ಟ್ರೀಯ ಬಾಸ್ಕೆಟ್ ಬಾಲ್ ತಂಡದ ಸನ್ನಿಧಿ ಇಲಾಖೆಯ ವಿವಿಧ ವಿಭಾಗಗಳಲ್ಲಿ ಹೆಚ್ಚಿನ ಕ್ಷಮತೆಯೊಂದಿಗೆ ತಮ್ಮ ಕರ್ತವ್ಯಗಳನ್ನು ನಿಭಾಯಿಸಿ, ವಿಭಾಗದ ಕೀರ್ತಿ ಹೆಚ್ಚಿಸಿದ 40 ರೈಲ್ವೆ ನೌಕರರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ರೈಲ್ವೆ ಮೈಸೂರು ವಿಭಾಗೀಯ ವ್ಯವಸ್ಥಾಪಕ ರಾಹುಲ್ ಅಗರ್ವಾಲ್ ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಮಿತಿ, ವಿಭಾಗದ ರೈಲ್ವೆ ನೌಕರರ ಕರ್ತವ್ಯ ಮತ್ತು ನಿಷ್ಠೆಯನ್ನು ಪ್ರಶಂಸಿಸಿದರು. ನೈರುತ್ಯ ರೈಲ್ವೆ ಮಹಿಳಾ ಕಲ್ಯಾಣ ಸಮಿತಿಯ ಅಧ್ಯಕ್ಷೆ ಪೂಜಾ ಅಗರ್‌ವಾಲ್ ಇನ್ನಿತರೆ ಅಧಿಕಾರಿ, ಸಿಬ್ಬಂದಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಮರ್ಪಕ ಬಸ್ ಸೌಕರ್ಯಕ್ಕೆ ಆಗ್ರಹಿಸಿ ಪ್ರತಿಭಟನೆ



ಮೈಸೂರು,ಡಿ.22(ಎಂಟಿವೈ)– ಶಾಲಾ–ಕಾಲೇಜಿನ ವಿದ್ಯಾರ್ಥಿಗಳಿಗೆ ನಿಗದಿತ ಸಮಯಕ್ಕೆ ತರಗತಿಗೆ ಹಾಜರಾಗಲು ಗ್ರಾಮೀಣ ಹಾಗೂ ನಗರ ಭಾಗದಲ್ಲಿ ಹೆಚ್ಚಿನ ಬಸ್ ಸೌಲಭ್ಯ ಒದಗಿಸಬೇಕೆಂದು ಒತ್ತಾಯಿಸಿ ಅಖಿಲ ಭಾರತ ವಿದ್ಯಾರ್ಥಿ ಪರಿಷತ್(ಎಬಿವಿಪಿ) ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರಿನ ಕುವೆಂಪುನಗರದ ವಿವೇಕಾನಂದ ವೃತ್ತದಲ್ಲಿ ಪ್ರತಿಭಟನೆ ನಡೆಸಿದ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಮೈಸೂರು ಸಾರಿಗೆ ವಿಭಾಗದಲ್ಲಿ ಹಲವು ಸಮಸ್ಯೆಗಳಿರುವುದರಿಂದ ಗ್ರಾಮೀಣ ಭಾಗಕ್ಕೆ ಸಮಯಕ್ಕೆ ಸರಿಯಾಗಿ ಬಸ್‌ಗಳು ಬಾರದೆ ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗಲು ಸಾಧ್ಯವಾಗುತ್ತಿಲ್ಲ. ಗ್ರಾಮೀಣ ಪ್ರದೇಶಗಳಿಂದ ಬರುವ ವಿದ್ಯಾರ್ಥಿಗಳಿಗೆ ಬಸ್‌ಗಳ ಕೊರತೆಯಿದ್ದು, ವಿದ್ಯಾರ್ಥಿಗಳು ಪರದಾಡುವಂತಾಗಿದೆ. ನಗರ ವ್ಯಾಪ್ತಿಯಲ್ಲಿ ಕಾಲೇಜು ಹಾಗೂ ಹಾಸ್ಟೆಲ್‌ಗಳಿರುವ ಭಾಗದಲ್ಲಿ ಬಸ್ ಸಮಸ್ಯೆ ಹೆಚ್ಚಾಗಿದ್ದು, ಸಮಯಕ್ಕೆ ಸರಿಯಾಗಿ ಬಸ್‌ಗಳು ಬರದಿರುವುದರಿಂದ ಸಮಸ್ಯೆಯಾಗುತ್ತಿದೆ. ಹೀಗಾಗಿ ನಗರ ಹಾಗೂ ಗ್ರಾಮೀಣ ಭಾಗದಲ್ಲಿ ಬಸ್ ಸಮಸ್ಯೆ ಬಗೆಹರಿಸಿ, ಹೆಚ್ಚಿನ ಬಸ್ ಸೌಲಭ್ಯ ಒದಗಿಸಬೇಕೆಂದು ಒತ್ತಾಯಿಸಿದರು. ಈ ವೇಳೆ ಸ್ಥಳಕ್ಕೆ ಆಗಮಿಸಿದ ಸಾರಿಗೆ ಇಲಾಖೆ ವ್ಯವಸ್ಥಾಪಕ ಶ್ರೀನಿವಾಸ್ ವಿದ್ಯಾರ್ಥಿಗಳ ಮನವಿ ಸ್ವೀಕರಿಸಿ, ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸುವ ಭರವಸೆ ನೀಡಿದರು.

ಪ್ರತಿಭಟನೆಯಲ್ಲಿ ಎಬಿವಿಪಿ ರಾಜ್ಯ ಕಾರ್ಯಕಾರಿಣಿ ಸದಸ್ಯೆ ನಮಿತಾ ನಾರಾಯಣ್, ಕಾರ್ಯದರ್ಶಿ ಪ್ರಜ್ವಲ್, ಸಹ ಕಾರ್ಯದರ್ಶಿ ಆದರ್ಶ್, ಪ್ರಾಂತ ಸಂಯೋಜಕ ಚಂದ್ರಶೇಖರ್, ಕಾರ್ಯಕರ್ತರಾದ ಶ್ರೀಕಂಠ, ದಿನೇಶ್, ಚೇತನ್, ಉಲ್ಲಾಸ್, ಆಕಾಶ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಮೈಸೂರಿಗರಿಗೆ ಅವರೆ ಖಾದ್ಯ ಸವಿಯುವ ಸದವಕಾಶ

ನಾಲ್ಕು ದಿನಗಳ ಅವರೆ ಆಹಾರ ಮೇಳಕ್ಕೆ ಚಾಲನೆ



ಮೈಸೂರು,ಡಿ.22(ಎಂಟಿವೈ)– ಮೈಸೂರಿನ ಜನರಿಗೆ ಅವರೆಕಾಳಿನಿಂದ ತಯಾರಿಸಿರುವ ವಿವಿಧ ಬಗೆಯ ತಿನಿಸುಗಳ ರುಚಿ ಸವಿಯಲು ಸದವಕಾಶ ದೊರೆತಿದ್ದು, ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಇಂದಿನಿಂದ ನಾಲ್ಕು ದಿನ ಅವರೆ ಆಹಾರ ಮೇಳ ಆರಂಭವಾಯಿತು.



ಸರಸ್ವತಿಪುರಂನಲ್ಲಿನ ಅನ್ನಪೂರ್ಣೇಶ್ವರಿ ಆಹಾರ ಭಂಡಾರ ಮತ್ತು ಸಹಜ ಸಮೃದ್ಧ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಮೇಳಕ್ಕೆ ಮೇಯರ್ ಶಿವಕುಮಾರ್ ಚಾಲನೆ ನೀಡಿದರು.

ಮೇಳದಲ್ಲಿ 25 ಮಳಿಗೆಗಳಲ್ಲಿ ಅವರೇಕಾಳು ಅಕ್ಕಿರೊಟ್ಟಿ, ಪೂರಿ ಅವರೆಕಾಳು ಸಾಗು, ಅವರೆಕಾಳು ಪಡ್ಡು, ಮುದ್ದೆ–ಅವರೆಕಾಳು ಉಪ್ಸಾರು, ಮಿರ್ಚಿ ಗಿರ್ಮಿಟ್ಟು, ಜೋಳದರೊಟ್ಟಿ ಎಣ್ಣೆಗಾಯಿ, ದಾವಣಗೆರೆ ಬೆಣ್ಣೆದೋಸೆ, ಕಾಶ್ಮೀರ್ ಪಲಾವ್, ಅವರೆಕಾಳು ಪಲಾವ್ ಸೇರಿದಂತೆ ಇನ್ನಿತರ ತಿನಿಸನ್ನು ಗ್ರಾಹಕರು ಸವಿಯಬಹುದಾಗಿದ್ದು, ರೈತರು ಬೆಳೆದ ಅವರೆಕಾಯಿಯನ್ನು ಗ್ರಾಹಕರಿಗೆ ಮಾರಾಟ ಮಾಡಲು 8 ಮಳಿಗೆ ತೆರೆಯಲಾಗಿದೆ.

ಮೇಳವನ್ನು ಉದ್ಘಾಟಿಸಿ ಮಾತನಾಡಿದ ಮೇಯರ್ ಶಿವಕುಮಾರ್, ಅವರೆಕಾಳು ಮೈಸೂರು ಭಾಗದ ಜನರಿಗೆ ಇಷ್ಟ. ಇದರಲ್ಲಿ ವಿವಿಧ ಬಗೆ ಖಾದ್ಯ ತಯಾರಿಸಿ ಸವಿಯುತ್ತಾರೆ. ಹೀಗಾಗಿ, ಅವರೆ ಕಾಯಿಗೂ ಮೈಸೂರಿನ ಜನತೆಗೂ ಅವಿನಾಭಾವ ಸಂಬಂಧವಿದೆ. ಗ್ರಾಮಾಂತರ ಪ್ರದೇಶದಿಂದ ಬರುವ ತಾಜಾ ಅವರೆಗಾಗಿ ಮೈಸೂರಿನ ಗ್ರಾಹಕರು ಕಾಯುತ್ತಾರೆ. ಅವರೆ ತನ್ನ ವಿಶಿಷ್ಟ ರುಚಿ, ಸೊಗಡಿನಿಂದ ಸಾಂಪ್ರದಾಯಿಕ ಅಡುಗೆಗಳಿಗೆ ಮೆರುಗು ನೀಡುತ್ತದೆ ಎಂದರು.

ಜಂಟಿ ಕೃಷಿ ನಿರ್ದೇಶಕ ಡಾ.ಬಿ.ಎಸ್. ಚಂದ್ರಶೇಖರ್ ಮಾತನಾಡಿ, ಹೈಬ್ರಿಡ್ ಬಿತ್ತನೆ ಬೀಜದ ಹಾವಳಿಯಿಂದ ಸ್ಥಳೀಯ ಬೀಜ ತಳಿಗಳು ಕಣ್ಮರೆಯಾಗುತ್ತಿವೆ. ಈ ಹಿಂದೆ ಬಳಕೆಯಿಂದ ಅನೇಕ ಬೀಜಗಳು ಈಗ ದೊರೆಯುತ್ತಿಲ್ಲ. ಆದ್ದರಿಂದ ನಾಟಿಬೀಜ ತಳಿಗಳ ಸಂರಕ್ಷಣೆಗೆ ರೈತರು ಮುಂದಾಗಬೇಕು ಎಂದು ಸಲಹೆ ನೀಡಿದ ಅವರು, ಮೈಸೂರು ಭಾಗದಲ್ಲಿ ಅವರೆ ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಜಿಲ್ಲೆಯಲ್ಲಿ 22 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಈ ಬೆಳೆಯನ್ನು ಬೆಳೆಯಲಾಗುತ್ತಿದೆ. ಇದಕ್ಕೆ ತನ್ನದೆ ಆದ ಸೊಗಡು ಇದೆ. ಇದು ಅವರೆಕಾಯಿಯ ಸೀಜನ್ ಆಗಿದ್ದು, ಎಲ್ಲಾ ವರ್ಗದವರು ಅವರೆಕಾಳಿನ ತಿನಿಸನ್ನು ಸವಿಯಲು ಬಯಸುತ್ತಾರೆ ಎಂದರು.

ಕಾರ್ಯಕ್ರಮದಲ್ಲಿ ಪಿರಿಯಾಪಟ್ಟಣದ ಅವರೆ ಬೆಳೆಗಾರ ಜಿ.ಕೆ.ಪ್ರತಾಪ್, ಪಾಕಪ್ರವೀಣೆ ಮಂಗಳಾ ಪ್ರಕಾಶ್, ಸಹಜ ಸಮೃದ್ಧ ಜಿ.ಕೃಷ್ಣ ಪ್ರಸಾದ್, ಅನ್ನಪೂರ್ಣೇಶ್ವರಿ ಭಂಡಾರಿ ಮುಖ್ಯಸ್ಥ ಎನ್. ಮಹೇಂದ್ರ ಸುಚಾಲಕ ಕೋಮಲ್‌ಕುಮಾರ್ ಇದ್ದರು.

ಸೋನಿಯಾ ಗಾಂಧಿ ಟೀಕಿಸಿದ ಸಿ.ಟಿ.ರವಿ ಕಟೌಟ್‌ಗೆ ಮದ್ಯ, ಸಗಣಿ ನೀರಿನಿಂದ ಅಭಿಷೇಕ ಮಾಡಿ ಮೈಸೂರಲ್ಲಿ ಕಾಂಗ್ರೆಸ್ ಪ್ರತಿಭಟನೆ



ಮೈಸೂರು,ಡಿ.22(ಎಂಟಿವೈ)– ಕಾಂಗ್ರೆಸ್ ನಾಯಕಿ ಸೋನಿಯಾಗಾಂಧಿ ಅವರನ್ನು ಟೀಕಿಸಿರುವ ಮಾಜಿ ಸಚಿವ ಸಿ.ಟಿ.ರವಿ ವಿರುದ್ಧ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಿ.ಟಿ.ರವಿ ಕಟೌಟ್‌ಗೆ ಮದ್ಯ ಹಾಗೂ ಸಗಣಿ ನೀರಿನ ಅಭಿಷೇಕ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಮೈಸೂರಿನ ರಾಮಸ್ವಾಮಿ ವೃತ್ತದಲ್ಲಿ ಸಿ.ಟಿ.ರವಿ ಕಟೌಟ್‌ಗೆ ವಿವಿಧ ಬ್ರಾಂಡ್‌ನ ಮದ್ಯದಿಂದ ಅಭಿಷೇಕ ಮಾಡಿ ಕಿಡಿಕಾರಿದರು. ಬಳಿಕ ಸಗಣಿ ನೀರನ್ನು ಕಟೌಟ್ ಮೇಲೆ ಸುರಿದು ಇನ್ನಾದರೂ ನಿಮ್ಮ ಮನಸ್ಸು ಶುದ್ಧವಾಗಲಿ ಎಂದು ಹರಸಿದರು.

ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಶಾಸಕ ಸಿ.ಟಿ.ರವಿ ಬಿಜೆಪಿ ನಾಯಕರನ್ನು ಓಲೈಸಿಕೊಳ್ಳಲು ಬುದ್ಧಿ ಭ್ರಮಣೆ ಆದವರಂತೆ ವರ್ತಿಸುತ್ತಿದ್ದಾರೆ. ಕಾಂಗ್ರೆಸ್ ಅಧಿನಾಯಕಿ ಸೋನಿಯಾಗಾಂಧಿ ವಿರುದ್ಧ ಟೀಕೆ ಮಾಡುವ ಮೂಲಕ ದೊಡ್ಡ ಶೂರನೆಂದು ಪ್ರತಿಪಾದಿಸಿಕೊಳ್ಳಲು ಮುಂದಾಗಿದ್ದಾರೆ. ಸೋನಿಯಾಗಾಂಧಿ ತ್ಯಾಗಮಯಿ. ಪತಿ ರಾಜೀವ್‌ಗಾಂಧಿ ಹತ್ಯೆಯಾದಾಗ ಚಿಕ್ಕ ಮಕ್ಕಳೊಂದಿಗೆ ದೇಶ ಸೇವೆಯಲ್ಲಿ ತೊಡಗಿಸಿಕೊಂಡರು. ಎರಡು ಪ್ರಧಾನಿಯಾಗುವ ಅವಕಾಶ ಬಂದರೂ ತ್ಯಾಗ ಮಾಡಿದರು. ಆದರೆ, ಸಿ.ಟಿ.ರವಿಯಂತಹ ಸಣ್ಣ ವ್ಯಕ್ತಿಗಳು ಸೋನಿಯಾಗಾಂಧಿ ಬಗ್ಗೆ ಟೀಕೆ ಮಾಡುತ್ತಿದ್ದಾರೆ ಎಂದು ವಿಷಾದಿಸಿದರು.

ಸಿಟಿ ರವಿಯನ್ನು ಜನ ಲೂಟಿ ರವಿ ಎನ್ನುತ್ತಾರೆ. ಆದರೆ, ಅವರು ಮಾತೃ ಹೃದಯ ವಿರುವ ಸೋನಿಯಾಗಾಂಧಿ ಬಗ್ಗೆ ಅವಹೇಳನ ರೀತಿ ಮಾತನಾಡಿ ತಮ್ಮ ವ್ಯಾಪ್ರ ಮುಖ ತೋರಿಸಿದ್ದಾರೆ. ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಕುಟುಂಬದವರು. ಅಂತಹವರ ವಿರುದ್ಧ ಹಗುರವಾಗಿ ಮಾತನಾಡುವುದು ಖಂಡನೀಯ. ಸಿಟಿ ರವಿ ಕುಡಿದ ಮತ್ತಿನಲ್ಲಿ ಬಾಯಿಗೆ ಬಂದಂತೆ ಮಾತನಾಡುತ್ತಾರೆ. ಬಿಜೆಪಿಯಲ್ಲಿ ದೇಶಕ್ಕಾಗಿ ಯಾರೂ ಪ್ರಾಣತ್ಯಾಗ ಮಾಡಿಲ್ಲ. ಗಾಂಧಿಯನ್ನು ಕೊಂದ ಗೋಡ್ಸೆಯನ್ನು ಪೂಜಿಸುತ್ತಾರೆ. ಇಂತಹವರಿಗೆ ಸೋನಿಯಾಗಾಂಧಿ ಅವರ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ. ಕೂಡಲೇ ಕ್ಷಮೆಯಾಚಿಸಬೇಕು ಇಲ್ಲದಿದ್ದರೆ, ಹೋದಲ್ಲಿ ಬಂದಲ್ಲಿ ಮದ್ಯ, ಸಗಣಿ ಎರಚಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಡಾ.ಮನಮೋಹನ್‌ಸಿಂಗ್ ಅವರು ಪ್ರಧಾನಿಯಾಗಿದ್ದಾಗ ದೇಶದ ಆರ್ಥಿಕ ಪರಿಸ್ಥಿತಿ ಉತ್ತಮವಾಗಿತ್ತು. ವಿಶ್ವದಲ್ಲೇ 3ನೇ ಆರ್ಥಿಕ ಬಲಾಢ್ಯ ಸ್ಥಾನದಲ್ಲಿತ್ತು. ಈಗ 116ನೇ ಸ್ಥಾನಕ್ಕೆ ಕುಸಿದಿದೆ. ಹಸಿವಿನಲ್ಲಿ ಬಾಂಗ್ಲಾದೇಶಕ್ಕಿಂತಲೂ ಭಾರತ ಕೆಳಗಿನ ಸ್ಥಾನದಲ್ಲಿದೆ. ಇದೆಲ್ಲವನ್ನು ಮರೆಮಾಚಲು ವಿರೋಧ ಪಕ್ಷವನ್ನು ಟಾರ್ಗೆಟ್ ಮಾಡಿ, ಆರೋಪ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಧರ್, ಡಿಸಿಸಿ ಕಾರ್ಯದರ್ಶಿ ಡೈರಿ ವೆಂಕಟೇಶ್, ಪಾಲಿಕೆ ಮಾಜಿ ಸದಸ್ಯ ಎಂ.ಸುನೀಲ್, ಮುಖಂಡರಾದ ವಿಜಯ್ ಕುಮಾರ್, ಗುಣಶೇಖರ್, ವಿಶ್ವ, ಶಂಕರ್, ಹೆಚ್.ಕುಮಾರ್, ಪ್ರಚಾರ ಸಮಿತಿ ಅಧ್ಯಕ್ಷ ಅಶೋಕ್, ಫಾರುಖ್, ನಾಸೀರ್, ಕುರುಬಾರಳ್ಳಿ ಪ್ರಕಾಶ್, ಕುಮಾರ್, ಧರ್ಮೇಂದ್ರ, ಅಶೋಕಪುರಂ ಪುಟ್ಟರಾಜು, ರವಿ, ಸಂತೋಷ್, ರಾಘವೇಂದ್ರ, ಮಹದೇವು, ರಾಜೀವ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಡಿಎಂಕೆ ಸಂಸದ ಎ ರಾಜಾಗೆ ಸೇರಿದ 55 ಕೋಟಿ ಮೌಲ್ಯದ ಬೇನಾಮಿ ಆಸ್ತಿ ಜಪ್ತಿ ಮಾಡಿದ ಇಡಿ

ಕೊಯಮತ್ತೂರು, ಡಿ.22– ತಮಿಳುನಾಡಿನ ಕೊಯಮತ್ತೂರು ಜಿಲ್ಲೆಯಲ್ಲಿ ಡಿಎಂಕೆ ಸಂಸದ ಎ ರಾಜಾ ಅವರಿಗೆ ಸೇರಿದ 55 ಕೋಟಿ ರೂಪಾಯಿ ಮೌಲ್ಯದ ಬೇನಾಮಿ ಆಸ್ತಿಯನ್ನು ಅಕ್ರಮ ಹಣ ವರ್ಗಾವಣೆ ಕಾಯ್ದೆಯಡಿ ಜಪ್ತಿ ಮಾಡಿರುವುದಾಗಿ ಜಾರಿ ನಿರ್ದೇಶನಾಲಯ(ಇಡಿ) ಗುರುವಾರ ತಿಳಿಸಿದೆ.



2004ರಿಂದ 2007ರವರೆಗೆ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವರಾಗಿದ್ದ ಅವಧಿಯಲ್ಲಿ ಗುರುಗ್ರಾಮ್ ಮೂಲದ ರಿಯಲ್ ಎಸ್ಟೇಟ್ ಕಂಪನಿಗೆ ಪರಿಸರ ಅನುಮತಿ ನೀಡಲು ರಾಜಾ ಅವರೊಂದಿಗೆ ಸಂಬಂಧ ಹೊಂದಿರುವ ಕಂಪನಿ ಈ ಭೂಮಿ ಖರೀದಿಸಿದೆ ಎಂದು ಕೇಂದ್ರ ತನಿಖಾ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ. ಈ ಭೂಮಿ ರಾಜಾ ಅವರ ಬೇನಾಮಿ ಕಂಪನಿ ಹೆಸರಿನಲ್ಲಿದೆ ಎಂದು ಜಾರಿ ನಿರ್ದೇಶನಾಲಯ ತಿಳಿಸಿದೆ. 59 ವರ್ಷದ ರಾಜಾ ಪ್ರಸ್ತುತ ನೀಲಗಿರಿ ಲೋಕಸಭಾ ಕ್ಷೇತ್ರದಿಂದ ಡಿಎಂಕೆ ಸಂಸದರಾಗಿದ್ದಾರೆ.

ನೇಮಕ



ಮೈಸೂರು, ಡಿ. 22– ಜೆಡಿಎಸ್ ಪಕ್ಷದ ಮೈಸೂರು ನಗರದ ಉಪಾಧ್ಯಕ್ಷರಾಗಿ ಗೌರಿಶಂಕರ ನಗರದ ನಿವಾಸಿ ಜಿ. ಯದುನಂದ ಅವರನ್ನು ಜೆಡಿಎಸ್ ನಗರಾಧ್ಯಕ್ಷ ಕೆ ಟಿ ಚೆಲುವೇಗೌಡ ನೇಮಕ ಮಾಡಿದ್ದಾರೆ.

ಮೈಸೂರಲ್ಲಿ ನಿರ್ಮಾಣವಾಗಿದೆ ಪಾರಂಪರಿಕ ಶೈಲಿಯ 'ಹೈಟೆಕ್ ಶೌಚಾಲಯ'

ಜನವರಿ ಮೊದಲ ವಾರ ಉದ್ಘಾಟನೆ



ಮೈಸೂರು, ಡಿ.22(ಆರ್‌ಕೆ)–ಮೈಸೂರಿನ ಪುರಭವನದ ಆವರಣದಲ್ಲಿ ನಮ್ಮ ಮೈಸೂರು ಫೌಂಡೇಷನ್ (NMF)ನಿಂದ ಫ್ರೀ ಕ್ಯಾಸ್ಟ್ ಟೆಕ್ನಾಲಜಿ ಬಳಸಿ ನಿರ್ಮಿಸಿರುವ ಮೊದಲ ಪಾರಂಪರಿಕ ಶೈಲಿಯ ಹೈಟೆಕ್ ಶೌಚಾಲಯವು ಉದ್ಘಾಟನೆಗೆ ಸಿದ್ಧವಾಗಿದೆ.

ಮೈಸೂರು ಮಹಾನಗರ ಪಾಲಿಕೆಯೊಂದಿಗೆ ಮಾಡಿಕೊಂಡಿರುವ ಒಡಂಬಡಿಕೆಯಂತೆ ಕಳೆದ ಫೆಬ್ರವರಿ ಮಾಹೆಯಲ್ಲಿ ಆರಂಭವಾದ ಶೌಚಾಲಯ ಕಾಮಗಾರಿಯು ಅಂತಿಮ ಹಂತ ತಲುಪಿದ್ದು, ಪುರಭವನ ಕಟ್ಟಡದ ಪಾರಂಪರಿಕ ವಿನ್ಯಾಸದಂತೆಯೇ ನಿರ್ಮಿಸಲಾಗಿದೆ. ನಮ್ಮ ಮೈಸೂರು ಫೌಂಡೇಷನ್ ಇದೇ ಪ್ರಥಮ ಬಾರಿ ಫ್ರೀ ಕ್ಯಾಸ್ಟ್ ಟೆಕ್ನಾಲಜಿ ಬಳಸಿ ಪಾರಂಪರಿಕ ಹಾಗೂ ಸಾಂಪ್ರದಾಯಿಕ ವಿನ್ಯಾಸದೊಂದಿಗೆ ಹೈಟೆಕ್ ಶೌಚಾಲಯ ಯೋಜನೆಯನ್ನು ಗುಣಮಟ್ಟ ಕಾಪಾಡಿಕೊಂಡು ಅನುಷ್ಠಾನಗೊಳಿಸಿದೆ.

2023ರ ಜನವರಿ ಮೊದಲ ವಾರ ಈ ಸಾರ್ವಜನಿಕ ಹೈಟೆಕ್ ಶೌಚಾಲಯವನ್ನು ಉದ್ಘಾಟಿಸಿ ಸೇವೆಗೆ ಸಮರ್ಪಿಸಲು ಮೈಸೂರು ಮಹಾನಗರ ಪಾಲಿಕೆ ಸಿದ್ಧತೆ ಮಾಡಿಕೊಂಡಿದೆ. ಗಾಂಧಿ ಸ್ಕ್ವೇರ್‌ಗೆ ಹೊಂದಿಕೊಂಡಂತೆ ಪುರಭವನ ಆವರಣದಲ್ಲಿ ತಲೆ ಎತ್ತಿರುವ ಫ್ರೀ ಕ್ಯಾಸ್ಟ್ ತಂತ್ರಜ್ಞಾನದ ಕಟ್ಟಡವು 60X40 ಅಡಿ ವಿಸ್ತೀರ್ಣ ಹೊಂದಿದ್ದು, ಮಹಿಳೆಯರು ಹಾಗೂ ಪುರುಷರಿಗೆ ಪ್ರತ್ಯೇಕ ಶೌಚ, ಸ್ನಾನ ಗೃಹಗಳ ಸೌಲಭ್ಯ ಹೊಂದಿದೆ.

ಮಹಿಳೆಯರಿಗಾಗಿ 5 ಟಾಯ್ಲೆಟ್‌ಗಳು, 3 ಸ್ನಾನ ಗೃಹ, ಒಂದು ಮಕ್ಕಳಿಗೆ ಹಾಲುಣಿಸುವ ಕೊಠಡಿ ಹಾಗೂ ಒಂದು ಟಿಕೆಟ್ ಕೌಂಟರ್, ಪುರುಷರ ಭಾಗದಲ್ಲಿ 8 ಯೂರಿನಲ್ಸ್, 3 ವಾಷ್ ಬೇಸಿನ್‌ಗಳು, 4 ಸ್ನಾನ ಗೃಹಗಳು ಹಾಗೂ 12 ಟಾಯ್ಲೆಟ್‌ಗಳನ್ನು ಒದಗಿಸಲಾಗಿದ್ದು, ಎರಡೂ ವಿಭಾಗಗಳಿಗೆ ಗಾಂಧಿ ಸ್ಕ್ವೇರ್ ಕಡೆಯಿಂದ ಪ್ರವೇಶಾವಕಾಶ ಹಾಗೂ ಅಂಗವಿಕಲರಿಗಾಗಿ ರ್‍ಯಾಂಪ್‌ಗಳನ್ನು ನಿರ್ಮಿಸಲಾಗಿದೆ.

ಶೌಚಾಲಯಕ್ಕೆ 15,000 ಲೀಟರ್ ಸಾಮರ್ಥ್ಯದ ನೀರು ಸಂಗ್ರಹಣಾ ಸಂಪ್ ಹಾಗೂ ಕಟ್ಟಡದ ತಾರಸಿಯಲ್ಲಿ 5,000 ಲೀಟರ್ ಸಾಮರ್ಥ್ಯದ ಎರಡು ಓವರ್‌ಹೆಡ್ ಟ್ಯಾಂಕ್ ಅಳವಡಿಸಲಾಗಿದೆ. 1.46 ಕೋಟಿ ರೂ. ವೆಚ್ಚ ಮಾಡಿ ನಮ್ಮ ಮೈಸೂರು ಫೌಂಡೇಷನ್ ನಿರ್ಮಿಸಿರುವ ಈ ಹೈಟೆಕ್ ಪಾರಂಪರಿಕ ಶೌಚಾಲಯವನ್ನು 5 ವರ್ಷಗಳ ಕಾಲ ನಿರ್ವಹಣೆ (ಪೇ ಅಂಡ್ ಯೂಸ್ ಆಧಾರದಲ್ಲಿ) ಮಾಡಿ ನಂತರ ಸಂಸ್ಥೆಯು ಮೈಸೂರು ಮಹಾನಗರ ಪಾಲಿಕೆಗೆ ಹಸ್ತಾಂತರಿಸಲಿದೆ.

ಈ ಯೋಜನೆಗೆ ಪಾಲಿಕೆಯು ಹಣ ಖರ್ಚು ಮಾಡಿಲ್ಲ. 5 ವರ್ಷಗಳ ನಂತರ ಕಟ್ಟಡವು ಸೌಲಭ್ಯಗಳೊಂದಿಗೆ ಪಾಲಿಕೆ ವಶಕ್ಕೆ ಬರಲಿದೆ. ಅಲ್ಲಿಯವರೆಗೆ ನೀರು, ವಿದ್ಯುತ್ ಶುಲ್ಕ, ಭದ್ರತಾ ಸಿಬ್ಬಂದಿ ಹಾಗೂ ನಿರ್ವಹಣಾ ವೆಚ್ಚವನ್ನು ನಮ್ಮ ಮೈಸೂರು ಫೌಂಡೇಷನ್ ಸಂಸ್ಥೆಯೇ ಭರಿಸಲಿದೆ.

ಈ ಕುರಿತು ಪ್ರತಿಕ್ರಿಯಿಸಿರುವ ಮೇಯರ್ ಶಿವಕುಮಾರ್, ನಗರದ ಹೃದಯ ಭಾಗದ ಜನನಿಬಿಡ ಪ್ರದೇಶವಾದ ಗಾಂಧಿ ವೃತ್ತ ಮತ್ತು ಸುತ್ತಲಿನ ಪ್ರದೇಶದಲ್ಲಿ ಶೌಚ ವ್ಯವಸ್ಥೆಗಳಿಲ್ಲದೇ ಜನರು ಪರದಾಡುತ್ತಿದ್ದರಿಂದ ಪುರಭವನ ಮಾದರಿ ಪಾರಂಪರಿಕ ಶೌಚಾಲಯವನ್ನು ನಿರ್ಮಿಸಲು ಕೇಳಿಕೊಂಡ ಹಿನ್ನೆಲೆಯಲ್ಲಿ ನಿರ್ಮಾಣ, ಇಂಜಿನಿಯರಿಂಗ್ ಮತ್ತು ಆರ್ಕಿಟೆಕ್ಟ್ ಕ್ಷೇತ್ರದಲ್ಲಿ ಖ್ಯಾತಿಯಾಗಿರುವ ನಮ್ಮ ಮೈಸೂರು ಫೌಂಡೇಷನ್ ಯೋಜನೆಯನ್ನು ಕೈಗೆತ್ತಿಕೊಂಡು ಪೂರೈಸಿದೆ. 2023ರ ಜನವರಿ ಮೊದಲ ವಾರ ಉದ್ಘಾಟಿಸಿ ಸಾರ್ವಜನಿಕರ ಬಳಕೆಗೆ ಸಮರ್ಪಿಸಲಾಗುವುದು ಎಂದರು.

ಶಿಕ್ಷಣ, ಸಂಸ್ಕಾರದ ಸಂಗಮ ಸುತ್ತೂರು ಶ್ರೀಕ್ಷೇತ್ರ

ಪರಿಪೂರ್ಣ ಬದುಕಿಗೆ ಪವಿತ್ರ ಮನಸ್ಸು, ಹೃದಯ ವೈಶಾಲ್ಯತೆ ಬೇಕು: ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎನ್.ಮಂಜುನಾಥ್



ನಂಜನಗೂಡು, ಡಿ.22– ಮನುಷ್ಯನ ಪರಿಪೂರ್ಣ ಬದುಕಿಗೆ ಪದವಿಗಳಲ್ಲ, ಪವಿತ್ರ ಮನಸ್ಸು, ಹೃದಯ ವೈಶಾಲ್ಯತೆ ಬೇಕಾಗಿದೆ. ಶಿಕ್ಷಣ ಮತ್ತು ಸಂಸ್ಕಾರದ ಸಂಗಮ ಸುತ್ತೂರು ಕ್ಷೇತ್ರ ಎಂದು ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

ಶ್ರೀಕ್ಷೇತ್ರ ಸುತ್ತೂರಿನಲ್ಲಿ ನಡೆದ ಶ್ರೀ ಶಿವ ರಾತ್ರೀಶ್ವರ ಶಿವಯೋಗಿಗಳ 1063ನೇ ಜಯಂತಿಯಲ್ಲಿ ಮಾತನಾಡಿದ ಅವರು, ಶರೀರದ ತೂಕ ಹೆಚ್ಚಾದರೆ ವ್ಯಾಯಾಮ ಮಾಡಬೇಕು. ಮನಸ್ಸಿನ ತೂಕ ಹೆಚ್ಚಾದರೆ ಧ್ಯಾನ ಮಾಡಬೇಕು. ಜೇಬಿನ ತೂಕ ಹೆಚ್ಚಾದರೆ ದಾನ ಮಾಡಬೇಕು. ಪದವಿ, ಪುರಸ್ಕಾರಗಳು ಬಂದಾಗ ನಮ್ಮ ಮೇಲಿನ ಜವಾಬ್ದಾರಿ ಎಂಬ ತೂಕ ಹೆಚ್ಚಾಗುತ್ತದೆ. ಈ ಜವಾಬ್ದಾರಿ ತೂಕ ಹೆಚ್ಚಾದಂತೆ ಇನ್ನೂ ಹೆಚ್ಚಿನ ಸಾಧನೆಗೆ ಪ್ರೇರಣೆಯಾಗಲಿದೆ. ಪ್ರಶಸ್ತಿ ತೂಕ ಹೆಚ್ಚಾದಾಗ ನಾವು ಹೆಚ್ಚು ಕೆಲಸ ಮಾಡಬೇಕಾಗುತ್ತದೆ ಎಂದರು.

ದೇಶದ ಸಾಕ್ಷರತೆ ಸಂಖ್ಯೆ ಹೆಚ್ಚಾಗಿದೆ. ಪದವೀಧರ ಸಂಖ್ಯೆಯೂ ಹೆಚ್ಚಾಗಿದೆ. ಮುಖ್ಯವಾಗಿ ಹೃದಯವಂತರ ಸಂಖ್ಯೆ ಹೆಚ್ಚಾಗಬೇಕು. ಆಗ ಸಮಾಜಕ್ಕೆ ಏನಾದರೂ ಕೊಡುಗೆ ಕೊಟ್ಟಂತೆ. ಮನುಷ್ಯ ಸಾಧನೆಯಿಲ್ಲದೆ ಸತ್ತರೆ ಸಾವಿಗೆ ಅವಮಾನ. ಆದರ್ಶವಿಲ್ಲದೆ ಬದುಕಿದರೆ ಬದುಕಿಗೆ ಅವಮಾನ. ನಮ್ಮ ನೋವು ನಮಗೆ ಗೊತ್ತಾದರೆ ನಾವು ಬದುಕಿದ್ದೇವೆ ಎಂದು ಅರ್ಥ. ಬೇರೆಯವರ ನೋವು ಗೊತ್ತಾದರೆ ನಾವು ಮನುಷ್ಯರಾಗಿದ್ದೇವೆ ಎಂದರ್ಥ. ಸಾಧನೆ ಮಾಡಬೇಕಾದರೆ ದೊಡ್ಡ ದೊಡ್ಡ ಹುದ್ದೆಯಲ್ಲಿದ್ದರೆ ಮಾತ್ರ ಮಾಡಬೇಕೆಂಬ ಮನೋಭಾವ ಸರಿಯಲ್ಲ. ಅವರವರ ಕ್ಷೇತ್ರದಲ್ಲಿ ಸಣ್ಣ ಹುದ್ದೆ ಇದ್ದರೂ ದೊಡ್ಡ ಸಾಧನೆ ಮಾಡಬಹುದು. ನಾವು ಬೇರೆಯವರ ಬದುಕಿನಲ್ಲಿ ನೆನಪು ಉಳಿಯುವಂತಹ ಕೆಲಸ ಮಾಡಿದರೆ ಉತ್ತಮ ಹೆಜ್ಜೆಗಳನ್ನು ಬಿಟ್ಟು ಹೋದರೆ ಅದೇ ಒಂದು ಮಹತ್ತರ ಸಾಧನೆ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಹಾಗೂ ಎನ್‌ಇಪಿ ರಾಜ್ಯ ಸಂಯೋಜಕ ಮದನ್‌ಗೋಪಾಲ್ ಮಾತನಾಡಿ, ರಾಷ್ಟ್ರೀಯ ಶಿಕ್ಷಣ ನೀತಿ ಭಾರತೀಯ ಸಂಸ್ಕೃತಿ, ಸಂಸ್ಕಾರ, ವೈವಿಧ್ಯತೆಯನ್ನು ಕೇಂದ್ರೀಕರಿಸಿ ಮಾಡುವ ನೀತಿಯಾಗಿದೆ. ಕೆಲವು ರಾಜ್ಯಗಳಲ್ಲಿ ಈ ನೀತಿ ಅನುಷ್ಠಾನಗೊಂಡಿದೆ. ಎಷ್ಟೇ ಕಾಲ ಬದಲಾದರೂ ಮಾನವೀಯತೆ ಮರೆಯಬಾರದು. ಮಾಹಿತಿ ತಂತ್ರಜ್ಞಾನ ಹೆಚ್ಚಾದಂತೆ ಸಂಬಂಧಗಳು ದೂರವಾಗುತ್ತಿವೆ. ಮಾಹಿತಿಯಿಂದ ಜ್ಞಾನ ಬರುವುದಿಲ್ಲ. ಆಧ್ಯಾತ್ಮಿಕತೆ ಮೂಲದೊಂದಿಗೆ ಶಿಕ್ಷಣವಿದ್ದರೆ ಅದೇ ನಿಜವಾದ ಶಿಕ್ಷಣವಾಗಲಿದೆ ಎಂದರು.

ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮತ್ತು ರಾಮಕೃಷ್ಣ ಆಶ್ರಮದ ಮುಕ್ತಿದಾನಂದ ಸ್ವಾಮೀಜಿ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಇದೇ ವೇಳೆ ಶಿವರಾತ್ರೀಶ್ವರ ಪಂಚಾಂಗ ಹಾಗೂ 2023ರ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಯಿತು.

ಸಮಾರಂಭದಲ್ಲಿ ರಾಜ್ಯೋತ್ಸವ ಪ್ರಶಸ್ತಿ ಪಡೆದ ಪ್ರೊ.ಕೃಷ್ಣೇಗೌಡ, ಸೋಲಿಗರ ಮಾದಮ್ಮ, ಹೆಚ್.ಆರ್.ಶ್ರೀಶ, ಮದನ್‌ಗೋಪಾಲ್, ಡಿ. ಮಾದೇಗೌಡ, ಎಂ.ಜಿ.ನಾಗರಾಜ್, ಚಂದ್ರಶೇಖರ್ ನಾರಣಾಪುರ, ದಾನಯ್ಯ ಗಣಾಚಾರಿ, ರಾಮಕೃಷ್ಣ ಆಶ್ರಮ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪಡೆದ ಡಾ.ವಸುಂಧರಾ ದೊರೆಸ್ವಾಮಿ, ರವೀಂದ್ರ ಹಾವನೂರ್, ವಿದ್ವಾನ್ ಆರ್.ಕೆ.ಪದ್ಮನಾಭ, ಎಚ್.ಆರ್.ಲೀಲಾವತಿ, ವಿನಾಯಕ ತೊರವಿ, ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಪಡೆದ ಗುರುರಾಜ್, ಶಿವರುದ್ರಸ್ವಾಮಿ, ಡಾ.ರಾಮೇಶ್ವರಪ್ಪ ಡಾ.ಜಿ.ಶಂ.ಪ ತಜ್ಞ ಪ್ರಶಸ್ತಿ ಪಡೆದ ಶಿವರಾಮು, ಗೀತಾಕ ಪ್ರಶಸ್ತಿ ಪಡೆದ ಜಿ.ಎಂ.ಹೆಗಡೆ, ಮಯೂರ್ ವಾಲ್ಕೆ ಪ್ರಶಸ್ತಿ ಪಡೆದ ಎಸ್.ಎಚ್. ಸುಭಾಷ್, ಆದಿಕವಿ ಪುರಸ್ಕಾರ ಪಡೆದ ಬಾಬು ಕೃಷ್ಣಮೂರ್ತಿ, ಬೆಂಗಳೂರು ಗೌರವ ಡಾಕ್ಟರೇಟ್ ಪಡೆದ ಅಮರನಾಥಗೌಡ, ಹಂಪಿ ಕನ್ನಡ ವಿವಿ ನಾಡೋಜ ಗೌರವ ಪಡೆದ ಡಾ.ಸಿ.ಎನ್.ಮಂಜುನಾಥ್, ಕರ್ನಾಟಕ ಕ್ರೀಡಾರತ್ನ ಪ್ರಶಸ್ತಿ ಪಡೆದ ವಿದ್ವಾನ್ ನಿಂಗಪ್ಪ ಮುದ್ದೇನೂರ್, ಮಲೆಯೂರು ಗುರುಸ್ವಾಮಿ, ರಾಮಮೂರ್ತಿ ರಾವ್ ಅವರನ್ನು ಸನ್ಮಾನಿಸಲಾಯಿತು.

ಇದಕ್ಕೂ ಮುನ್ನ ಶಿವರಾತ್ರಿ ಶಿವಯೋಗಿಗಳ ಉತ್ಸವ ಮೂರ್ತಿಯನ್ನು ಕರ್ತೃ ಗದ್ದುಗೆಯಲ್ಲಿ ಪ್ರತಿಷ್ಠಾಪಿಸಿ ವಿವಿಧ ಪೂಜಾ ಕೈಂಕರ್ಯ ನೆರವೇರಿಸಿದ ಬಳಿಕ ಅಲಂಕೃತ ಸಾರೋಟ್‌ನಲ್ಲಿ ವಿವಿಧ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ಮೂಲಕ ಗ್ರಾಮದ ಪ್ರಮುಖ ರಸ್ತೆಗಳಲ್ಲಿ ಸಾಗಿ ಶ್ರೀಮಠ ತಲುಪಿತು.

ಕೋವಿಡ್ ದೂರವಾಗಿಲ್ಲ

ನಮ್ಮ ದೇಶದಲ್ಲೂ ಮುಂದಿನ 2 ಅಥವಾ 3 ತಿಂಗಳಲ್ಲಿ ಕೋವಿಡ್ ಎದುರಾಗಲಿದೆ. ಇದು ಹೊಸ ಓಮಿಕ್ರಾನ್ ರೂಪಾಂತರಿ ಅಲ್ಲ. ಹಿಂದೆ ಇದ್ದ ಓಮಿಕ್ರಾನ್ ವೈರಸ್‌ನ ಉಪತಳಿಯಷ್ಟೆ. ಯಾವುದೇ ಆತಂಕ ಪಡುವ ಅಗತ್ಯವಿಲ್ಲ. ಆದರೂ ಎಲ್ಲರೂ ಮೈಮರೆಯದೆ ಮುನ್ನೆಚ್ಚರಿಕೆ ವಹಿಸಬೇಕು. ನಮ್ಮ ಬಾಳಿನ ಸಂಗಾತಿ ಮಾಸ್ಕ್ ಆಗಬೇಕು. ಚೀನಾ, ಜಪಾನ್, ಆಸ್ಟ್ರೇಲಿಯಾ, ಬ್ರೆಜಿಲ್, ಅಮೆರಿಕಾ ದೇಶಗಳಲ್ಲಿ ಕೋವಿಡ್ ಹೆಚ್ಚಾಗುತ್ತಿದೆ. ಇದಕ್ಕೆ ಕಾರಣ ವ್ಯಾಕ್ಸಿನೇಷನ್ ತೆಗೆದುಕೊಳ್ಳದೆ ಇರುವುದು. ಆದರೆ ನಮ್ಮ ದೇಶದಲ್ಲಿ ಶೇ.95ರಷ್ಟು ಜನರು 1 ಮತ್ತು 2ನೇ ಡೋಸ್ ವ್ಯಾಕ್ಸಿನೇಷನ್ ತೆಗೆದುಕೊಂಡಿದ್ದಾರೆ. ವ್ಯಾಕ್ಸಿನೇಷನ್‌ನಿಂದ ಯಾವುದೇ ಅಡ್ಡ ಪರಿಣಾಮಗಳಿಲ್ಲ. 3ನೇ ಡೋಸ್ ಪಡೆಯದವರು ಡೋಸ್ ತೆಗೆದುಕೊಳ್ಳಲು ಮುಂದಾಗಬೇಕು.

–ಡಾ.ಸಿ.ಎನ್.ಮಂಜುನಾಥ್, ಜಯದೇವ ಆಸ್ಪತ್ರೆ ನಿರ್ದೇಶಕ.

ಗೋಮಾಳ ನಿಗದಿಗೆ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ

ಶಾಸಕ ಮಂಜುನಾಥ್ ಪ್ರಸ್ತಾಪಕ್ಕೆ ಕಂದಾಯ ಸಚಿವ ಅಶೋಕ್ ಭರವಸೆ



ಹುಣಸೂರು, ಡಿ.22– ಸರ್ಕಾರ ಕಾಯ್ದಿರಿಸಿದ ಗೋಮಾಳ ಭೂಮಿ ಅಕ್ರಮ ಸಕ್ರಮ ಸಾಗುವಳಿಗಾಗಿ ಫಾರಂ ನಂ.53 ಮತ್ತು 57 ರಲ್ಲಿ ಕಂದಾಯ ಇಲಾಖೆಗೆ ಅರ್ಜಿ ಸಲ್ಲಿಸಿರುವ ಹುಣಸೂರು ತಾಲೂಕಿನ ರೈತರಿಗೆ ಸಾಗುವಳಿ ಮಂಜೂರಾತಿ ಬಗ್ಗೆ ಬೆಳಗಾವಿ ಸುವರ್ಣ ಸೌಧದಲ್ಲಿ ನಡೆಯುತ್ತಿರುವ ಚಳಿಗಾಲದ ಅಧಿವೇಶನದಲ್ಲಿ ಶಾಸಕ ಹೆಚ್.ಪಿ.ಮಂಜುನಾಥ್ ಕಂದಾಯ ಸಚಿವ ಆರ್.ಅಶೋಕ್ ಅವರಲ್ಲಿ ಮಾಹಿತಿ ಕೋರಿದರು.

ಶಾಸಕ ಮಂಜುನಾಥ್ ಅವರು, ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 94ಬಿ ಅಡಿ ತಾಲೂಕು ಅಕ್ರಮ–ಸಕ್ರಮ ಸಮಿತಿ ಸಭೆಯಲ್ಲಿ ನಮೂನೆ–50 ಮತ್ತು ನಮೂನೆ–53 ರಲ್ಲಿ ಬಾಕಿ ಇರುವ ಅರ್ಜಿಗಳಿಗೆ ಪರಿಶೀಲನಾ ಸಮಯದಲ್ಲಿ ಸಕ್ರಮ ಸಮಿತಿಗೆ ಕೋರಿರುವ ಜಮೀನು ಗೋಮಾಳ ಜಮೀನಾಗಿದ್ದಲ್ಲಿ, ಒಂದೇ ಬಾರಿ ಕ್ರಮದ ಆಧಾರದ ಮೇಲೆ ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ಅಧ್ಯಾಯ ಹಾಗೂ ನಿಯಮ 97 (4–0) ರನ್ವಯ ಅನಧಿಕೃತ ಕೃಷಿ ಭೂಮಿ ಸಕ್ರಮಗೊಳಿಸುವ ಉದ್ದೇಶಗಳಿಗಾಗಿ ಪರಿಗಣಿಸಿ, ಅಪೇಕ್ಷಿಸಿ ಮಂಜೂರು ಮಾಡಬಹುದೇ? ಈ ಕುರಿತು ಪೂರ್ಣ ಮಾಹಿತಿ ಒದಗಿಸುವಂತೆ ಕೋರಿದರು.

ಇದಕ್ಕೆ ಉತ್ತರಿಸಿದ ಕಂದಾಯ ಸಚಿವ ಆರ್.ಅಶೋಕ್ ಈಗಾಗಲೇ ಜಿಲ್ಲಾಧಿಕಾರಿಗಳು ಉಚಿತ ಗೋಮಾಳದ ವಿಸ್ತೀರ್ಣ ನಿಗದಿಪಡಿಸಿದ ನಂತರವೂ ಅಂತಹ ಭೂಮಿ ಉಚಿತ ಮೇವನ್ನು ಒದಗಿಸಲು ಲಭ್ಯವಿಲ್ಲದಿದ್ದಾಗ ಅಂತಹ ಸಕ್ರಮವನ್ನು ನಿಯಮ 97(4) ರನ್ವಯ ಒಂದೇ ಬಾರಿ ಕ್ರಮದ ಆಧಾರದ ಮೇಲೆ ಕರ್ನಾಟಕ ಭೂ ಕಂದಾಯ ನಿಯಮಗಳು 1966ರ ಅಧ್ಯಾಯ–ಎ ಅನಧಿಕೃತ ಕೃಷಿಯನ್ನು ಸಕ್ರಮಗೊಳಿಸುವ ಉದ್ದೇಶಗಳಿಗಾಗಿ ಅಂದರೆ ನಮೂನೆ–50 ಮತ್ತು ನಮೂನೆ– 53ರಲ್ಲಿ ಬಾಕಿ ಇರುವ ಅರ್ಜಿಗಳಿಗೆ ಪರಿಗಣಿಸಬಹುದಾಗಿದೆ ಎಂದು ಉತ್ತರಿಸಿದರು.

ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 97(1)ರನ್ವಯ ಜಿಲ್ಲಾಧಿಕಾರಿ, ಗೋಮಾಳ ವಿಸ್ತೀರ್ಣ ನಿಗದಿಪಡಿಸಿದ ನಂತರ ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿ ಮುಂದೆ ಅರ್ಜಿಗಳನ್ನು ಮಂಡಿಸಬೇಕಾಗುತ್ತದೆ. ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 97(1)ರನ್ವಯ ಗೋಮಾಳ ಜಮೀನನ್ನು ನಿಗದಿಪಡಿಸುವ ಬಗ್ಗೆ ಜಿಲ್ಲಾಧಿಕಾರಿಗೆ ನಿರ್ದೇಶನ ನೀಡಲಾಗಿದೆ ಎಂದು ಉತ್ತರ ನೀಡಿದ್ದಾರೆ.

ರಾಜ್ಯದ ಅಭಿವೃದ್ಧಿಗಾಗಿ ಜೆಡಿಎಸ್ ಅಧಿಕಾರಕ್ಕೆ



ಮಲ್ಕುಂಡಿ, ಡಿ.22– ರಾಜ್ಯದ ಅಭಿವೃದ್ಧಿಗಾಗಿ ಜೆಡಿಎಸ್ ಅಧಿಕಾರಕ್ಕೆ ಬರಲಿದೆ ಎಂದು ನಂಜನಗೂಡು ಕ್ಷೇತ್ರದ ಜೆಡಿಎಸ್ ಟಿಕೆಟ್ ಆಕಾಂಕ್ಷಿ ಆರ್.ಮಾದೇಶ್ ತಿಳಿಸಿದರು.

ನಂಜನಗೂಡು ವಿಧಾನಸಭಾ ಕ್ಷೇತ್ರದ ಹೆಡಿಯಾಲದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ ಪ್ರತಿಯೊಂದು ಕುಟುಂಬ ಸ್ವಾವಲಂಬಿಯಾಗಿ ಬದುಕಲು, ಆರೋಗ್ಯ, ಉದ್ಯೋಗ, ಶಿಕ್ಷಣ, ಕೃಷಿ ಮತ್ತು ನೀರಾವರಿ ಯೋಜನೆಗಳ ಮೂಲಕ ರಾಜ್ಯದ ಸಮಗ್ರ ಅಭಿವೃದ್ಧಿಗೆ 2023ಕ್ಕೆ ಜೆಡಿಎಸ್ ಸ್ಪಷ್ಟ ಬಹುಮತದಿಂದ ಅಧಿಕಾರಕ್ಕೆ ಬರಲಿದೆ. ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಜಾತಿ ರಾಜಕಾರಣ ಮಾಡುತ್ತಿವೆ. ಜೆಡಿಎಸ್ ಪಕ್ಷ ಜಾತ್ಯತೀತ ನಿಲುವು ಹೊಂದಿದೆ. ಹೀಗಾಗಿ ಕ್ಷೇತ್ರದ ಯುವಕರು ಸಂಘಟಿತರಾಗಿ ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಅಧಿಕಾರಕ್ಕೆ ತಂದು ರೈತ ಕುಟುಂಬದಿಂದ ಬಂದಿರುವ ಮಾಜಿ ಸಿಎಂ ಕುಮಾರಸ್ವಾಮಿ ಅವರನ್ನು ಮತ್ತೊಮ್ಮೆ ಮುಖ್ಯಮಂತ್ರಿಯಾಗಿ ಮಾಡಿ ರಾಜ್ಯದ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಬೇಕು. ಆದ್ದರಿಂದ ಜೆಡಿಎಸ್ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಿ ಅಧಿಕಾರಕ್ಕೆ ತರಲು ಕಾರ್ಯಕರ್ತರು ಶ್ರಮಿಸಬೇಕಿದೆ ಎಂದರು. ತಾಪಂ ಮಾಜಿ ಸದಸ್ಯ ಸುರೇಶ್, ಮುಖಂಡ ಮುಜಿ, ಬಾಬು, ಬಂಗಾರಿ, ಸಂಪತ್, ಮಹದೇವಸ್ವಾಮಿ ಸೇರಿದಂತೆ ಇತರರಿದ್ದರು.

ಚಿರತೆ ಸೆರೆ: ಗ್ರಾಮಸ್ಥರ ಆತಂಕ ದೂರ



ತಿ.ನರಸೀಪುರ, ಡಿ.22– ಕಳೆದ 20 ದಿನಗಳಿಂದ ತಾಲೂಕಿನ ಮುತ್ತತ್ತಿ ಗ್ರಾಮಸ್ಥರು ಹಾಗೂ ಅರಣ್ಯ ಇಲಾಖೆಗೆ ಆತಂಕವೊಡ್ಡಿದ್ದ ಚಿರತೆ ಬುಧವಾರ ರಾತ್ರಿ ಬೋನಿಗೆ ಬಿದ್ದಿದೆ.

ಗ್ರಾಮದಲ್ಲಿ ಚಿರತೆ ಓಡಾಡುತ್ತಿದೆ ಎಂಬ ಗ್ರಾಮಸ್ಥರ ದೂರಿನ ಮೇರೆಗೆ ಅರಣ್ಯ ಇಲಾಖೆ ಮುತ್ತತ್ತಿ ಗ್ರಾಮದ ದಿಲೀಪ್ ಎಂಬುವರ ತೋಟದಲ್ಲಿ ಬೋನ್ ಇಟ್ಟಿತ್ತು. ಬೋನಿನೊಳಗೆ ಕೋಳಿ ಕಟ್ಟಿ ಚಿರತೆ ಸೆರೆಗೆ ಬಲೆ ಹಾಕಲಾಗಿತ್ತು. ನಿನ್ನೆ ರಾತ್ರಿ 8ರ ಸಮಯದಲ್ಲಿ ಕೋಳಿ ತಿನ್ನಲು ಬಂದ ಸುಮಾರು ಎರಡೂವರೆ ವರ್ಷದ ಚಿರತೆ ಬೋನಿನೊಳಗೆ ಬಂಧಿಯಾಗಿದೆ.

ಚಿರತೆ ಸೆರೆ ಬಗ್ಗೆ ಮಾಹಿತಿ ನೀಡಿದ ವಲಯ ಅರಣ್ಯಾಧಿಕಾರಿ ಮಂಜುನಾಥ್ ಕೆಲ ದಿನಗಳಿಂದ ಈ ಭಾಗದಲ್ಲಿ ಚಿರತೆ ಓಡಾಡುತ್ತಿದೆ ಎಂದು ಗ್ರಾಮಸ್ಥರು ಮಾಹಿತಿ ನೀಡಿದ್ದರು. ಹಾಗಾಗಿ ಬೋನು ಇಟ್ಟು ಚಿರತೆ ಸೆರೆಗೆ ಬಲೆ ಬೀಸಲಾಗಿತ್ತು. ಸುಮಾರು 2 ತಿಂಗಳಿಂದ ಕೆಲವೆಡೆ ಬೋನುಗಳನ್ನು ಅಳವಡಿಸಿ ವೈಜ್ಞಾನಿಕ ತಂತ್ರಜ್ಞಾನದ ಮೂಲಕ ಚಿರತೆ ಸೆರೆಗೆ ಕಾರ್ಯಾಚರಣೆ ರೂಪಿಸಲಾಗಿದೆ. ಚಿರತೆ ಬೋನಿಗೆ ಬೀಳುವ ಮೂಲಕ ಆತಂಕವನ್ನು ದೂರ ಮಾಡಿದೆ ಎಂದರು.

ವಿಧಾನಸಭೆಯಲ್ಲಿ ಚಿರತೆ ಸದ್ದು



ತಿ.ನರಸೀಪುರ, ಡಿ.22– ತಾಲೂಕಿನಲ್ಲಿ ಚಿರತೆ ಹಾವಳಿ ಹೆಚ್ಚಾಗಿದ್ದು, ಈಗಾಗಲೇ ಒಬ್ಬ ಯುವತಿ ಹಾಗೂ ಯುವಕ ಚಿರತೆ ಹಾವಳಿಗೆ ಬಲಿಯಾಗಿದ್ದಾರೆ. ದಯವಿಟ್ಟು ಚಿರತೆ ಸೆರೆ ಹಿಡಿಯುವ ಮೂಲಕ ಸಾರ್ವಜನಿಕರನ್ನು ರಕ್ಷಣೆ ಮಾಡುವುದು ಜೊತೆಗೆ ಪರಿಹಾರವನ್ನು ಹೆಚ್ಚಿಸುವಂತೆ ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್ ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಅಶ್ವಿನ್‌ಕುಮಾರ್ ಬೇಡಿಕೆಗೆ ಹಲವಾರು ಶಾಸಕರು ಧ್ವನಿಗೂಡಿಸಿದರು. ಅರಣ್ಯ ಇಲಾಖೆ ಅಧಿಕಾರಿಗಳು ಒಂದು ಕಡೆ ಚಿರತೆ ಹಿಡಿದು ಮತ್ತೊಂದು ಕಡೆ ಬಿಡುತ್ತಿರುವುದರಿಂದ ಚಿರತೆ ಹಾವಳಿ ಒಂದು ಕ್ಷೇತ್ರದಿಂದ ಮತ್ತೊಂದು ಕ್ಷೇತ್ರಕ್ಕೆ ರವಾನೆ ಆಗುತ್ತಿದೆ ಎಂದು ಮಾಗಡಿ ಶಾಸಕ ಮಂಜುನಾಥ್ ಸದನದ ಗಮನಕ್ಕೆ ತಂದರು. ಶಾಸಕ ಡಾ. ಯತೀಂದ್ರ ಅವರು ಚಿರತೆಗಳ ವಾಸಸ್ಥಾನ ಕಡಿಮೆಯಾಗುತ್ತಿದೆ. ಅವುಗಳು ಆಹಾರ ಅರಸಿ ಜನವಸತಿ ಪ್ರದೇಶಗಳತ್ತ ಬರುತ್ತಿವೆ. ಶೀಘ್ರ ಚಿರತೆಧಾಮ ಸ್ಥಾಪಿಸಿ ಅಲ್ಲಿಗೆ ಸೆರೆಯಾದ ಚಿರತೆಗಳನ್ನು ಬಿಡುವಂತೆ ಅರಣ್ಯ ಖಾತೆ ಹೊಂದಿರುವ ಮುಖ್ಯಮಂತ್ರಿಗಳನ್ನು ಒತ್ತಾಯಿಸಿದರು.

ಗೃಹಸಚಿವ ಆರಗ ಜ್ಞಾನೇಂದ್ರ ಅವರು, ಚಿರತೆ ಹಾವಳಿ ಕುರಿತು ಸಿಎಂ ಗಮನಕ್ಕೆ ತಂದು ಮುಂದಿನ ಕ್ರಮ ಜರುಗಿಸಲು ಸರ್ಕಾರ ಮುಂದಾಗಲಿದೆ ಎಂದು ತಿಳಿಸಿದರು.

ವಿಜಯ್‌ಗೆ ಅರಕಲಗೂಡು ಕಾಂಗ್ರೆಸ್ ಟಿಕೆಟ್‌ಗೆ ಮನವಿ



ಸಾಲಿಗ್ರಾಮ, ಡಿ.22– ಹಾಸನ ಜಿಲ್ಲೆ ಅರಕಲಗೂಡು ವಿಧಾನಸಭಾ ಕ್ಷೇತ್ರದಿಂದ 2023ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೆಚ್.ಎನ್.ವಿಜಯ್ ಅವರಿಗೆ ಅವಕಾಶ ಕಲ್ಪಿಸಿ ಕೊಡಬೇಕೆಂದು ತಾಪಂ ಮಾಜಿ ಅಧ್ಯಕ್ಷ ಹೆಚ್.ಟಿ.ಮಂಜುನಾಥ್ ವರಿಷ್ಠರಲ್ಲಿ ಮನವಿ ಮಾಡಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದ ವರ್ಗ ಉಪ್ಪಾರ ಸಮುದಾಯಕ್ಕೆ ಸೇರಿರುವ ಹೆಚ್.ಎನ್.ವಿಜಯ್‌ಗೆ ಟಿಕೆಟ್ ನೀಡಿದರೆ ಸಾಮಾಜಿಕ ನ್ಯಾಯ ಕಲ್ಪಿಸಿದಂತಾಗುತ್ತದೆ ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ಕೆಡಗ ನಟರಾಜ್ ಮಾತನಾಡಿ, ಹೆಚ್.ಎನ್.ವಿಜಯ್ ಅವರು ಅರಕಲಗೂಡು ವಿಧಾನಸಭಾ ಕ್ಷೇತ್ರದಲ್ಲಿ ಎಲ್ಲಾ ಸಮುದಾಯದ ಜತೆ ಉತ್ತಮ ಬಾಂಧವ್ಯ ಹೊಂದಿದ್ದು, ಕ್ಷೇತ್ರದ ಎಲ್ಲೆಡೆ ವಿವಿಧ ಸಾಮಾಜಿಕ ಸೇವಾ ಕಾರ್ಯ ಮಾಡಿಕೊಂಡು ಬರುತ್ತಿದ್ದಾರೆ. ಆ ಮೂಲಕ ಕ್ಷೇತ್ರದ ಜನರ ಸೇವೆ ಮಾಡುತ್ತಿರುವ ವಿಜಯ್ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದರೆ ಮೈಸೂರು, ಹಾಸನ, ಚಾಮರಾಜನಗರ, ಮಂಡ್ಯ ಜಿಲ್ಲೆಯ ಹಲವು ವಿಧಾನಸಭಾ ಕ್ಷೇತ್ರಗಳಲ್ಲಿ ಪಕ್ಷದ ಅಭ್ಯರ್ಥಿಗಳ ಗೆಲುವಿಗೆ ಸಹಕಾರಿಯಾಗಲಿದೆ ಎಂದರು.

ಕೃಷ್ಣರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಮುಖಂಡ ಡಿ.ರವಿಶಂಕರ್ ನೇತೃತ್ವದಲ್ಲಿ ನಡೆಯುತ್ತಿರುವ ಜನಾಶೀರ್ವಾದ ಯಾತ್ರೆಗೆ ತಾಲೂಕಿನಲ್ಲಿ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದ್ದು, ಕ್ಷೇತ್ರದ ಮತದಾರರು ಮುಂದಿನ ಚುನಾವಣೆಯಲ್ಲಿ ಅವರನ್ನು ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡ ಬಲರಾಮೇಗೌಡ, ತಾಪಂ ಮಾಜಿ ಸದಸ್ಯ ಸಣ್ಣಪ್ಪ ಸಾಲಿಗ್ರಾಮ ಪಿಎಸಿಎಸ್ ಉಪಾಧ್ಯಕ್ಷ ಮಂಜುನಾಥ್, ಮುಖಂಡ ಅರುಣ್‌ರಾಜ್, ಗುಣಪಾಲ್‌ಜೈನ್, ಎಸ್‌ಸಿ ಘಟಕದ ಅಧ್ಯಕ್ಷ ಕಂಠಿ ಕುಮಾರ್, ಮಾಜಿ ಅಧ್ಯಕ್ಷ ಜವರಯ್ಯ, ಗ್ರಾಪಂ ಸದಸ್ಯ ಡಿಶ್ ರವಿ, ಮುಖಂಡರಾದ ತಮ್ಮಣ್ಣ, ಹರೀಶ್, ವಾಸಿಂ ಪಾಷಾ, ಬಾಬು, ರವಿ, ಧರ್ಮ ಸೇರಿದಂತೆ ಹಲವರಿದ್ದರು.



ಬೆಟ್ಟದಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಪಟೇಲ್ ನಟೇಶ್ ಅವಿರೋಧವಾಗಿ ಆಯ್ಕೆಯಾದರು. ಈ ವೇಳೆ ಚುನಾವಣಾಧಿಕಾರಿ ಸುರೇಶ್, ತಾಲೂಕು ಜೆಡಿಎಸ್ ರೈತ ಘಟಕದ ಅಧ್ಯಕ್ಷ ಬಿ.ಜೆ.ದೇವರಾಜು, ಧರಣೇಶ್, ಗಿರೀಶ್, ಗಿರಿಗೌಡ, ಉಪಾಧ್ಯಕ್ಷ ಶಂಕರಶೆಟ್ಟಿ, ನಿರ್ದೇಶಕರಾದ ದಿಲೀಪ್, ಅಕ್ಬರ್ ಷರೀಫ್, ಹನುಮನಾಯಕ, ಸುಶೀಲಮ್ಮ, ಜಯಮ್ಮ, ಸಿಇಓ ವಿಜಯ್, ಮುಖಂಡರಾದ ಗ್ರಾಪಂ ಸದಸ್ಯ ರಾಜಶೇಖರ್ ಹಾಗೂ ಈಶ್ವರಚಾರ್, ಹಾಲು ಉತ್ಪಾದಕರ ಸಂಘದ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಜೆಡಿಎಸ್ ಮುಖಂಡರಾದ ಉದಯ, ಗ್ರಾಪಂ ಅಧ್ಯಕ್ಷೆ ಮಂಜುಳ, ವಿದ್ಯಾಶಂಕರ್, ಬಿ.ಎಸ್.ನಾಗರಾಜಶೆಟ್ಟಿ, ಕುಮಾರ್ ಇನ್ನಿತರರಿದ್ದರು.

ಕಾಂಗ್ರೆಸ್ ಸರ್ಕಾರದ ಕಾಮಗಾರಿಗಳ ಉಸ್ತುವಾರಿಯಾಗಿದ್ದ ಹಾಲಿ ಶಾಸಕರು

ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಕೆ.ವಜ್ರೇಗೌಡ ವ್ಯಂಗ್ಯ



ತಿ.ನರಸೀಪುರ, ಡಿ.22– ಹಾಲಿ ಶಾಸಕರು ಕ್ಷೇತ್ರದಲ್ಲಿ ಸ್ವಂತ ಸಾಮರ್ಥ್ಯದ ಮೇಲೆ ಯಾವುದೇ ಅಭಿವೃದ್ಧಿ ಕೆಲಸ ಮಾಡಿಲ್ಲ. ಮಾಜಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಮಾಡಿದ್ದ ಅಭಿವೃದ್ಧಿ ಕಾಮಗಾರಿಗಳ ಉಸ್ತುವಾರಿ ನೋಡಿಕೊಂಡರು. ನಾಲ್ಕೂವರೆ ವರ್ಷ ಜನರ ಕೈಗೆ ಸಿಕ್ಕಿದ್ದು ಬಿಟ್ಟರೆ, ಯಾವುದೇ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸಲು ಸಾಧ್ಯವಾಗಿಲ್ಲ ಎಂದು ಪಿಕಾರ್ಡ್ ಬ್ಯಾಂಕ್ ನಿರ್ದೇಶಕ ಕೆ.ವಜ್ರೇಗೌಡ ಆರೋಪಿಸಿದರು.

ತಾಲೂಕಿನ ಸೋಮನಾಥಪುರದಲ್ಲಿ ನಡೆದ ಗ್ರಾಪಂ ಮಟ್ಟದ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ರಾಜ್ಯವಲ್ಲದೇ, ಮಹದೇವಪ್ಪ ಶಾಸಕರಾಗಿ ಪ್ರತಿನಿಧಿಸಿದ ತಿ.ನರಸೀಪುರ ಕ್ಷೇತ್ರ ಸಮಗ್ರ ಅಭಿವೃದ್ಧಿಯಾಯಿತು. ನಮ್ಮ ಅತಿಯಾದ ಆತ್ಮವಿಶ್ವಾಸ ಹಾಗೂ ವಿರೋಧಿಗಳ ಷಡ್ಯಂತರದಿಂದ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಸೋಲಾಯಿತು ಎಂದರು.

ಗ್ರಾಪಂ ಉಪಾಧ್ಯಕ್ಷ ಸಿದ್ದಪ್ಪ ಮಾತನಾಡಿ, ಕೇಂದ್ರ ಹಾಗೂ ರಾಜ್ಯದ ಡಬಲ್ ಇಂಜಿನ್ ಸರ್ಕಾರದಲ್ಲಿ ಬರೀ ಮಾತಿನ ಭರವಸೆಗಳೇ ಹೊರತು ಯಾವುದೇ ಅಭಿವೃದ್ಧಿಯಾಗಿಲ್ಲ. ದ್ವೇಷ ರಾಜಕಾರಣ ಅತಿಯಾದ ಪರಿಣಾಮ ಧರ್ಮ ಮತ್ತು ಜಾತಿ, ಜನರ ನಡುವೆ ಆಂತರಿಕ ಸಂಘರ್ಷ ಭುಗಿಲೇಳುತ್ತಿವೆ. ಸ್ವಂತ ಬಲದ ಮೇಲೆ ಜೆಡಿಎಸ್ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಹೀಗಾಗಿ ಈ ಭಾಗದ ಒಕ್ಕಲಿಗ ಸಮುದಾಯ ಸೇರಿದಂತೆ ಎಲ್ಲಾ ವರ್ಗದವರು ಕಾಂಗ್ರೆಸ್ ಬೆಂಬಲಿಸಿ ರಾಜ್ಯದಲ್ಲಿ ಮತ್ತು ಕ್ಷೇತ್ರದಲ್ಲಿ ಅಧಿಕಾರಕ್ಕೆ ತರಬೇಕು ಎಂದು ಮನವಿ ಮಾಡಿದರು.

ದಲಿತ ಯುವಕ ಸಂದೀಪ್ ಮಾತನಾಡಿದರು. ಸೋಮನಾಥಪುರ ಗ್ರಾಪಂ ವ್ಯಾಪ್ತಿಯ ವಿವಿಧ ಗ್ರಾಮಗಳ ಮುಖಂಡರು ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಸುನೀಲ್ ಬೋಸ್ ಅವರನ್ನು ಅದ್ದೂರಿಯಾಗಿ ಸನ್ಮಾನಿಸಿದರು.

ಕಾರ್ಯಕ್ರಮದಲ್ಲಿ ಎಪಿಎಂಸಿ ಮಾಜಿ ಅಧ್ಯಕ್ಷ ರಾಜಣ್ಣ, ನಿರ್ದೇಶಕ ಉಕ್ಕಲಗೆರೆ ಬಸವಣ್ಣ, ತಾಪಂ ಮಾಜಿ ಅಧ್ಯಕ್ಷ ಕೆಬ್ಬೆ ಶಿವಸ್ವಾಮಿ, ಮಾಜಿ ಸದಸ್ಯರಾದ ರಾಮಲಿಂಗಯ್ಯ, ಕುಕ್ಕೂರು ಗಣೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಚನ್ನಕೇಶವ, ಎಂ.ಡಿ.ಬಸವರಾಜು, ಮಹಿಳಾಧ್ಯಕ್ಷೆ ವೀಣಾ, ಗ್ರಾಪಂ ಉಪಾಧ್ಯಕ್ಷ ಸಿದ್ದಪ್ಪ, ಸದಸ್ಯರಾದ ಸದಸ್ಯ ಪುಟ್ಟಸ್ವಾಮಿ, ರಾಜಣ್ಣ, ಮಾಜಿ ಅಧ್ಯಕ್ಷ ರಂಗರಾಜಪುರ ಎಸ್. ರಾಜೇಶ್, ಕಗ್ಗಲೀಪುರ ಸಂದೀಪ್, ನಾಯಕರ ಸಂಘದ ಮಾಜಿ ಅಧ್ಯಕ್ಷ ಚಿನ್ನಸ್ವಾಮಿ, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಾಜು, ಎಸ್‌ಡಿಎಂಸಿ ಅಧ್ಯಕ್ಷ ರಂಗಸ್ವಾಮಿ, ಗುತ್ತಿಗೆದಾರರಾದ ಕೆ.ಎಂ.ಮಧುಕುಮಾರ್, ಸಿದ್ದರಾಮು, ಗ್ರಾಪಂ ಸದಸ್ಯ ಪುಟ್ಟಸ್ವಾಮಿ, ಮಾಜಿ ಸದಸ್ಯರಾದ ಸೋಮಣ್ಣ, ಮಹದೇವ, ಮುಖಂಡರಾದ ಕುಳ್ಳನಕೊಪ್ಪಲು ಸಿದ್ದೇಗೌಡ, ಲೋಕೇಶ್, ಜಯಕುಮಾರ್, ನಾಗೇಂದ್ರ ಜನಾರ್ಧನ್, ಡೇರಿ ಅಧ್ಯಕ್ಷ ರಂಗನಾಥ್, ನಾಗರಾಜು, ಶಶಿಕುಮಾರ್, ತಿಮ್ಮೇಗೌಡ, ಬೋರೇಗೌಡ, ನರಿಪುರ ಲಿಂಗಣ್ಣ, ಮಲ್ಲೇಶ್, ಎಲ್‌ಐಸಿ ರಾಮು, ಸುರೇಶ್, ಕೆ.ನಾಗೇಂದ್ರ, ನಟರಾಜು, ಕೃಷ್ಣ, ವಾಜೀದ್, ಕೆ.ಬಾಲು, ಚಿನ್ನಸ್ವಾಮಿ, ಗದ್ದೇಮೋಳೆ ಸಿದ್ದರಾಜು ಹಾಗೂ ಇನ್ನಿತರರು ಹಾಜರಿದ್ದರು.

> ರಾಜ್ಯದಲ್ಲಿ ಜನಪರ ಮತ್ತು ರೈತಪರ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದನ್ನು ತಪ್ಪಿಸಲು ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಜೊತೆ ಬಿಜೆಪಿ ಮತ್ತೆ ಮೈತ್ರಿ ಮಾಡಿಕೊಳ್ಳಲಿದೆ. ಈ ಬಗ್ಗೆ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ನಿರ್ಧಾರವಾಗಿದ್ದು, ಬಿಜೆಪಿ ಬಾರದಿರುವ ಕ್ಷೇತ್ರಗಳಲ್ಲಿ ಜೆಡಿಎಸ್ ಜೊತೆ ಹೊಂದಾಣಿಕೆ ಮಾಡಿಕೊಳ್ಳಲು ಷಡ್ಯಂತ್ರ ರೂಪಿಸಲಾಗಿದೆ. ಈ ಬಗ್ಗೆ ಮತದಾರರು ಜಾಗೃತರಾಗಿ, ನಿಮ್ಮದೇ ಕಾಂಗ್ರೆಸ್ ಸರ್ಕಾರವನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತರಬೇಕು.
> –ಡಾ.ಹೆಚ್.ಸಿ.ಮಹದೇವಪ್ಪ, ಮಾಜಿ ಸಚಿವ.

ಕೋಟೆಯಲ್ಲಿ ಜೀತ ಪದ್ಧತಿ ಅರಿವು ಕಾರ್ಯಾಗಾರ



ಹೆಚ್.ಡಿ.ಕೋಟೆ, ಡಿ.22– ಪಟ್ಟಣದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತ, ತಾಪಂ ಹಾಗೂ ಜೀವಿಕ ಸಂಸ್ಥೆ ಸಹಯೋಗದೊಂದಿಗೆ ಜೀತ ಪದ್ಧತಿ ಅರಿವು ಕಾರ್ಯಾಗಾರ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜೀವಿಕ ಸಂಸ್ಥೆ ಜಿಲ್ಲಾ ಸಂಚಾಲಕ ಬಸವರಾಜು, ಸಂವಿಧಾನದ ಆಶಯದಂತೆ ಜೀತ ಪದ್ಧತಿ ನಿರ್ಮೂಲನೆಯಾಗಬೇಕು. ಗಾಣದ ಎತ್ತಿನಂತೆ ದುಡಿಯುತ್ತಿರುವ ಜೀತದಾಳುಗಳು ಮುಖ್ಯವಾಹಿನಿಗೆ ಬರಬೇಕು. ಜೀತ ಪದ್ಧತಿ ನಿರ್ಮೂಲನೆ ಮಾಡುವಲ್ಲಿ ಮೈಸೂರು ಜಿಲ್ಲೆ ದಾಪುಗಾಲು ಹಾಕಿದೆ ಎಂದರು.

ಆರೋಗ್ಯಾಧಿಕಾರಿ ರವಿಕುಮಾರ್ ಮಾತನಾಡಿ, ಜೀತ ಪದ್ಧತಿ ನಿರ್ಮೂಲನೆಗೆ 1976ರಲ್ಲಿ ಕಾಯ್ದೆ ರೂಪಿಸಲಾಯಿತಾದರೂ ಇನ್ನೂ ಜೀತ ಪದ್ಧತಿ ಜೀವಂತವಾಗಿದೆ. ಆದ್ದರಿಂದ ಈ ಪದ್ಧತಿಯನ್ನು ಸಂಪೂರ್ಣವಾಗಿ ಕಿತ್ತೊಗೆಯಬೇಕು ಎಂದರು.

ಬಿಇಓ ಉದಯ ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ತಹಶೀಲ್ದಾರ್ ರತ್ನಾಂಬಿಕ, ಸಮಾಜ ಕಲ್ಯಾಣಾಧಿಕಾರಿ ರಾಮಸ್ವಾಮಿ, ಕೃಷಿ ಇಲಾಖೆ ರಂಗಸ್ವಾಮಿ, ಪುರಸಭೆ ಮುಖ್ಯಾಧಿಕಾರಿ ಸುರೇಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಆಶಾ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಶಶಿಕಲಾ, ರಂಗಸ್ವಾಮಿ, ಚಂದ್ರಶೇಖರ, ಮಹದೇವು, ಶಿವಣ್ಣ, ಎಲ್ಲಾ ಅಧಿಕಾರಿಗಳು, ಸಾರ್ವಜನಿಕರು ಹಾಜರಿದ್ದರು.




ಸರಗೂರಿನ ಪಡುವಲು ವಿರಕ್ತ ಮಠದಲ್ಲಿ ವೀರಶೈವ ಲಿಂಗಾಯಿತ ಸಮಾಗಮ ಗೆಳೆಯರ ಬಳಗದ 2023ನೇ ಸಾಲಿನ ಕ್ಯಾಲೆಂಡರ್ ಅನ್ನು ಶ್ರೀ ಮಹದೇವಸ್ವಾಮೀಜಿ ಬಿಡುಗಡೆಗೊಳಿಸಿದರು. ಈ ವೇಳೆ ಗೆಳೆಯರ ಬಳಗದ ಅಧ್ಯಕ್ಷ ಶ್ರೀಕಂಠಸ್ವಾಮಿ, ಕಾರ್ಯದರ್ಶಿ ಶಿವಕುಮಾರ್, ನಿರ್ದೇಶಕರಾದ ರಾಜಶೇಖರಸ್ವಾಮಿ, ಗಣಪತಿ, ಮಲ್ಲೇಶ್, ಸುರೇಶ್ ಕುಮಾರ್, ಕಿರಣ್, ಜಗದೀಶ್ ಇನ್ನಿತರರಿದ್ದರು.


ಡಿ.26, ನಂಜನಗೂಡಲ್ಲಿ ಪ್ರತಿಭಾ ಪುರಸ್ಕಾರ

ನಂಜನಗೂಡು, ಡಿ.22– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಕಚೇರಿಯಲ್ಲಿ ಡಿ.26ರಂದು ಸಂಜೆ 4 ಗಂಟೆಗೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದೆ ಎಂದು ಸಂಘದ ಅಧ್ಯಕ್ಷ ರಂಗಸ್ವಾಮಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಗಂಟಲು ಕೆರೆತ, ನೆಗಡಿ, ತಲೆನೋವು ಸಣ್ಣಪುಟ್ಟ ಸಮಸ್ಯೆ ನಿರ್ಲಕ್ಷಿಸಿದರೆ ಅಪಾಯ ಹುಷಾರ್...!

ವಾತಾವರಣದಲ್ಲಿನ ವ್ಯತ್ಯಾಸವೂ ರೋಗ ನಿರೋಧಕ ಶಕ್ತಿ ಕುಗ್ಗಿಸಬಹುದು!!





ಮೈಸೂರು,ಡಿ.22(ಎಸ್‌ಬಿಡಿ)–ಚಳಿಗಾಲದಲ್ಲಿ ಗಂಟಲು ಕೆರೆತ, ನೆಗಡಿ, ತಲೆನೋವು ಇನ್ನಿತರ ಸಾಮಾನ್ಯ ಸಮಸ್ಯೆಗಳನ್ನು ನಿರ್ಲಕ್ಷಿಸಿದರೆ ಅನಾರೋಗ್ಯ ಬಿಗಡಾಯಿಸಬಹುದು. ಹಾಗಾಗಿ ಸರಳ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದು ಅತ್ಯವಶ್ಯ. ವಾತಾವರಣ ಬದಲಾವಣೆಯಿಂದ ದೇಹ ಸ್ಥಿತಿಯಲ್ಲೂ ವ್ಯತ್ಯಾಸವಾಗಿ ಅನೇಕ ಆರೋಗ್ಯ ಸಮಸ್ಯೆಗಳು ಬಾಧಿಸುತ್ತವೆ. ಅದರಲ್ಲೂ ಮೂಗು ಹಾಗೂ ಗಂಟಲಿಗೆ ಸಂಬಂಧಿಸಿದ ಸಮಸ್ಯೆಗಳು ಹೆಚ್ಚಾಗಿರುತ್ತವೆ. ಇವೆಲ್ಲಾ ಸಹಜ ಎಂದೆಣಿಸಿ ಸೂಕ್ತ ಚಿಕಿತ್ಸೆ ಪಡೆಯದಿದ್ದರೆ ಅನಾರೋಗ್ಯ ಮತ್ತಷ್ಟು ಹದಗೆಡುತ್ತದೆ. ಅಲ್ಲದೆ ಒಬ್ಬರಿಂದ ಮನೆಮಂದಿಗೆಲ್ಲಾ ಸೋಂಕು ಹರಡುವ ಸಾಧ್ಯತೆ ಇದೆ.

ಈ ಸಂಬಂಧ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಸ್.ಚಿದಂಬರ ಪ್ರತಿಕ್ರಿಯಿಸಿ, ಎಲ್ಲಾ ಋತುಮಾನದಲ್ಲೂ ಸಾಂಕ್ರಮಿಕ ರೋಗಗಳು ಬಾಧಿಸುತ್ತವೆ. ಆದರೆ ಚಳಿಗಾಲದಲ್ಲಿ ಗಾಳಿ, ಎಂಜಲು ಹಾಗೂ ನೀರಿನ ಮೂಲಕ ಹೆಚ್ಚು ಸೋಂಕು ಹರಡುವ ಸಾಧ್ಯತೆ ಇರುತ್ತದೆ. ವಾತಾವರಣದ ತಾಪಮಾನ ಕ್ರಮೇಣ ಇಳಿಕೆಯಾದರೆ ಅದಕ್ಕೆ ದೇಹವೂ ಒಗ್ಗುತ್ತದೆ. ಆದರೆ 23–24 ಡಿಗ್ರಿಯಿಂದ 16–18 ಡಿಗ್ರಿಗೆ ಏಕಾಏಕಿ ಇಳಿಕೆಯಾಗುವುದರಿಂದ ಸಾಕಷ್ಟು ಪರಿಣಾಮಗಳಾಗುತ್ತವೆ ಎಂದು ತಿಳಿಸಿದರು.

ಚಳಿಗಾಲದಲ್ಲಿ ಮಂಜು, ಶೀತಗಾಳಿ ಜೊತೆಗೆ ಕೆಲವು ಸಮಯದಲ್ಲಿ ಮಳೆ ಬೀಳುವುದರಿಂದ ವಾತಾವರಣದ ತಾಪಮಾನ ಇದ್ದಕ್ಕಿದ್ದಂತೆ ಕ್ಷೀಣಿಸುತ್ತದೆ. ಪರಿಣಾಮ ನಮ್ಮ ದೇಹದ ರಕ್ಷಣಾ ಕಾರ್ಯವಿಧಾನ ಅರ್ಥಾತ್ ರೋಗ ನಿರೋಧಕ ಶಕ್ತಿಯಲ್ಲಿ ವ್ಯತ್ಯಾಸವಾಗುವುದರಿಂದ ವೈರಲ್ ಇನ್ಫೆಕ್ಷನ್ ವ್ಯಾಪಿಸುತ್ತದೆ. ಅದರಲ್ಲೂ ಉಸಿರಾಟ ಸಂಬಂಧಿತ ಸೋಂಕುಗಳು ಹೆಚ್ಚಾಗಿರುತ್ತದೆ ಎಂದರು.

ಗಾಳಿಯಿಂದ ಅಥವಾ ಎಂಜಲಿನಿಂದ ಸೋಂಕು ಹರಡುತ್ತವೆ. ಮಕ್ಕಳು ಹಾಗೂ ವಯಸ್ಕರಿಗೆ ಗಂಟಲು ಕೆರೆತ, ನೆಗಡಿ ಕಾಣಿಸಿಕೊಂಡು ನಂತರದಲ್ಲಿ ಸಣ್ಣದಾಗಿ ತಲೆನೋವು ಹಾಗೂ ಜ್ವರ ಬಾಧಿಸುತ್ತದೆ. ಅದರಲ್ಲೂ ಸಂಜೆ ವೇಳೆಯಲ್ಲಿ ಜ್ವರ ಮತ್ತು ಕೆಮ್ಮು ಹೆಚ್ಚಾಗುತ್ತದೆ. ಇವೆಲ್ಲಾ ಮೇಲ್ಭಾಗದ ಶ್ವಾಸೇಂದ್ರಿಯ ಪ್ರದೇಶದ ಸೋಂಕುಗಳಾಗಿದ್ದು, ಒಬ್ಬರಿಗೆ ಬಂದರೆ ಮನೆಮಂದಿಗೆಲ್ಲಾ ಬಹುಬೇಗ ಹರಡುತ್ತದೆ. ಕೆಮ್ಮುವಾಗ ಸುರಕ್ಷತಾ ಕ್ರಮ ಅನುಸರಿಸದಿದ್ದರೆ ಮತ್ತು ನಂತರದಲ್ಲಿ ಸರಿಯಾಗಿ ಕೈಯನ್ನು ಸ್ವಚ್ಛ ಮಾಡಿಕೊಳ್ಳದೆ ವಸ್ತುಗಳನ್ನು ಮುಟ್ಟುವುದರಿಂದ ಸೋಂಕು ಹರಡುತ್ತದೆ ಎಂದು ಹೇಳಿದರು.

ಸರಳ ಕ್ರಮ ಅನುಸರಿಸಿ



ಕೆಮ್ಮುವಾಗ ನ್ಯಾಪ್ಕಿನ್ ಅಥವಾ ಟಿಶ್ಯೂ ಪೇಪರ್ ಅನ್ನು ಮೂಗು ಬಾಯಿಗೆ ಮುಚ್ಚುವಂತೆ ಅಡ್ಡ ಇಟ್ಟುಕೊಂಡು, ಬಳಸಿದ ನಂತರ ಅದನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಬೇಕು. ನಂತರ ಕೈಗೆ ಸೋಪ್ ಹಚ್ಚಿ 20–30 ಸೆಕೆಂಡ್ ತೊಳೆಯುವ ಅಭ್ಯಾಸ ರೂಢಿಸಿಕೊಳ್ಳಬೇಕು. ನೆಗಡಿ, ಕೆಮ್ಮು ಇರುವವರು ಟವೆಲ್, ಬೆಡ್‌ಶೀಟ್ ಇನ್ನಿತರ ವಸ್ತುಗಳನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳಬೇಕು. ಬೆಚ್ಚಗಿನ ನೀರು, ಬಿಸಿ ಆಹಾರ ಸೇವಿಸಬೇಕು. ರೆಫ್ರಿಜಿರೇಟರ್‌ನಲ್ಲಿಟ್ಟ ವಸ್ತುಗಳನ್ನು ಕೂಡಲೇ ಬಳಸಬಾರದು. ಇಂತಹ ಸರಳ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿದರೆ ಸೋಂಕು ಒಬ್ಬರಿಂದೊಬ್ಬರಿಗೆ ಹರಡದಂತೆ ನಿಯಂತ್ರಿಸಬಹುದು. **–ಡಾ.ಚಿದಂಬರ**

ನಿರ್ಲಕ್ಷ್ಯ ಮಾಡಬಾರದು: ಮೇಲ್ಭಾಗದ ಶ್ವಾಸೇಂದ್ರಿಯ ಸೋಂಕುಗಳು ಮಾರಣಾಂತಿಕವಲ್ಲ ಎಂದು ಉದಾಸೀನ ಮಾಡಿದರೆ ಗಂಭೀರ ಪರಿಣಾಮ ಎದುರಿಸಬೇಕಾಗುತ್ತದೆ. ಸಾಮಾನ್ಯ ಸೋಂಕುಗಳ ಜೊತೆಗೆ ಕೋವಿಡ್, ಹೆಚ್1ಎನ್1, ಬೇರೆ ಯಾವುದೇ ಶೀತಜ್ವರ ಸೋಂಕುಗಳು ಇರುವ ಸಾಧ್ಯತೆಯೂ ಇರುತ್ತದೆ. ಗಂಟಲು ಕೆರೆತ, ನೆಗಡಿ, ಕೆಮ್ಮು, ಜ್ವರ ಕಾಣಿಸಿಕೊಂಡರೆ ತಕ್ಷಣ ಹತ್ತಿರದ ವೈದ್ಯರ ಬಳಿ ಹೋಗಿ ಪರೀಕ್ಷೆ ಮಾಡಿಸಿಕೊಂಡು ಸೂಕ್ತ ಚಿಕಿತ್ಸೆ ಪಡೆಯುವುದು ಒಳ್ಳೆಯದು ಎಂದು ಸಲಹೆ ನೀಡಿದ್ದಾರೆ.

ಮಾಸ್ಕ್ ಬಳಸಿ: ಕೊರೊನಾ ಸೋಂಕು ಹೆಚ್ಚಾಗಿದ್ದ ಸಂದರ್ಭದಲ್ಲಿ ಕಡ್ಡಾಯವಾಗಿ ಧರಿಸುತ್ತಿದ್ದ ಮಾಸ್ಕ್, ಚಳಿಗಾಲದಲ್ಲೂ ರಕ್ಷಣಾತ್ಮಕ ಸಾಧನವಾಗಲಿದೆ. ಅದರಲ್ಲೂ ಮುಂಜಾನೆ ವಾಕಿಂಗ್ ಮಾಡುವವರು, ಸಂಜೆ ತಡವಾಗಿ ಮನೆಗೆ ಬರುವವರು ಹೀಗೆ ಮಂಜು ಬೀಳೋ ಸಮಯದಲ್ಲಿ ಹೆಚ್ಚು ಓಡಾಡುವವರಿಗೆ ತುಂಬಾ ಅವಶ್ಯ. ಮಾಸ್ಕ್ ಧರಿಸುವುದರಿಂದ ಶೀತಗಾಳಿ ಸೇವನೆಯನ್ನು ನಿಯಂತ್ರಿಸಬಹುದು. ಮಂಜಿನ ಹನಿಗಳು ನೇರವಾಗಿ ತಲೆಯ ಮೇಲೆ ಬೀಳುವುದರಿಂದ ತಲೆನೋವು, ನೆಗಡಿ, ಜ್ವರ ಬರುವ ಸಾಧ್ಯತೆ ಹೆಚ್ಚಾಗಿರುತ್ತದೆ. ಹಾಗಾಗಿ ಕ್ಯಾಪ್, ಕಿವಿಯನ್ನು ಬೆಚ್ಚಗಿಡುವ ವಸ್ತುಗಳನ್ನು ಧರಿಸುವುದು ತುಂಬಾ ಒಳ್ಳೆಯದು. ಚಳಿಗಾಲದಲ್ಲಿ ಬೆಚ್ಚಗಿರುವ ಬಟ್ಟೆ, ಸ್ವೆಟರ್ ಬಳಕೆ ಮಾಡಬೇಕು ಎಂದು ಡಾ.ಚಿದಂಬರ ಕಿವಿಮಾತು ಹೇಳಿದ್ದಾರೆ.

ಶಿಕ್ಷಣದ ಜೊತೆಗೆ ಸಾಮಾಜಿಕ ಪ್ರಜ್ಞೆ ಬೆಳೆಸಿಕೊಳ್ಳಿ

ವಿದ್ಯಾರ್ಥಿಗಳಿಗೆ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ಸ್ವಾಮೀಜಿ ಸಲಹೆ



ಮೈಸೂರು,ಡಿ.22(ಜಿಎ)– ವಿದ್ಯಾರ್ಥಿಗಳು ಶೈಕ್ಷಣಿಕ ಚಟುವಟಿಕೆಯೊಂದಿಗೆ ಸಾಮಾಜಿಕ ಪ್ರಜ್ಞೆ ಬೆಳೆಸಿಕೊಳ್ಳಬೇಕು ಎಂದು ಉಡುಪಿಯ ಶ್ರೀ ಪೇಜಾವರ ಅಧೋಕ್ಷಜ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಶ್ರೀಪಾದಂಗಳವರು ಹೇಳಿದರು.

ಮೈಸೂರಿನ ವಿಜಯ ವಿಠ್ಠಲ ವಿದ್ಯಾಶಾಲೆಯ ವಾರ್ಷಿಕೋತ್ಸವವನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವತೀರ್ಥರು ಮೈಸೂರಿನಲ್ಲಿ ನಿರ್ಮಿಸಿರುವ ಸಂಸ್ಥೆ ಹೆಮ್ಮೆಯ ಸಂಸ್ಥೆಯಾಗಿ ಬೆಳೆಯುತ್ತಿದ್ದು, ಅದಕ್ಕೆ ವಿದ್ಯಾರ್ಥಿಗಳ ಪರಿಶ್ರಮ, ಶಿಕ್ಷಕ ವೃಂದ, ಸಿಬ್ಬಂದಿ ಕಾರಣವಾಗಿದ್ದಾರೆ ಎಂದರು.


ವಿದ್ಯಾಸಂಸ್ಥೆಯಲ್ಲಿ ಪ್ರತಿವರ್ಷ ಹೊಸತನವನ್ನು ಕಾಣುತ್ತಿದ್ದೇನೆ. ಶಾಲೆಯಲ್ಲಿ ಎಲ್ಲಾ ರೀತಿಯ ಸೌಕರ್ಯವನ್ನು ನೀಡಲಾಗಿದ್ದು, ಶಿಕ್ಷಣವನ್ನು ಮತ್ತಷ್ಟು ಹೆಚ್ಚುಗೊಳಿಸಿ ಎಲ್ಲಾ ವಿದ್ಯಾರ್ಥಿಗಳು ರ‍್ಯಾಂಕ್ ಪಡೆಯಬೇಕು ಎಂದು ಆಶಿಸುತ್ತೇನೆ ಎಂದರು.

ಈ ವೇಳೆ ಉದ್ಯಮಿ ಆರ್.ಗುರು ಮಾತನಾಡಿ, ಇಲ್ಲಿನ ವಿದ್ಯಾರ್ಥಿಗಳು ಕಳೆದ 4 ದಶಕಗಳಿಂದ ವಿದ್ಯಾಭ್ಯಾಸದ ಜೊತೆಗೆ ನಮ್ಮ ಭಾರತೀಯ ಸಂಸ್ಕೃತಿ ಹಾಗೂ ಶಿಸ್ತು, ವಿನಮ್ರತೆ ಕಲಿಯುತ್ತಿದ್ದು, ಇದು ನಮ್ಮ ದೇಶ ಮತ್ತು ನಗರಕ್ಕೆ ಶ್ರೇಷ್ಠವಾಗಲಿದೆ. ಇದರೊಟ್ಟಿಗೆ ಎನ್‌ಇಪಿಯನ್ನು ಈಗಾಗಲೇ ಅಳವಡಿಸಿಕೊಂಡಿರುವುದರಿಂದ ಭವಿಷ್ಯ ಸುಭದ್ರವಾಗಲಿದೆ ಎಂದರು.

ನಂತರ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಉತ್ತಮ ಶ್ರೇಣಿಯೊಂದಿಗೆ ತೇರ್ಗಡೆ ಹೊಂದಿದ್ದ 20 ವಿದ್ಯಾರ್ಥಿಗಳಿಗೆ ಚಿನ್ನದ ಮೆಡಲ್ ನೀಡಿ, ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಉದ್ಯಮಿ ಶ್ರೀಕಾಂತ್‌ದಾಸ್, ಪ್ರಾಂಶುಪಾಲರಾದ ಬಿ.ಆರ್.ಮಂಗಳಾ, ಗೌರವ ಕಾರ್ಯದರ್ಶಿ ಆರ್.ವಾಸುದೇವಭಟ್ ಸೇರಿದಂತೆ ವಿಜಯ ವಿಠಲ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಸಂಘಟಿತ ಕಾರ್ಮಿಕರ ಸೌಲಭ್ಯ ಸಂಬಂಧ ರೈಲ್ವೆ ಹಮಾಲಿ ಕಾರ್ಮಿಕರಿಗೆ ಮನವರಿಕೆ

ಮೈಸೂರು, ಡಿ.22– ಅಸಂಘಟಿತ ಕಾರ್ಮಿಕರಿಗೆ ಸರ್ಕಾರ ಕಲ್ಪಿಸಿರುವ ವಿವಿಧ ಸೌಲಭ್ಯಗಳ ಬಗ್ಗೆ ಮೈಸೂರು ರೈಲ್ವೆ ನಿಲ್ದಾಣದ ಹಮಾಲಿ ಕಾರ್ಮಿಕರಿಗೆ ಬಿಜೆಪಿ ಮುಖಂಡರು ಮಾಹಿತಿ ನೀಡಿದರು. ಬಿಜೆಪಿ ಅಸಂಘಟಿತ ಕಾರ್ಮಿಕ ಪ್ರಕೋಷ್ಠದ ರಾಜ್ಯ ಸಂಚಾಲಕರಾದ ಉಮೇಶ್ ಮಾತನಾಡಿ, ಅಸಂಘಟಿತ ಕಾರ್ಮಿಕರ ಮಕ್ಕಳಿಗೆ ವಿದ್ಯಾರ್ಥಿವೇತನ, 2 ಲಕ್ಷ ವಿಮೆ, ಕೇಂದ್ರ ಸರ್ಕಾರದ 10 ಲಕ್ಷ ಆರೋಗ್ಯ ಮತ್ತು ಅಪಘಾತ ವಿಮೆ, ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ ಧನ್ ಪಿಂಚಣಿ ಯೋಜನೆ, ಯಶಸ್ವಿನಿ ಯೋಜನೆ, ಆಯುಷ್ಮಾನ್ ಕಾರ್ಡ್, ಕಾರ್ಮಿಕ ಸನ್ಮಾನ ದಿನಾಚರಣೆ, ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಹೆಚ್ಚಳ ಸೇರಿದಂತೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಿಧ ಯೋಜನೆಗಳ ಬಗ್ಗೆ ಮಾಹಿತಿ ಹಾಗೂ ಸೌಲಭ್ಯ ಪಡೆಯುವ ಬಗ್ಗೆ ಮಾರ್ಗದರ್ಶನ ನೀಡಿದರು. ಈ ವೇಳೆ ವಕೀಲ ಶಿವರಾಜ್ ಹಾಜರಿದ್ದರು.



ಮೈಸೂರಿನ ಸಿದ್ಧಾರ್ಥನಗರ ವಿವಿಧೋದ್ದೇಶ ಸಹಕಾರ ಸಂಘದ ವತಿಯಿಂದ ನೂತನ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಅಧ್ಯಕ್ಷ ಎಸ್.ಪಿ.ಮಹೇಶ್(ಪಾಪು), ಉಪಾಧ್ಯಕ್ಷ ಜಿ.ನಾಗರಾಜು, ನಿರ್ದೇಶಕರಾದ ಎಸ್.ಜೆ.ರಾಧಾಮಣಿ, ಬಿ.ಎಲ್.ಅರುಣಾಕ್ಷಿ, ಕೆ.ವಿ.ಮಲ್ಲರಾಜೇಅರಸ್, ಎಂ.ಸೋಮಶೇಖರ್ ಚಿನ್ನ, ಎಂ.ಆರ್.ನಾಗರಾಜು, ಡಾ.ಶಿವಕುಮಾರ್, ರಾಮಚಂದ್ರ, ಎಂ.ಯೋಗೀಶ್, ಕಾರ್ಯದರ್ಶಿ ಬಿ.ಎಲ್.ರಾಮಲಿಂಗೇಗೌಡ, ಕೃಷ್ಣೇಗೌಡ ಉಪಸ್ಥಿತರಿದ್ದರು.

ಡಿ.30ರಂದು ಜನಪದ ಕಲೆಗಳ ತರಬೇತಿ

ಮೈಸೂರು,ಡಿ.22–ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ಡಿ.30ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಯುವಕ ಸಂಘದ ಯುವಕ, ಯುವತಿಯರಿಗೆ ಹಾಗೂ ಕಾಲೇಜು ಯುವಕ, ಯುವತಿಯರಿಗೆ 2022–23ನೇ ಸಾಲಿನ ಇಲಾಖಾ ಕಾರ್ಯಕ್ರಮವಾದ ಸಾಂಸ್ಕೃತಿಕ ಮೇಳ, ಜನಪದ ಕಲೆಗಳ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಕಾರ್ಯಕ್ರಮದಲ್ಲಿ ಭಾಗವಹಿಸಲಿಚ್ಛಿಸುವ ಯುವಕ ಸಂಘದ ಯುವಕ, ಯುವತಿಯರು, ಪದಾಧಿಕಾರಿಗಳು ಹಾಗೂ ಕಾಲೇಜಿನ ಯುವಕ, ಯುವತಿಯರು ಬೆಳಗ್ಗೆ 11ಕ್ಕೆ ಕ್ರೀಡಾಂಗಣದಲ್ಲಿ ವರದಿ ಮಾಡಿಕೊಳ್ಳಬೇಕು. ಕಾರ್ಯಕ್ರಮದಲ್ಲಿ ಭಾಗವಹಿಸುವವರಿಗೆ ಪ್ರಯಾಣ ಭತ್ಯೆ, ದಿನ ಭತ್ಯೆ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.


ಗೃಹಿಣಿ ನಾಪತ್ತೆ

ಮೈಸೂರು,ಡಿ.22–ವಿವಾಹಿತ ಮಹಿಳೆಯೊಬ್ಬರು ನಾಪತ್ತೆಯಾಗಿರುವ ಬಗ್ಗೆ ಹೆಬ್ಬಾಳ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಠಾಣೆ ವ್ಯಾಪ್ತಿಯ ನಿವಾಸಿ ಯತೀಶ್ ನಾಣಯ್ಯ ಅವರ ಪತ್ನಿ ಅರ್ಚನ (21) ಡಿ.18ರಂದು ಮನೆಯಿಂದ ಹೊರಗೆ ಹೋದವರು ಇದುವರೆಗೂ ಮನೆಗೆ ಹಿಂತಿರುಗಿಲ್ಲ ಎಂದು ದೂರಿನಲ್ಲಿ ತಿಳಿಸಲಾಗಿದೆ. ಇವರ ಬಗ್ಗೆ ಸುಳಿವು ದೊರೆತವರು ದೂ: 0821––2418318, 2418339 ಮೂಲಕ ತಿಳಿಸಲು ಪ್ರಕಟಣೆ ಕೋರಿದೆ

ಮೈಸೂರು ಮಿತ್ರ 43 — ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

7ನೇ ವರ್ಷದ ಸವಿನೆನಪು




ನೀನು ನಮ್ಮನ್ನಗಲಿ 7 ವರ್ಷ ಕಳೆದರು ಸದಾ ನಿನ್ನ ನೆನಪಿನಲ್ಲಿರುವ
ದುಃಖತಪ್ತರು: ತಂದೆ: ಮಹೇಂದ್ರ, ತಾಯಿ: ರಾಧ, ಅಕ್ಕ, ಭಾವ ಮತ್ತು ಬಂಧು ಮಿತ್ರರು
ಹೆಚ್.ಎಸ್.ರೋಷನ್
ಜನನ: 11/06/1998 ಮರಣ: 23/12/2015

9ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ 9 ವರ್ಷ ಕಳೆದರು ಸದಾ ನಿಮ್ಮ ಆಶೀರ್ವಾದದಲ್ಲಿ ಬದುಕುತ್ತಿರುವ ಕುಟುಂಬವರ್ಗ
ಶ್ರೀ.ಎನ್.ತಮ್ಮಣ್ಣ

3ನೇ ವರ್ಷದ ಸವಿನೆನಪು



ನಾಗರಾಜು.S (ರೈಲ್ವೆ)
ದು:ಖತಪ್ತರು: ಪತ್ನಿ: ಶ್ರೀಮತಿ ಪಿ.ನಿರ್ಮಲ ಮತ್ತು ಕುಟುಂಬವರ್ಗದವರು

9ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ 9 ವರ್ಷ ಕಳೆದರೂ ನೀವು ನಮಗೆ ತೋರಿದ ಪ್ರೀತಿ, ಧ್ಯೇಯ, ಆದರ್ಶ, ಸದ್ಗುಣಗಳು ನಮ್ಮ ಮನದಲ್ಲಿ ಅಚ್ಚಳಿಯದೇ ಉಳಿದಿದೆ. ಸದಾ ನಿಮ್ಮ ನೆನಪಿನಲ್ಲಿರುವ,
ದುಃಖತಪ್ತರು: ಕೆ. ಮೀನಮ್ಮ, ಮಗ, ಸೊಸೆ, ಮಗಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು
ವೈ.ಕೆ. ನರಸಿಂಹಯ್ಯ



ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಇವರು ದಿನಾಂಕ 13.12.2022 ಮಂಗಳವಾರ ದೈವಾಧಿನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 23.12.2022 ಶುಕ್ರವಾರ ಪೂಜೆ ಸಂಜೆ 5 ಗಂಟೆಗೆ ನಮ್ಮ ಸ್ವಗೃಹ #243, 5ನೇ ಮುಖ್ಯ ರಸ್ತೆ, 12ನೇ ಕ್ರಾಸ್, 4ನೇ ಹಂತ, ಜಿ.ಕೆ.ಬಡಾವಣೆ, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಕುಟುಂಬವರ್ಗದವರು
ಶ್ರೀ ಸಣ್ಣಯ್ಯ (ಆಂಜೀ)
ಭೋಜನ: ಸಂಜೆ 7.00 ಗಂಟೆಗೆ, ಸ್ಥಳ: ಜೀರೇಶ್ವರ ಸಮುದಾಯ ಭವನ, ರಾಮಮಂದಿರ ರಸ್ತೆ, ತೊಣಚಿಕೊಪ್ಪಲು, ಮೈಸೂರು


ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ



ಇವರು ದಿನಾಂಕ: 14.12.2022 ಬುಧವಾರ ಶಿವೈಕ್ಯರಾದರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ: 24.12.2022 ಶನಿವಾರ ಬೆಳಗ್ಗೆ 10.00 ಗಂಟೆಗೆ ಮಲ್ಲನಮೂಲೆ ಮಠದ ಶ್ರೀ ಚನ್ನಬಸವೇಶ್ವರ ಶ್ರೀಗಳ ದಿವ್ಯಪಾದ ಪೂಜೆಯನ್ನು ಸ್ವಗೃಹದಲ್ಲಿ ಹಾಗೂ ಮಧ್ಯಾಹ್ನ 12.00 ಗಂಟೆಗೆ ಹೆಜ್ಜಿಗೆ ಗ್ರಾಮದಲ್ಲಿ ಕೈಲಾಸ ಶಿವಗಣಾರಾಧನೆಯನ್ನು ಏರ್ಪಡಿಸಿರುವುದರಿಂದ ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಿಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಶ್ರೀಗಳವರ ಆಶೀರ್ವಾದ ಪಡೆಯಬೇಕಾಗಿ ವಿನಂತಿ.
ಶ್ರೀಯುತ ಎಲ್.ಎನ್ ಶಿವಯೋಗಿ
ದುಃಖತಪ್ತರು: ಮೃತರ ತಾಯಿ ಶ್ರೀಮತಿ ಪಾರ್ವತಮ್ಮ, ಮೃತರ ಪತ್ನಿ ಶ್ರೀಮತಿ ಸುಜಾತ, ಮಕ್ಕಳು ಅಳಿಯ ಕುಟುಂಬವರ್ಗದವರು ಹಾಗೂ ಹೆಜ್ಜಿಗೆ ಗ್ರಾಮಸ್ಥರು ಮತ್ತು ನಂಜನಗೂಡು ಪಟ್ಟಣ ನಿವಾಸಿಗಳು.



ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಹೆಚ್.ಎಂ.ಜವರೇಗೌಡರು
(ನಿವೃತ್ತ ಶಿಕ್ಷಕರು)

ಇವರು ದಿನಾಂಕ: 13.12.2022 ಮಂಗಳವಾರ ದೈವಾದೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿನಾಂಕ: 23.12.2022 ಶುಕ್ರವಾರ ಮಧ್ಯಾಹ್ನ 12.00 ಗಂಟೆಗೆ ಮೃತರ ಸ್ವಗೃಹ ಹುಯಿಲಾಳು ಗ್ರಾಮ, ಇಲವಾಲ ಹೋಬಳಿ, ಮೈಸೂರು ತಾಲ್ಲೂಕು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ದುಃಖತಪ್ತರು: ಶ್ರೀಮತಿ ನಳಿನ ಮತ್ತು ಶ್ರೀ ಜಯಕುಮಾರ್, ಶ್ರೀಮತಿ ಪ್ರತಿಭಾ ಮತ್ತು ಶ್ರೀ ರವಿಶಂಕರ್, ಶ್ರೀಮತಿ ನಳಿನಿ ಮತ್ತು ಹೆಚ್.ಜೆ.ರಾಘವೇಂದ್ರ
(ಕರ್ನಾಟಕ ರಾಜ್ಯ ಅನುಮತಿ ಪಡೆದ ವಿದ್ಯುತ್ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷರು, ಮೈಸೂರು ಜಿಲ್ಲಾ ಹಾಗೂ ಮಾಜಿ ಗ್ರಾಪಂ ಉಪಾಧ್ಯಕ್ಷರು)
ಮಗಳು ಅಳಿಯಂದಿರಾದ ಶ್ರೀಮತಿ ಮಾಲತಿ ಮತ್ತು ಶ್ರೀ ನಾಗರಾಜು, ಶ್ರೀಮತಿ ಮಂಜುಳ ಮತ್ತು ಶ್ರೀ ನಾಗೇಂದ್ರ ಶ್ರೀಮತಿ ಪದ್ಮಿನಿ ಮತ್ತು ಶ್ರೀ ಜಯರಾಮು, ಮೊಮ್ಮಕ್ಕಳು, ಕುಟುಂಬವರ್ಗ ಹಾಗೂ ಹುಯಿಲಾಳು ಗ್ರಾಮಸ್ಥರು

PUBLIC NOTICE

The Public at large is hereby notified that my client is intending to purchase the below mentioned Schedule Property for a valuable consideration from its owner's **Smt. A.N.Satry Shardadevi, Sri B.L.Nagendra Prasad and Sri Narendra Prasad** all are residing at No. 29/A, 9th Main Road, Near Food World, RMV Extension, Sadashiva Nagar, Bangalore North, Bangalore-560080 (hereinafter referred as "Owner's"). The Owner's claim that, they are right is free from all encumbrances, charges, claims etc., of whatsoever nature and that, they have a clear and marketable title in respect of the Schedule Property. All or any persons including any Banks, Financial Institutions or any other party or person, having any valid and legal claim, right, title, demand or interest by virtue of any sale, gift, lease, tenancy, licence, exchange, partition, mortgage, charge, lein, inheritance, succession, trust, maintenance, possession, easement, power of attorney, agreement, lispendence, stay order, attachment, decree, specific performance or otherwise or any other right of whatsoever nature are required / called upon to convey their objection/s in writing at the address mentioned below during the working hours, with the documentary proof/s in original within 15 (Fifteen) days from issuance of this public notice. Failing which it will be presumed by my client that (a) there are no Power of Attorney holders, (b) there are no claim/s, lien/s, objection/s, mortgages, charges, etc., (c) if any, the same is / are deemed to have been waived and abandoned in respect of the Schedule Property and my client will be obliged to proceed with the execution and Registration of the Absolute Sale Deed as if there are no valid claim/s, lein/s, objection/s, mortgages, charge/s, etc., subsisting against the Schedule Property.

SCHEDULE

All that piece and parcel of the Land bearing Survey No. 9/1, measuring 29 Guntas, dry land situate at Srirampura Village, Kasaba Hobli, Mysore bounded on the; **East by :** Road; **West by :** Land of Siddappa; **North by :** Land of Maliyaiah & **South by :** Passage (galli).

Date: 18.11.2022
Place: Mysuru

Sd/- Mohana .C, Advocate, KAR/1640/98, 1164, 1st Floor, Nnanjundeshwara complex, Narayanashastri Road, Devaraj Mohalla, off D. Devearaje Urs Road, Mysuru-570 004. **Mob: 94484-48407**